# ಪ್ರಸಾದ

ಮಾಸಿಕ

ಫೆಬ್ರವರಿ 2025

ಸಂಪುಟ 40 ಸಂಚಿಕೆ 2




ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಪ್ರಯಾಗ್‌ರಾಜ್ ಮಹಾಕುಂಭಮೇಳದಲ್ಲಿ ಪರಮಾರ್ಥ ನಿಕೇತನ ಆಶ್ರಮದಲ್ಲಿ ಶ್ರೀ ಚಿದಾನಂದ ಸರಸ್ವತಿಯವರು, ಪರಮಪೂಜ್ಯ ಜಗದ್ಗುರುಗಳು, ವಿವಿಧ ಮಠಾಧೀಶರುಗಳು ಹಾಗೂ ಇತರರಿದ್ದಾರೆ (3 ಫೆಬ್ರವರಿ 2025)

# ಪ್ರಸಾದ

**ಸಂಪುಟ 40 : ಸಂಚಿಕೆ 2** **ಫೆಬ್ರವರಿ 2025**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 223



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

ಮುಖಪುಟ ಚಿತ್ರ

ತಿರುಮಕೂಡಲು ನರಸೀಪುರದಲ್ಲಿ ನಡೆದ 13ನೇ ಕುಂಭಮೇಳದಲ್ಲಿ ಪರಮಪೂಜ್ಯ ಜಗದ್ಗುರುಗಳು ಹಾಗೂ ಕೈಲಾಸ ಆಶ್ರಮ, ಆದಿಚುಂಚನಗಿರಿ, ಹರಿಹರಪುರ, ಅವದೂತ ದತ್ತ ಪೀಠದ ಪೂಜ್ಯರುಗಳ ದಿವ್ಯ ಸಾನ್ನಿಧ್ಯದಲ್ಲಿ ಧಾರ್ಮಿಕ ಸಭೆಯನ್ನು ಉದ್ಘಾಟಿಸಲಾಯಿತು. ರಾಮಕೃಷ್ಣ ಆಶ್ರಮ, ಮರಳೆಗವಿಮಠ ಮತ್ತು ಓಂಕಾರಾಶ್ರಮ ಶ್ರೀಗಳಿದ್ದಾರೆ (10 ಫೆಬ್ರವರಿ 2025)

**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಆಯ–ಅವ್ಯಯ 10
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಪ್ರಸನ್ನಚಿತ್ತರು 15
ಪ್ರೊ. ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಶಬರಶಂಕರ ವಿಲಾಸ–ಟೀಕು : ದ್ವಿತೀಯಾಶ್ವಾಸ 20
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ವೀರಶೈವ ಧರ್ಮದಲ್ಲಿ ಮೌಲ್ಯಗಳು 29
ಡಾ. ಸಿ. ಶಿವಕುಮಾರ ಸ್ವಾಮಿ

ತುಮಕೂರು ಹುಲುಕುಂಟೆಮಠದ ಬಿ. ಶಿವಮೂರ್ತಿಶಾಸ್ತ್ರಿ ವಿರಚಿತ 37
‘ನಾಲ್ವಡಿ ಶ್ರೀಕೃಷ್ಣರಾಜೇಂದ್ರ ವಿಳಾಸಂ’
ಡಾ. ಬಿ. ನಂಜುಂಡ ಸ್ವಾಮಿ

ಪ್ರಸನ್ನತೆಯೇ ಪ್ರಸಾದ, ಪ್ರಸಾದವೇ ಪರಮಾನಂದ 44
ಸ.ರಾ. ಸುಳಕೂಡೆ

ಗಾನಯೋಗಿ ಪಂಚಾಕ್ಷರಿ ಗವಾಯಿ 52
ಡಾ. ರಮಾ ವಿ. ಬೆಣ್ಣೂರ್

ವಾರ್ತಾವಿಹಾರ 57
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

## ಹೆಣ್ಣು ಬಾಲೆಯ ಮೊರೆಯ ಕೇಳಯ್ಯ!

ಇನ್ನೇವೆನಿನ್ನೇವೆನೆಲೆ ತಂದೆ
ಹೆಣ್ಣು ಬಾಲೆಯ ಮೊರೆಯ ಕೇಳಯ್ಯ!

ಮುನ್ನ ಹುಟ್ಟಿದ
ಒಂಬತ್ತು ಮಕ್ಕಳ
ನಗೆ ನುಡಿಯ ಕೇಳಲಾರೆ!
ಮನೆಯ ಗಂಡನ
ಬೆಡಗು ಬಿನ್ನಾಣವ ನೋಡಲಾರೆ!
ನನ್ನ ಸಿರಿಯಲ್ಲಿ
ನಾನು ಓಲಾಡಲಾರೆ!

ಎನಗೊಂದು ಮಗುವ ಕೊಡಯ್ಯ–ಗುರುವೆ!
ಆ ಮಗುವಿನ ಕೈಯಿಂದ
ಗಂಡನ ತಲೆಯೊಡೆಯಲಿಕ್ಕಿಸು
[ಆ] ಮಕ್ಕಳ ಕೊರಳ ಕೊಯಿಸು
ಎನ್ನ ದಂಡವ ಕೊಳಿಸು!

ಪಟ್ಟಣಕ್ಕೆ ಹೋಗುವ ಹಾದಿ
ಮೂರು ಬಟ್ಟೆ ಕೂಡಿದ ಮಧ್ಯದಲ್ಲಿ
ಮಣಿಹವ ಮಾಡುತಿಪ್ಪ
ಕೈಕಾಲಿಲ್ಲದ ಮೋಟಂಗೆ
ಮೆಚ್ಚಿ ಮರುಳಾದ ಪತಿವ್ರತೆಯಯ್ಯ ನಾನು–
ಎನ್ನ ಕೊಂಡು ಹೋಗಿ
ಅವನಿಗೆ ಮದುವೆಯ ಮಾಡಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ !

– ಘನಲಿಂಗಿದೇವರು

# ಗುರುವಾಣಿ

ಸರ್ವಂ ಪರವಶಂ ದುಃಖಂ ಸರ್ವಮಾತ್ಮವಶಂ ಸುಖಮ್ ।
ಏತದ್ ವಿದ್ಯಾತ್ ಸಮಾಸೇನ್ ಲಕ್ಷಣಂ ಸುಖದುಃಖಯೋಃ ॥
– ಮನುಸ್ಮೃತಿ

ಬೇರೆಯವರ ನಿಯಂತ್ರಣದಲ್ಲಿರುವ ಎಲ್ಲವೂ ನೋವಿನಿಂದ ಕೂಡಿರುತ್ತದೆ. ಸ್ವಯಂ ನಿಯಂತ್ರಣದಲ್ಲಿ ಇರುವುದರಲ್ಲಿ ಸುಖವಿರುತ್ತದೆ. ಇದು ಸಂತೋಷ ಮತ್ತು ನೋವಿನ ಮೂಲ. ಗ್ರೀಕ್ ಶ್ರೇಷ್ಠ ತತ್ತ್ವಜ್ಞಾನಿ ಅರಿಸ್ಟಾಟಲ್ ತನ್ನ 'ರ್ಹೆಟರಿಕ್' (ಭಾಷಣ ಕಲೆ) ಕೃತಿಯಲ್ಲಿ ನೋವು ಮತ್ತು ಆನಂದ ನಿರಂತರವಾಗಿ ಸಂಭವಿಸುತ್ತವೆ ಎನ್ನುತ್ತಾನೆ. ಮುಂದುವರೆದು, ಆನಂದ ಎಂಬುದು ಆತ್ಮವನ್ನು ಒಟ್ಟಾರೆಯಾಗಿ ಪ್ರಜ್ಞಾಪೂರ್ವಕವಾಗಿ ಅದರ ಸಾಮಾನ್ಯ ಸ್ಥಿತಿಗೆ ತರುವ ಚಲನೆ ಎಂದು ಹೇಳಿದೆ. ನೋವು ಇದಕ್ಕೆ ವಿರುದ್ಧವಾಗಿದೆ. ನೋವು ಮತ್ತು ಆನಂದವನ್ನು ಅರಿಸ್ಟಾಟಲ್ ಪುಶ್ ಪುಲ್ ಎನ್ನುವ ಪರಿಕಲ್ಪನೆಯಲ್ಲಿ ವಿವರಿಸುತ್ತಾನೆ. ಸಹಜವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಆನಂದವನ್ನು ಉಂಟುಮಾಡುವ ಒಂದು ವಿಷಯದ ಕಡೆಗೆ ಚಲಿಸುತ್ತಾನೆ; ನೋವನ್ನುಂಟು ಮಾಡುವ ಸಂಗತಿಯಿಂದ ದೂರ ಸರಿಯುತ್ತಾನೆ.

ಭಾರತೀಯ ಹಾಗೂ ಗ್ರೀಕ್ ಎರಡೂ ತತ್ತ್ವಜ್ಞಾನದ ಆಶಯಗಳು ಒಂದೇ. ಹಾಗೆ ನೋಡಿದರೆ ಜಗತ್ತಿನ ಎಲ್ಲ ತತ್ತ್ವಜ್ಞಾನದ ಮೂಲ ಧಾತು ಒಂದೇ ಆಗಿರುತ್ತದೆ. ಆದರೆ ಅವುಗಳು ವಿಭಿನ್ನ ವ್ಯಾಖ್ಯಾನಗಳಿಂದ ಅಭಿವ್ಯಕ್ತವಾಗಲು ಮೂಲ ಕಾರಣ, ಆಯಾ ತತ್ತ್ವಗಳನ್ನು ಆಯಾ ಪ್ರದೇಶದ ಮತ, ಪಂಥಗಳ ಚೌಕಟ್ಟಿನಲ್ಲಿ ನೋಡಿದ್ದು. ತತ್ತ್ವಜ್ಞಾನ ವಿಶಾಲವಾಗಿದೆ, ಮತ ಪಂಥಗಳು ತಮ್ಮವೇ ಆದ ಮಿತಿಯಿಂದ ಕೂಡಿವೆ. ತತ್ತ್ವಜ್ಞಾನ ಮನುಷ್ಯನ ಮನಸ್ಸಿನ ಮೂಲತತ್ತ್ವವನ್ನು ಕುರಿತು ಚಿಂತಿಸುತ್ತದೆ. ಎಲ್ಲ ದೇಶ, ಕಾಲದಲ್ಲೂ ಮನುಷ್ಯನ ಮೂಲ ಚಿಂತನೆ ಒಂದೇ ಬಗೆಯದಾಗಿರುತ್ತದೆ. ಉದಾಹರಣೆಗೆ, ಮನುಷ್ಯನ ಸುಖ ಮತ್ತು ದುಃಖಗಳು ಭಾರತೀಯರಿಗೆ ಒಂದು ಬಗೆಯಲ್ಲಿ, ಪಾಶ್ಚಾತ್ಯರಿಗೆ ಇನ್ನೊಂದು ಬಗೆಯಲ್ಲಿ ಕಾಣುವುದು ಸಾಧ್ಯವಿಲ್ಲ. ಮನಸ್ಸನ್ನು ನೀರು ಎಂದು ಭಾವಿಸಿದರೆ, ಅದರ ಗುಣ ಬಣ್ಣ ಎಲ್ಲವೂ ಎಲ್ಲ ಕಡೆಯೂ ಒಂದೆ. ಆದರೆ ಅದನ್ನು ಯಾವ ಆಕಾರದ ಪಾತ್ರೆಯಲ್ಲಿ ಸಂಗ್ರಹಿಸಲಾಗುತ್ತದೆ ಎನ್ನುವುದರ ಮೇಲೆ ನೀರಿನ ಒತ್ತಡವನ್ನು ನಿರ್ಧರಿಸಬಹುದು.

ಪ್ರಾರಂಭದ ಶ್ಲೋಕದಲ್ಲಿ ಎಲ್ಲವೂ (ಯಾವುದೇ ವಸ್ತು) ಹೊರಗಿನವರ ವಶದಲ್ಲಿದ್ದಾಗ ದುಃಖವನ್ನು ಉಂಟುಮಾಡುತ್ತದೆ ಎಂದು ಮನು ಹೇಳುತ್ತಾನೆ. ಈ 'ಎಲ್ಲವೂ' ಎನ್ನುವುದು ಇಡೀ ಬದುಕನ್ನೇ ಸೂಚಿಸುತ್ತದೆ. ಮನುಷ್ಯನ ಲೌಕಿಕ ಜಗತ್ತಿನಲ್ಲಿ ಬದುಕಲು ಬೇಕಾದ ಸಾಧನ ಸೌಲಭ್ಯಗಳು ಮಾತ್ರ ಪರಾಧೀನವಾಗಿರುವುದಲ್ಲ. ಮನಸ್ಸು, ಬುದ್ಧಿ ಕೂಡ ಪರಾಧೀನವಾಗಿದ್ದರೆ ಅವು ನಿಜವಾದ ಯಾತನೆ, ನೋವು, ದುಃಖಕ್ಕೆ ಕಾರಣವಾಗುತ್ತವೆ. ಇತರರ ಬಗೆಗಿರಲಿ ಅವರವರ ಬಗೆಗೆ ಕೂಡ ಯೋಚಿಸಲೂ ಅಸಮರ್ಥರಾಗಿರುವ ಸ್ಥಿತಿಯಲ್ಲಿರುತ್ತಾರೆ. ಸ್ವಯಂ ಚಿಂತಿಸಲಾರದವರು ಪರರ ಬಗ್ಗೆ, ಪರತತ್ತ್ವದ ಬಗ್ಗೆ ಚಿಂತಿಸಲು ಹೇಗೆ ಸಮರ್ಥರಾದಾರು? ನಿಜವಾದ ದುಃಖ ಇದೇ. ಯಾವೆಲ್ಲವೂ ಆತ್ಮದ ಅಧೀನದಲ್ಲಿರುವುದೋ ಅದು ನಿಜವಾದ ಸುಖ. ಆತ್ಮ ಎಂದರೆ ನಿರಾಕಾರವಾದ ದಿವ್ಯಚೈತನ್ಯ. ಬಹುಮಟ್ಟಿಗೆ ಅದು ಚಿರಂತನವಾದದ್ದು ಎನ್ನುತ್ತದೆ ತತ್ತ್ವಜ್ಞಾನ. ಸಾಂಖ್ಯ ದರ್ಶನದ ಪ್ರಕಾರ ಅದೊಂದು ಚೇತನ, ಪುರುಷ, ಚಿಚ್ಛಕ್ತಿ, ಗುಣದೋಷರಹಿತವಾದ ಕನ್ನಡಿಯಂತೆ ನಿರ್ವಿಕಾರ. ಆತ್ಮನಲ್ಲಿ ಜ್ಞಾನ, ಸುಖ ಮೊದಲಾದವು ಸಹಜ ಸ್ವಭಾವವಾಗಿಯೇ ಇವೆ. ಪ್ರಭೆಯ ಜ್ಞಾನಕ್ಕೆ ಕರ್ಮ ಎಂಬ ಆವರಣವಿದೆ. ಈ ಆವರಣ ಪ್ರಬಲವಾದಾಗ ಅತ್ಮ ತನ್ನ ಸಹಜ ಸ್ಥಿತಿಯನ್ನು ಮರೆತು ದುಃಖಕ್ಕೆ ಭಾಜನವಾಗುತ್ತದೆ. ಆಗ ಅದು ಆಯಾ ಆವರಣದ ಸಂಗತಿಗಳ ಅಧೀನತೆಗೆ ಒಳಗಾಗುತ್ತದೆ. ಆದುದರಿಂದಲೇ ನ್ಯಾಯಶಾಸ್ತ್ರದಲ್ಲಿ ಅದನ್ನು 'ಪೋಷಕ ಅಧಿಕಾರಿ' ಎಂದು ಹೇಳಿ, ಶರೀರವನ್ನು ಆಧಾರವೆಂದು ಕರೆಯಲಾಗಿದೆ.

ಮನುಷ್ಯ ಸಹಜವಾಗಿ ತನ್ನ ಆತ್ಮಜ್ಞಾನಕ್ಕೆ ಅಧೀನನಾಗಬೇಕು. ಹೊರತೋರಿಕೆಯ ಶಾರೀರಿಕ ದುಃಖಕ್ಕೆಳಸಿ ದುಃಖಕ್ಕೆ ಭಾಜನನಾಗಬಾರದು. ಮನುಷ್ಯ ಮಾರಾಟ-ಕೊಳ್ಳಾಟದ ಕ್ರಿಯೆಗಳಿಂದಲೇ ಸುಖ ಮತ್ತು ದುಃಖಕ್ಕೆ ಒಳಗಾಗುತ್ತಾನೆ. ಮನುಷ್ಯನ ಕರ್ಮ ಅರ್ಥ ಕ್ರಿಯೆ ಉಪಾಸನೆಯಾದರೆ, ಅಂದರೆ ಸತ್ಕರ್ಮವಾದರೆ, ಅದು ಶಾಶ್ವತ ಸುಖಕ್ಕೆ ದಾರಿಯಾಗುತ್ತದೆ. ಇಲ್ಲವೇ, ದುಃಖಕ್ಕೆ ದಾರಿಯಾಗುತ್ತದೆ.

ಸಂತೋಷ ಮತ್ತು ದುಃಖ ಎಂದಿಗೂ ಶಾಶ್ವತವಲ್ಲ. ಅವೆರಡೂ ಕಾಲದ ಜೊತೆ ಸರಿದುಹೋಗುತ್ತವೆ. ಆದರೆ ವ್ಯಕ್ತಿಯ ಕರ್ಮ ಮತ್ತು ಕಾರ್ಯವನ್ನು ಅದು ಖಂಡಿತವಾಗಿಯೂ ಅವಲಂಬಿಸಿರುತ್ತದೆ. ಆದುದರಿಂದ ಎಲ್ಲರೂ ಸಹ ಆತ್ಮಸುಖದ ಹಾದಿಯಲ್ಲಿ ನಡೆಯುತ್ತಿರಬೇಕಾದುದು ಅಗತ್ಯ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಅಗಾಧೇ ವಿಮಲೇ ಶುದ್ಧೇ ಸತ್ಯತೋಯೇ ಧೃತಿಹೃದೇ
ಸ್ನಾತವ್ಯಂ ಮಾನಸೇ ತೀರ್ಥೇ ಸತ್ವಮಾಲಂಬ್ಯ ಶಾಶ್ವತಮ್ ।
ನೋದಕಕ್ಲಿನ್ನಗಾತ್ರಸ್ತು ಸ್ನಾತ ಇತ್ಯಭಿಧೀಯತೇ
ಸ ಸ್ನಾತೋ ಯೋ ದಮಸ್ನಾತಃ ಸಬಾಹ್ಯಾಭ್ಯಂತರಃ ಶುಚಿಃ ॥

"ಎಂದೆಂದೂ ಇರುವಂತಹ ಸತ್ವಗುಣವನ್ನಾಶ್ರಯಿಸಿ ಮಾನವನು ಅಗಾಧವೂ, ಪವಿತ್ರವೂ, ಪರಿಶುದ್ಧವೂ ಆದ ಸತ್ಯವೆಂಬ ಜಲವುಳ್ಳ, ಧೈರ್ಯವೆಂಬ ಮಡುವುಳ್ಳ ಮನಸ್ಸೆಂಬ ಪುಣ್ಯತೀರ್ಥದಲ್ಲಿ ಸ್ನಾನ ಮಾಡಬೇಕು. ನೀರಿನಲ್ಲಿ ತೊಯ್ದ ಮಾತ್ರಕ್ಕೆ ಯಾರನ್ನೂ ಸ್ನಾನ ಮಾಡಿದವನೆಂದು ಹೇಳುವುದಿಲ್ಲ. ಯಾವನು ಇಂದ್ರಿಯನಿಗ್ರಹವೆಂಬುದರಲ್ಲಿ ಮಿಂದಿರುವನೋ ಅವನೇ ನಿಜವಾಗಿ ಸ್ನಾನ ಮಾಡಿದವನು. ಒಳಗೂ ಹೊರಗೂ ಶುದ್ಧನಾದವನು ಅವನೇ". ಮಹಾಭಾರತದಲ್ಲಿ ಬರುವ 'ಸ್ನಾನ'ವೆನ್ನುವುದು ಕೇವಲ ದೇಹವನ್ನು ಶುದ್ಧಗೊಳಿಸುವ ಕ್ರಿಯೆಯಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ.

ಮೇಲಿನ ಶ್ಲೋಕವನ್ನು ಉದ್ಧರಿಸಲು ಪ್ರಮುಖ ಕಾರಣವೆಂದರೆ, ಸರಿಸುಮಾರು 144 ವರ್ಷಗಳ ನಂತರ ಪ್ರಯಾಗ್‌ರಾಜ್‌ನಲ್ಲಿ ಈ ವರ್ಷ ಜರುಗಿದ "ಮಹಾಕುಂಭ ಮೇಳ"ದ ಬಗೆಗೆ ಧಾರ್ಮಿಕ ಹಾಗೂ ರಾಜಕೀಯ ಪಕ್ಷದ ಮುಖಂಡರುಗಳಿಂದ ಬಂದಂಥ ಹೇಳಿಕೆ, ಪ್ರತಿಹೇಳಿಕೆಗಳ ಮಹಾಪೂರ. ಭಾರತದಲ್ಲಿ ಎಲ್ಲ ನಂಬಿಕೆಗಳಿಗೂ ಒಂದು ಪ್ರತಿರೋಧ ಇರುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ. ಭಾರತೀಯ ತತ್ವಶಾಸ್ತ್ರದಲ್ಲಿ ನಾಸ್ತಿಕವಾದವನ್ನು ಪ್ರತಿಪಾದಿಸಿದ ಚಾರ್ವಾಕ ಸಿದ್ಧಾಂತವನ್ನೂ, ಅನಾತ್ಮವಾದಿಗಳಾದ ಬೌದ್ಧ, ಜೈನ ಮುಂತಾದ ಶ್ರಾವಕ ಧರ್ಮಗಳನ್ನೂ ದರ್ಶನಗಳೆನ್ನಲಾಗಿದೆ. ಆದರೆ ಇಂಥ ವಾದಗಳು ಹಿಂದೆಂದೂ ಕೀಳು ಅಭಿರುಚಿಯ ಸಂಘರ್ಷವನ್ನು ಕಂಡಿರಲಿಲ್ಲ. ತಮಗೆ ಸರಿಯೆನಿಸಿದ ತತ್ತ್ವವನ್ನು ನಂಬಿ ನಡೆಯುವುದಕ್ಕೆ ಎಲ್ಲರೂ ಸ್ವತಂತ್ರರೇ; ಆದರೆ ಆ ನಂಬಿಕೆಯನ್ನು ಇನ್ನೊಬ್ಬರ ಮೇಲೆ ಹೇರುವುದು ಅಥವಾ ಇನ್ನೊಬ್ಬರ ನಂಬಿಕೆಯನ್ನು ವಿರೋಧಿಸುವುದು ಸಲ್ಲದು ಎಂಬ ನಿಲುವು ಅವರದಾಗಿತ್ತು. ಮಾನ್ಯ ಮಂತ್ರಿಯೊಬ್ಬರನ್ನು ಪತ್ರಕರ್ತರು 'ತಾವು ಕುಂಭಮೇಳ ಸ್ನಾನಕ್ಕೆ ಹೋಗುವುದಿಲ್ಲವೇ' ಎಂದು ಪ್ರಶ್ನಿಸಿದರು. 'ನಾನು ನಿತ್ಯವೂ ಸ್ನಾನ ಮಾಡುತ್ತೇನಲ್ಲ'

ಎಂದು ಅವರು ವ್ಯಂಗ್ಯದ ಉತ್ತರ ನೀಡಿದರು. ಮತ್ತೊಬ್ಬರಂತೂ "ಪುಣ್ಯಸ್ನಾನ ಮಾಡಿದರೆ ಬಡತನ ನಿರ್ಮೂಲನೆ ಆಗುತ್ತದೆಯೆ?" ಎಂದು ಪ್ರಶ್ನಿಸಿದರು. ಮತ್ತೊಬ್ಬರು ಗಂಗೆಯ ಪರಿಶುದ್ಧತೆಯನ್ನು, ಕ್ಷೇತ್ರದ ಮಲಿನತೆಯನ್ನು ಕುರಿತು ಮಾತನಾಡಿದರು. ಪ್ರಯಾಗದಲ್ಲಿ ಉಂಟಾದ ಕಾಲ್ತುಳಿತದ ಸಾವಿನ ಸಂಖ್ಯೆಯ ಬಗ್ಗೆ ಹೊಸ ಹೊಸ ಪ್ರಶ್ನೆಗಳು ಉದ್ಭವವಾದವು. ಇವು ರಾಜಕೀಯ ಪ್ರತಿಕ್ರಿಯೆಗಳಾದರೆ, ಮತ್ತೆ ಕೆಲವು ವಿಚಾರವಾದಿಗಳು "ನಮ್ಮ ಧಾರ್ಮಿಕ ಮುಖಂಡರು ಪ್ರಯಾಗದಲ್ಲಿ ಪುಣ್ಯಸ್ನಾನ ಮಾಡಿದ್ದೇ ತಪ್ಪು. ಅದೊಂದು ಮೌಢ್ಯ" ಎಂದು ಮಾಧ್ಯಮಗಳಲ್ಲಿ ದನಿ ಎತ್ತಿದರು ಎಂಬುದು ನಿಜ. ಈ ಎಲ್ಲ ಹೇಳಿಕೆ, ಪ್ರತಿಹೇಳಿಕೆಗಳು ತಾತ್ವಿಕ ಹಂತದಲ್ಲಿರದೆ ಮನದೊಳಗಿನ ಪಕ್ಷದ್ವೇಷ, ವ್ಯಕ್ತಿದ್ವೇಷಗಳಿಂದ ಪ್ರೇರಿತವಾಗಿವೆ.

"ನೀರ ಕಂಡಲ್ಲಿ ಮುಳುಗುವರಯ್ಯ, ಮರನ ಕಂಡಲ್ಲಿ ಸುತ್ತುವರಯ್ಯ, ಬತ್ತುವ ಜಲವ ಒಣಗುವ ಮರನ ನೆಚ್ಚಿದವರು ನಿಮ್ಮನೆತ್ತ ಬಲ್ಲರು" ಎನ್ನುವಾಗ ಬಸವಣ್ಣನವರ ಆಂತರ್ಯವನ್ನು ಅರಿಯಬೇಕು. ಬಸವಣ್ಣನವರ ವಚನಗಳನ್ನು ಇಂದು ತಂತಮ್ಮ ಅನುಕೂಲವ್ಯಾಖ್ಯಾನಕ್ಕೆ ವಿವರಿಸಿಕೊಂಡು ಆನಂದಿಸುವ ಪದ್ಧತಿ ಹೆಚ್ಚುತ್ತಿದೆ. ವಚನಕಾರರ ಒಂದೊಂದು ವಚನಕ್ಕೂ ಹೇಗೆ ಪ್ರತ್ಯೇಕ ಅಸ್ತಿತ್ವವಿದೆಯೋ ಹಾಗೆಯೇ ಒಬ್ಬನೇ ವಚನಕಾರನ ಅಷ್ಟೂ ವಚನಗಳ ಹಿನ್ನೆಲೆಯಲ್ಲಿ ವಚನವನ್ನು ಪ್ರತ್ಯೇಕವಾಗಿ ನಿರ್ವಚಿಸಿ ನೋಡುವುದು ಆರೋಗ್ಯಕರ. ಆಗ ಒಂದರ ಬೆಳಕು ಮತ್ತೊಂದರ ಮೇಲೆ ಬಿದ್ದು ಶರಣರ ನಿಲುವಿನ ಸ್ಪಷ್ಟತೆ ಮತ್ತಷ್ಟು ಗಟ್ಟಿಗೊಳ್ಳುತ್ತದೆ. ಅಥವಾ ನಮ್ಮ ಮತಿಯ ಪರಿಮಿತಿಯ ಅರಿವುಂಟಾಗುತ್ತದೆ. ಆದರೆ ಇಂದಿನ ದುರಂತವೆಂದರೆ ವಚನಗಳ ಪರಿಮಿತ ಓದು ಧಾವಿಸಿ ಬಂದು, ಅರ್ಥಕ್ಕಿಂತಲೂ ಅಪಾರ್ಥ, ಅನರ್ಥಗಳೇ ವಿಜೃಂಭಿಸುತ್ತಿವೆ.

ನಮ್ಮ ಪೂರ್ವಿಕರು ದೇಹಕ್ಕೆ ಮಾಡುವ ಸ್ನಾನವನ್ನಷ್ಟೇ ಮುಖ್ಯವೆಂದು ಎಂದೂ ಭಾವಿಸಲಿಲ್ಲ. ಹಿಂದಿನ ಶ್ಲೋಕವೇ ಹೇಳುವಂತೆ, "ಮನಸ್ಸೆಂಬ ಪುಣ್ಯತೀರ್ಥದಲ್ಲಿ ಇರುವ ಸತ್ಯ ಹಾಗೂ ಧೈರ್ಯವೆಂಬ ನೀರಿನಲ್ಲಿ ಸ್ನಾನ ಮಾಡಬೇಕು" ಎಂಬ ಮಾತು ಮನನೀಯ. ಜೈನರಲ್ಲಿ ತೀರ್ಥಂಕರನಾದವನಿಗೆ ದೇಹಸ್ನಾನದ ಬಗ್ಗೆ ಅಂಥ ಆಸ್ಥೆಯಿರುವುದಿಲ್ಲ. ದೇಹಶುದ್ಧಿಗಾಗಿ ಸ್ನಾನ ಮಾಡುವ ನಾವು ಮನಸ್ಸಿನ ಶುದ್ಧತೆಗೆ ಏನು ಮಾಡುತ್ತೇವೆ ಎಂದು ಪ್ರಶ್ನಿಸಿಕೊಳ್ಳುವ ಅವರು 'ಏನೂ ಇಲ್ಲ'ವೆಂಬುದನ್ನು ಬೇಗನೆ ಅರಿಯುತ್ತಾರೆ. ಇಂದ್ರಿಯನಿಗ್ರಹವೇ ನಿಜವಾದ ಸ್ನಾನ ಎನ್ನುವ ತೀರ್ಥಂಕರರ ಮಾತನ್ನು ಭಾರತದ ಎಲ್ಲ ದಾರ್ಶನಿಕರೂ ಒಪ್ಪುತ್ತಾರೆ.

ಹಿಂದಿನವರು ತ್ರಿವೇಣೀಸಂಗಮದಲ್ಲಿ ಪವಿತ್ರ ಸ್ನಾನಗಳನ್ನು ಯಾಕೆ ಕಲ್ಪಿಸಿದರು ಎಂಬುದನ್ನು ಒಂದಿಷ್ಟು ಆಲೋಚಿಸಬೇಕು. ಅದರ ಹಿಂದಿನ ತಾತ್ವಿಕತೆಯನ್ನು ಪೃಥಕ್ಕರಿಸಿ ನೋಡಬೇಕು. ಸ್ಥೂಲ, ಸೂಕ್ಷ್ಮ, ಕಾರಣವೆಂಬ ತನುತ್ರಯಗಳಲ್ಲಿ ಮನಸ್ಸು, ಬುದ್ಧಿ, ಚಿತ್ತ

ಎಂಬ ತ್ರಿಪುಟಿಯಲ್ಲಿ ಉದ್ಭವಿಸುವ ಆಣವ, ಕಾರ್ಮಿಕ, ಮಾಯಾ ಎಂಬ ತ್ರಿವಿಧ ಮಲಗಳಿಂದ ಉಂಟಾಗುವ ಸಂಚಿತ, ಪ್ರಾರಬ್ಧ, ಆಗಾಮಿ ಎಂಬ ತ್ರಿವಿಧ ಕರ್ಮಗಳು ಹಾಗೂ ಸತ್ತ್ವ, ರಜಸ್ಸು, ತಮಸ್ಸು ಎಂಬ ತ್ರಿಗುಣಗಳನ್ನು ಗುರುಯಾತ್ರೆ, ದೇವಯಾತ್ರೆ, ತೀರ್ಥಯಾತ್ರೆಗಳಲ್ಲಿ ಕಳೆಯಬೇಕು ಎಂಬುದು ಇಲ್ಲಿನ ಮಥಿತಾರ್ಥ. ಬಸವತತ್ತ್ವವನ್ನು ಪ್ರತಿಪಾದಿಸುವವರು ತ್ರಿವಿಧಲಿಂಗ, ತ್ರಿವಿಧಗುರು, ತ್ರಿವಿಧದಾಸೋಹ ಎಂಬ ಮೂರರ ಅರ್ಥವನ್ನು ಕುರಿತು ಸ್ಪಷ್ಟತೆ ವಹಿಸಬೇಕು. ಅದನ್ನು ಒಂದು ವೈದಿಕ ಪರಿಕಲ್ಪನೆ ಎನ್ನುವವರು, ಜನಪದರಲ್ಲಿ ಕೂಡ 'ಮೂರು' ಎಂಬ ಪರಿಕಲ್ಪನೆಗೆ ಇರುವ ವಿಶೇಷ ಅರ್ಥಗಳನ್ನು ಪರಿಭಾವಿಸಬೇಕು. 'ಮೂರು ಕೂಡಿದ ದಾರಿ' ಎಂಬುದು ಪ್ರಾಚೀನ ಗ್ರೀಕ್ ಮತ್ತು ಭಾರತೀಯ ಜನಮಾನಸದಲ್ಲಿ ಪಡೆದಿರುವ ವಿಶೇಷ ಸ್ಥಾನ ಗಮನಾರ್ಹ. ಮುಗ್ಧ ಕುತೂಹಲವನ್ನು ಕಳೆದುಕೊಂಡವರಿಗೆ ಲೋಕವೆಲ್ಲವೂ ಬರಿಯ ಶೂನ್ಯವಾಗಿ ಕಾಣಿಸುವುದು ದುರದೃಷ್ಟಕರ. ಅಂಥವರಿಗೆ ಇದೊಂದು ಶುಷ್ಕ ಸಂಗತಿಯಾಗಿ ಕಾಣಿಸುವುದು ಅವರ ಸೃಜನಶೀಲತೆಯ ದಾರಿದ್ರ್ಯವನ್ನು ತೋರಿಸುತ್ತದೆ. ಇನ್ನು "ಗಂಗೆ ಮಾತ್ರ ಯಾಕೆ ಪವಿತ್ರ? ನಮ್ಮ ಊರಿನ ಬಾವಿಯ ನೀರು ಪವಿತ್ರವಲ್ಲವೆ" ಎಂಬ ಪ್ರಶ್ನೆಗೆ ಉತ್ತರ "ಗಂಗೇ ಚ ಯಮುನೇ ಚೈವ......" ಎನ್ನುವಲ್ಲಿ ಇದೆ. "ಅಲ್ಲಿ ಕರ್ನಾಟಕದ ಕಾವೇರಿ ನದಿಯನ್ನು ಮಾತ್ರ ಉದ್ಧರಿಸಲಾಗಿದೆ; ಇತರ ನದಿಗಳನ್ನು ಸೇರಿಸಿಲ್ಲ" ಎಂದು ತಕರಾರು ತೆಗೆಯಬಹುದು. ಇಂಥ ತಕರಾರುಗಳು ಕೇವಲ ಭಂಜಕಪ್ರವೃತ್ತಿ ಮೂಲವಾದುದು ಎಂದು ಮಾತ್ರ ಹೇಳಬೇಕಾಗುತ್ತದೆ. ಇಂತಹ ಆಕ್ಷೇಪಣೆಯನ್ನು ಯಾರು ಬೇಕಾದರೂ, ಯಾವುದರ ಬಗ್ಗೆಯಾದರೂ ಎತ್ತಬಹುದು. ಧನಾತ್ಮಕ ಚಿಂತನೆಯ ಕೊರತೆಯೇ ಇಂತಹ ವಿತಂಡ ಅಭಿಪ್ರಾಯಗಳ ಹುಟ್ಟಿಗೆ ಕಾರಣ.

ಹೀಗೆಂದ ಮಾತ್ರಕ್ಕೆ ಧಾರ್ಮಿಕ ಕ್ಷೇತ್ರದಲ್ಲಿ ಅಂಧಶ್ರದ್ಧೆಯೇ ಇಲ್ಲವೆಂದಲ್ಲ. ದೇವರ ಹೆಸರಿನಲ್ಲಿ ಮೋಸ ಮಾಡುವ ನೂರಾರು ನಯವಂಚಕರೂ ಇಲ್ಲದಿಲ್ಲ. ವಂಚನೆಗೆ ಒಳಗಾಗುವವರು ಇರುವತನಕ ವಂಚಿಸುವವರು ಇದ್ದೇ ಇರುತ್ತಾರೆ. ಅರಿವಿಲ್ಲದ ಯಾವ ಆಚರಣೆಯೂ ಮೌಢ್ಯವೇ. ಆದುದರಿಂದಲೇ ವಚನಕಾರರು ಅರಿವಿನ ಬಗೆಗೆ ವಿಶೇಷವಾಗಿ ಮಾತನಾಡಿದರು. ಆಚರಣೆಯ ಅರಿವಿಲ್ಲದ ಆಚರಣೆ ಎಷ್ಟು ತಪ್ಪೋ, ಹಾಗೆಯೇ ಅಚರಣೆಯ ಅರಿವಿಲ್ಲದೆ ತರ್ಕವನ್ನೇ ಆಯುಧವಾಗಿಸಿಕೊಳ್ಳುವವರದೂ ತಪ್ಪೇ ಆಗುತ್ತದೆಯಲ್ಲವೇ?

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ಆಯ-ಅವ್ಯಯ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ದೇವ ಸಾಕ್ಷಾತ್ಕಾರದ ಮಾರ್ಗಗಳು ನಾಲ್ಕು. ಕರ್ಮ, ಭಕ್ತಿ, ಯೋಗ ಹಾಗೂ ಜ್ಞಾನ. ಅನಾಸಕ್ತ ಜೀವನವು ಕರ್ಮ, ಹೃದಯಮಾಧುರ್ಯವು ಭಕ್ತಿ. ಮನಸ್ಸು ನಿರ್ವಿಕಲ್ಪವಾದರದು ಯೋಗ. ಸತ್ಯದರ್ಶನವಾದರದು ಜ್ಞಾನ. ಕರ್ಮಶೀಲನಿಗೆ ದೇವನು ಸರ್ವಕರ್ತ. ಭಕ್ತನಿಗೆ ದೇವನು ರಸಸಾಗರ. ಯೋಗಿಗೆ ದೇವನು 'ಕೇವಲ'ನು. ಜ್ಞಾನಿಗೆ ದೇವನು ನಿಸ್ಸೀಮ ಚೇತನ. ಅವರಲ್ಲಿ ಯಾರೂ ಕಡಿಮೆಯಲ್ಲ, ಶ್ರೇಷ್ಠರಲ್ಲ. ಯಾವ ಮಾರ್ಗವು ಕೀಳಲ್ಲ, ಮೇಲಲ್ಲ. ಅವರವರಿಗೆ ಆ ಮಾರ್ಗ ಪ್ರಿಯ. ಅವರವರ ದರ್ಶನ ಪವಿತ್ರ ಹಾಗೂ ಮುಕ್ತಿಕರ. ವಿವಿಧ ರೂಪವಿತ್ತು ವಿವಿಧ ಹೆಸರಿತ್ತವ ಕುಂಬಾರ ; ಮಣ್ಣು ಮಾತ್ರ ಎಲ್ಲ ರೂಪ ಅಹುದು, ಯಾವುದೂ ಅಲ್ಲ. ಹಾಗೆ ನಮ್ಮ ನಮ್ಮ ದೃಷ್ಟಿಯಿಂದ ದೇವನ ರೂಹು ಬೇರೆ ಬೇರೆ. ಆತ ಮಾತ್ರ ಎಲ್ಲವೂ ಅಹುದು, ಯಾವುದೂ ಅಲ್ಲ.

ಇದು ವಿರೋಧಾಭಾಸದ ಭಾಷೆ. ಪಾರಮಾರ್ಥಿಕ ಕ್ಷೇತ್ರದಲ್ಲಿ ಈ ಭಾಷೆ ಸರ್ವೇಸಾಮಾನ್ಯ. ಅನಿವಾರ್ಯ ಕೂಡ. ಮಣ್ಣು ಗಡಿಗೆ ಅಹುದು; ಗಡಿಗೆ ಅಲ್ಲ ! ಎರಡೂ ಸತ್ಯ, ಒಂದೊಂದು ದೃಷ್ಟಿಯಿಂದ. ಆಕಾರದತ್ತ ಲಕ್ಷಿಸಿದರೆ ಅದು ಗಡಿಗೆ ; ವಸ್ತುವಿನತ್ತ ಗಮನಿಸಿದರೆ ಅದು ಗಡಿಗೆಯಲ್ಲ; ಗಡಿಗೆ ಎನ್ನುವುದು ವಾಸ್ತವವಾಗಿ ಏನೂ ಇಲ್ಲ.

ಒಬ್ಬ ಮನುಷ್ಯ ಶ್ರೇಷ್ಠ ಸಂತನಾದ ಡಾಯೋಜೀನಸ್ಸನ ಹತ್ತಿರ ಬರುತ್ತಾನೆ. ಪ್ರಶ್ನೆ ಕೇಳುತ್ತಾನೆ, "ನಾನು ಯಾರು ಹೇಳಿ ಸಂತರೆ" ಎಂದು. ಆಗ ಡಾಯೋಜೀನಸ್ ಉತ್ತರಿಸಿದ, "ನೀನು ? ನೀನು ಎಲ್ಲರಿಗೂ ಗೊತ್ತಿರುವಂಥ ಶ್ರೀಮಂತ" ಆಗ ಆತ ಹೇಳಿದ, "ಅದೆಲ್ಲ ಸರಿ ಸಂತರೆ; ಆದರೆ ನನ್ನ ಹತ್ತಿರ ಧನವೇ ಇಲ್ಲದಿರೆ ನಾನಾರು?" ಸಂತ ನುಡಿದ, "ಆಗ ನೀನಾರು? ನನಗೆ ಗೊತ್ತಿಲ್ಲ! ನಿನಗೂ ಗೊತ್ತಿಲ್ಲ! ಅದು ನೀನು!" ಸಂತನ ಮಾತಿನಲ್ಲಿ ವಿರೋಧಾಭಾಸವಿದೆಯಾದರೂ ಅದು ಸತ್ಯ. ಅದು ಹಾಗೆಯೇ!

ನಮಗೆಯೇ ಯಾರಾದರೂ 'ನೀವು ಯಾರು?' ಎಂದು ಕೇಳಿದರೆ ನಾವು ಹೇಳುವುದೇನು? 'ನಾನು ಶಿಕ್ಷಕ, ಅಧಿಕಾರಿ, ಒಕ್ಕಲಿಗ' ಎಂದು. ನಿಜವಾಗಿ ನಾವು ಶಿಕ್ಷಕರಲ್ಲ. ಅದು ನಮ್ಮ ಬದುಕಿನ ಸ್ವಲ್ಪ ಕಾಲದ ವೃತ್ತಿಯಷ್ಟೇ. ಎಲ್ಲ ಬಿಟ್ಟುಕೊಟ್ಟಾಗ ಉಳಿಯುವ ನಾವು ಯಾರು ? ಅಸ್ಪಷ್ಟ. ಆದ್ದರಿಂದಲೇ ನಮ್ಮ ಭಾಷೆ ನಿಖರವಾಗಿರದು. 'ನಾನು ಶಿಕ್ಷಕ ಅಹುದು. ನಾನು

ಶಿಕ್ಷಕನಲ್ಲ! ಎರಡೂ ಮಾತು ಪೂರ್ಣ ಅಸತ್ಯವೇನಲ್ಲ! ನಮ್ಮ ವಿಷಯದಲ್ಲಿಯೇ ಇಂಥ ಸಂದಿಗ್ಧ ಭಾಷೆ ಎಂದಾಗ ಮಾನವ ಮತಿಯ ವ್ಯಾಪ್ತಿ ಮೀರಿ ನೆಲೆಸಿದ ದೇವನ ಬಗ್ಗೆ ನಮ್ಮ ಭಾಷೆ ಅದೆಷ್ಟು ದ್ವಂದ್ವಯುಕ್ತವಾಗಿರಬೇಡ?

ದೇವರು ತನ್ನಷ್ಟಕ್ಕೆ ತಾನು 'ಕೇವಲ'ನಾಗಿದ್ದಾನೆ. ಶಬ್ದ ಮೀರಿ ನಿಂತಿದ್ದಾನೆ. ನಾವು ಬೇರೆ ಬೇರೆ ಕೋನದಿಂದ, ಹಂತದಿಂದ ನೋಡಿ ವಿವಿಧವಾಗಿ ವರ್ಣಿಸುತ್ತೇವೆ. ನಮ್ಮ ವರ್ಣನೆ ಪರಸ್ಪರ ವಿರೋಧವಾಗಿರಬಹುದು. ಆದರೆ ಅದು ಪೂರ್ಣ ಅಸತ್ಯವಲ್ಲ. ಅದು ನಮ್ಮ ಭಾವದಲ್ಲಿ ಮೂಡಿದ ದೇವರು. ನಾನು ಭಕ್ತನಾದರೆ ಆತ ಸ್ವಾಮಿ. ನಾನು ಯೋಗಿಯಾದರೆ ಆತ ಧ್ಯೇಯ. ನಾನು ಜ್ಞಾನಿಯಾದರೆ ಅವನು ಕೇವಲ ಚೇತನ! ನಾನು ಏನಾಗುತ್ತೇನೆ ಹಾಗೆ ಆತ!

ಭಕ್ತ ಯೋಗಿ ಜ್ಞಾನಿ ಯಾರೂ ಶ್ರೇಷ್ಠರಲ್ಲ; ಕನಿಷ್ಠರೂ ಅಲ್ಲ. ಹೋಲಿಸಬಾರದು. ಭಕ್ತ ಭಕ್ತನೇ. ಯೋಗಿ ಯೋಗಿಯೇ. ಜ್ಞಾನಿ ಜ್ಞಾನಿಯೇ. ನಾವು ನೋಡುವುದು. ನಮಗೆ ಯಾವುದು ಇಷ್ಟ ಆ ದೃಷ್ಟಿಯಿಂದ ನೋಡುವುದು. ಆಗ ನಮಗೆ ಏನು ಕಾಣುವುದೋ ಅದು ನಮಗೆ ಸಮಾಧಾನ ಕೊಡುತ್ತದೆ. ಭಕ್ತನಿಗೆ ಸಾಕಾರ ಹಿಡಿಸುತ್ತದೆ. ಯೋಗಿಗೆ ನಿರ್ವಿಕಲ್ಪ ಹಿಡಿಸುತ್ತದೆ. ಜ್ಞಾನಿಗೆ ಮಹಾಪ್ರಜ್ಞಾರೂಪು ಹಿಡಿಸುತ್ತದೆ. ದೇವನು ಅವರಿಗೆ ಹಾಗೆಯೇ ಕಾಣಬೇಕಲ್ಲ. ಹಾಗೆ ಕಂಡವೆಲ್ಲ ದೇವನ ವಿಭಿನ್ನ ರೂಪುಗಳೇ. ಚಿಂತನ ಆ ಎಲ್ಲ ವಿಧದಲ್ಲಿ ಸಾಗಬೇಕು! ಅವರವರ ಇಷ್ಟದಂತೆ.

ಸೀತಾದೇವಿಯನ್ನು ರಾಮ ಒಂದು ರೀತಿ ನೋಡಿದ, ಲಕ್ಷ್ಮಣ ಒಂದು ರೀತಿ ನೋಡಿದ, ರಾವಣ ಮತ್ತೊಂದು ರೀತಿ ನೋಡಿದ. ಲಕ್ಷ್ಮಣನಿಗೆ ಕಂಡ ಸೀತೆ ರಾಮನಿಗೆ ಕಾಣಲಿಲ್ಲ. ರಾಮನಿಗೆ ಕಂಡ ಸೀತೆ ರಾವಣನಿಗೆ ಕಾಣಲಿಲ್ಲ. ಎಲ್ಲರಿಗೂ ಬೇರೆ ಬೇರೆಯಾಗಿ ಕಂಡಳು. ಅಷ್ಟೇ ಅಲ್ಲ ತನಗೆ ತಾನೆ, ಆಕೆ ಭಿನ್ನವಾಗಿ ಕಂಡಳು.

ಒಮ್ಮೆ ತಾನು ರಾಮಪ್ರಿಯಳೆಂದು ಕಂಡಳು. ಮತ್ತೊಮ್ಮೆ ಪರಿತ್ಯಕ್ತೆ ಎಂದು ಭಾವಿಸಿದಳು. ಅದರಲ್ಲಿಯೇ ಸೌಂದರ್ಯವಿದೆ. ಬಾಳಿನ ವೈಭವವಿದೆ. ಒಂದೇ ರೂಪದಲ್ಲಿ, ಒಂದೇ ಭಾವದಲ್ಲಿ ಇರುವುದು ಈ ಜಗತ್ತಿನಲ್ಲಿಯಂತೂ ಸಾಧ್ಯವಿಲ್ಲ.

ದೇವನನ್ನು ನಾವು ವಿವಿಧ ದೃಷ್ಟಿಯಿಂದ ನೋಡಬೇಕು. ವಿವಿಧ ರೀತಿಯಲ್ಲಿ ವರ್ಣಿಸಬೇಕು. ವಿವಿಧ ಲಕ್ಷಣಗಳಲ್ಲಿ ಚಿಂತಿಸಬೇಕು. ಇದೀಗ, ಅಂಥದೊಂದು ಚಿಂತನೆ "ವ್ಯಯ-ಅವ್ಯಯ."

ಪ್ರತಿ ವಸ್ತು ವ್ಯಯಿಸುತ್ತದೆ, ಕ್ಷಣ ಕ್ಷಣ. ಉದಾ: ದೀಪ. ಎಣ್ಣೆ ಕಡಿಮೆಯಾಗುತ್ತದೆ. ಬತ್ತಿ ಸಣ್ಣದಾಗುತ್ತದೆ. ದೀಪ ಉರಿಯುವುದೆಂದರೆಯೇ ಅವೆರಡು ವ್ಯಯವಾಗುವುದು.

ಈ ಸತ್ಯ ವಿಶ್ವದಲ್ಲೆಲ್ಲ ಕಾಣಬರುತ್ತದೆ. ನಮ್ಮ ದೇಹ, ಯೌವನದಲ್ಲಿ ಸೌಂದರ್ಯ ಶಕ್ತಿ ಬುದ್ಧಿ ಎಲ್ಲದರಿಂದಲೂ ತುಂಬಿಕೊಳ್ಳುತ್ತದೆ. ನಂತರ ಅವೆಲ್ಲ ವ್ಯಯವಾಗಿ ಕೊನೆಗೆ ವಿನಾಶದಲ್ಲಿ ಪರ್ಯವಸಾನ. ವ್ಯಯವಾಗುವಿಕೆ ವಸ್ತುವಿನ ಆಂತರಿಕ ಗುಣಧರ್ಮವೇ !

ವ್ಯಯವಾಗುವುದನ್ನು ತಡೆಯಲಾಗದು ಶಾಶ್ವತವಾಗಿ. ನೀವು ಯಾವ ಔಷಧಿ ತೆಗೆದುಕೊಳ್ಳಿ; ಭಾರಿ ತಪವನಾಚರಿಸಿ; ಮಹಾಜ್ಞಾನಿ ಮಹಾತ್ಮರಾಗಿ, ಆದರೂ 'ನೆರೆ ಕೆನ್ನೆಗೆ ತೆರೆ ಗಲ್ಲಕೆ, ಶರೀರ ಗೂಡುವೋಗುವುದ' ತಪ್ಪಿಸಲಾಗದು. ಹಿಂದೆ ಯಾರೂ ತಪ್ಪಿಸಿಲ್ಲ; ತಪ್ಪಿಸಿದವರು ಈಗ ಉಳಿದುದಾದರೂ ಎಲ್ಲಿ?

ಬಸವಣ್ಣ ಎಂತಹ ಸುಂದರ ಕಲ್ಯಾಣ ಕಟ್ಟಿದ. ಅದು 'ಭೂಸ್ವರ್ಗ.' ಧರ್ಮ-ನೀತಿಯ ತಾಣ. ಭಕ್ತಿಯ ನೆಲೆ. ಕಾಯಕದ ಕ್ಷೇತ್ರ. ಪ್ರೇಮ-ಸೌಜನ್ಯದ ರಾಜ್ಯ. ಅಲ್ಲಿ ಸಾವಿರಾರು ದಾಸೋಹಿಗಳು. ನೂರಾರು ಶ್ರೇಷ್ಠ ಅನುಭಾವಿ ವಚನಕಾರರು. ಅಲ್ಲಮನಂತಹ ನಿರಾಭಾರಿ ಜಂಗಮವರೇಣ್ಯರ ನೆಚ್ಚಿನ ಸ್ಥಾನ. ಅದೆಲ್ಲ ಇಂದಿಲ್ಲ. ಎದ್ದ ತೆರೆಯಂತೆ ಅಡಗಿ ಹೋಗಿದೆ, ಆ ಧರ್ಮವೈಭವ ! ಅದು ಹಾಗೆಯೇ !

ಬುದ್ಧ ಬಂದ, ಎರಡೂವರೆ ಸಾವಿರ ವರುಷದ ಹಿಂದೆ. ಆತ ನೆಲೆಸಿದ, ಚರಿಸಿದ ನಾಡಿನಲ್ಲೆಲ್ಲ ಸನ್ಯಾಸದ ತಂಗಾಳಿ ಬೀಸಿತು. ರಾಜಮಹಾರಾಜರ ಮಕ್ಕಳೂ ಚೀವರ ಸ್ವೀಕರಿಸಿದರು. ಸಾವಿರ ಸಾವಿರ ಜನ 'ಬುದ್ಧಂ ಶರಣಂ ಗಚ್ಛಾಮಿ' ಎಂದಿತು! ಆ ಮಾತು ಉತ್ತರಾವರ್ತದಲ್ಲೆಲ್ಲಾ ಪ್ರತಿಧ್ವನಿಸಿತು! ಆಸೆಯನ್ನೇ ಗೆಲ್ಲುವ ಅಪರೂಪದ ಸ್ಪರ್ಧಾಸಮರವೇ ನಡೆಯಿತು. ಮುಂದೆ ಕೆಲವೇ ಶತಕಗಳಲ್ಲಿ 'ಸನ್ಯಾಸವೈಭವ' ಮರೆಯಾಯ್ತು. ಆ ಪ್ರದೇಶದಲ್ಲಿಂದು ಆಸೆಯ ನೃತ್ಯ ಸ್ವೇಚ್ಛೆಯಾಗಿ ಸಾಗಿದೆ.

ಅಷ್ಟು ದೂರ ಏಕೆ? ಈ ಮೈಸೂರನ್ನೇ ನೋಡಿ. ಇಲ್ಲಿ ವಿದ್ವಾಂಸರು. ಸುಸಂಸ್ಕೃತರು. ಕಲಾಜೀವಿಗಳು. ಅಧಿಕಾರಿಗಳು. ಉದ್ಯಮದಾರರು. ಪ್ರತಿ ತಿಂಗಳ ಮೊದಲ ವಾರದಲ್ಲಿ ಅವರೆಲ್ಲರ ಮುಖದಲ್ಲಿ ಪ್ರಸನ್ನತೆ, ಕಿಸೆಯಲ್ಲಿ ಧನಲಕ್ಷ್ಮಿ. ಇಡೀ ಮೈಸೂರು ಸುಖಿಸುತ್ತದೆ. ತಿಂಗಳು ಮುಗಿಯುತ್ತ ಬಂದಂತೆ ಕಿಸೆ ಬರಿದು. ಮುಖದ ಕಳೆ ಮಾಯ! ತಿಂಗಳಿಗೊಮ್ಮೆ ಇಲ್ಲಿ ಧನದ ತೆರೆ, ಸುಖದ ತೆರೆ ಆಡುತ್ತದೆ.

ವಿಶ್ವದಲ್ಲೂ ಅಷ್ಟೇ. ಸೂರ್ಯ ನಕ್ಷತ್ರಗಳು ಕಾಲ ಹಚ್ಚಿದ ದೀಪಗಳು, ಈಗ ಉರಿಯುತ್ತಿವೆ. ಪ್ರತಿ ಕ್ಷಣ ಕೋಟ್ಯಂತರ ಟನ್ ದ್ರವ್ಯ-ತೈಲ ಉರಿದುಹೋಗುತ್ತಿದೆ. ಒಂದು ದಿನ, ಸಾವಿರ ಕೋಟಿ ವರುಷಗಳ ನಂತರ ಎನ್ನಿ, ಈ ಆಕಾಶದೀಪಗಳು ಆರಿಹೋಗುತ್ತವೆ. ಬೆಳಕು ಮಾಯ. ಎಲ್ಲೆಡೆ ಅಂಧಕಾರ, ಕತ್ತಲೆ ಆವರಿಸುತ್ತದೆ ! ಅದು ವ್ಯಯದ ಅಂತಿಮ ರೂಪು.

ಈ ವ್ಯಯ ಸಿದ್ಧಾಂತ ಎಲ್ಲೆಡೆ ಅನ್ವಯಿಸಿ ನೋಡಿ. ನಮ್ಮ ನಮ್ಮ ಧರ್ಮಗಳು, ನಾವು ಗಳಿಸಿದ ಕೀರ್ತಿ-ಪ್ರತಿಷ್ಠೆಗಳು, ಕೆಲ ಕಾಲದಲ್ಲಿ ಕರಗುತ್ತವೆ; ಬಿಸಿಲಿಗಿಟ್ಟ ಮಂಜುಗಡ್ಡೆಯಂತೆ. ಅವುಗಳನ್ನು ಶಾಶ್ವತ ಮಾಡಲು ಏನು ಸಾಹಸ! ಎಷ್ಟು ಹೆಣಗಾಟ! ಪ್ರಾಣ ಪ್ರಾಣ ಕಳೆದುಕೊಳ್ಳುತ್ತೇವೆ. ನಾವು ಅಭಿಮಾನಿಸಿದುದೆಲ್ಲ ಕಾಲಮೀರಿ ಬಾಳಬೇಕೆಂಬುದು 'ನಮ್ಮ ಅಲ್ಪ ತಿಳಿವಿನ ಭ್ರಮೆ!'

ವ್ಯಯವಾಗುವುದೆಲ್ಲ ಜಗತ್ತು. ಈ ಜಗತ್ತಿನಲ್ಲಿಯೇ ಬದಲಾಗದ, ವ್ಯಯವಾಗದ ಒಂದು ಮಹಾನ್ ವಸ್ತುವಿದೆ. ಅದು ದೇವರು. ಅದು ಅವ್ಯಯ. ಅದು ಜ್ಞಾನಸೂರ್ಯ! ಅಪರಿಮಿತ ಬೆಳಕು . ಒಳಗೆ ಹೊರಗೆ ಎಲ್ಲೆಡೆ ತುಂಬಿದೆ. ಕಾಲದೊಳಗು, ಕಾಲದಾಚೆ ಕೂಡ. ಅದರ ಬಣ್ಣನೆ ಬೃಹದಾರಣ್ಯಕದಲ್ಲಿ ಹೀಗಿದೆ.

> ಸ ವಾ ಏಷ ಮಹಾನ್ ಅಜಃ ಆತ್ಮಾ ಅಜರೋ
> ಅಮರೋ ಅಮೃತೋಽಭಯೋ ಬ್ರಹ್ಮ
> ಅಭಯಂ ವೈ ಬ್ರಹ್ಮ, ಅಭಯಂ ಹಿ ವೈ ಬ್ರಹ್ಮ
> ಭವತಿ ಯ ಏವಂ ವೇದ (ಬೃ. ೪-೪-೨೫)

ವಿಶ್ವದ ಅಧೀಶನು ದೇವ. ಅವನು ಆತ್ಮಪುರುಷ. ಅಜರ ಅವ್ಯಯ ಅಮರ. ಅಮೃತ್ಯು, ಅಭಯ. "ಜನಕ ಮಹಾರಾಜ, ನಿನ್ನ ಈ ಸಾಮ್ರಾಜ್ಯ, ಅಪಾರ ಸಂಪದ, ಅಧಿಕಾರ, ನಿನ್ನೀ ಕ್ಷತ್ರಿಯ ವೀರ ದೇಹ; ಎಲ್ಲ ಮೇಘದಂತೆ ಗಾಳಿಯಲ್ಲಿ ಚದುರಿ ಹೋಗುತ್ತಿದೆ! ಹಾಗೆ ಚದುರಿ ಹೋಗುವ ಕ್ಷಣದಲ್ಲಿಯೇ ಯಾವ ಗಾಳಿಗೂ ಚದುರದ 'ಆತ್ಮ'ವೊಂದಿದೆ. ಅದು ನೀನು! ನಿನ್ನ ಸುತ್ತೆಲ್ಲಾ ವ್ಯಯಶೀಲ ಜಗತ್ತು! ವ್ಯಯಶೀಲ ವಿಶ್ವದೊಳಗೆಲ್ಲ ಅವ್ಯಯನಾದ ನೀನು! ಅದನ್ನು ಧೇನಿಸು! ಚಿಂತಿಸು!" ಯಾಜ್ಞವಲ್ಕ್ಯ ಹೇಳಿದ.

ವ್ಯಯವಾಗುವುದ ನೋಡುತ್ತ ನೋಡುತ್ತ, ಅವ್ಯಯವ ಗುರುತಿಸಿ ತಿಳಿವುದು ಯೋಗ! ಜ್ಞಾನಮಾರ್ಗ! ದೀಪದ ಎದುರು ಕೂತು ಎಣ್ಣೆಯತ್ತ ಲಕ್ಷ ಕೊಡಿ; ಅಲ್ಲಿ ವ್ಯಯದರ್ಶನ! ನೋಡುತ್ತಿರುವ ನಮ್ಮತ್ತ ನಾವು ಲಕ್ಷಿಸಿದರೆ ಅಲ್ಲಿ ಆತ್ಮದರ್ಶನ. ಅವ್ಯಯದರ್ಶನ, ಇದು ಜ್ಞಾನಪಥ! ಜ್ಞಾನಯೋಗ. ವಿಶ್ವವೇ ವ್ಯಯವಾಗಿ ಹೋದ ಬಳಿಕ ಉಳಿದುದು, ಉಳಿವುದು ಅವ್ಯಯಬ್ರಹ್ಮ. ಆ ಅವ್ಯಯವನ್ನು ವಿಶ್ವವಿರುವಾಗಲೇ ಜಾನಿಸಿಕೊಂಡಿರುವುದು ಜ್ಞಾನಸಾಧನ. ದೇಹವಿರಲಿ, ಪ್ರಪಂಚವಿರಲಿ, ಬಂಧು ಬಾಂಧವರಿರಲಿ; ಅದರೊಂದಿಗೆ ಅವೆಲ್ಲ ವ್ಯಯಶೀಲ ಎಂಬುದು ಖಚಿತವಾಗಿರಲಿ! ಅದರಿಂದ ನಿಶ್ಚಿಂತತೆ, ನಿರಾಭಾರಿತ್ವ ಅಳವಡುತ್ತದೆ!

ಜೀವನದ ವ್ಯಯ ಕ್ಷಣಗಳ ವೀಕ್ಷಣೆ ಅದ್ಭುತ. ಮೊದಲ ಕ್ಷಣ ಅಂಬೆಗಾಲಿಕ್ಕುವ ಮಗು. ಮೊದಲಂಕವಿದು. ಎರಡನೆಯ ಅಂಕದಲ್ಲಿ ಬಾಲಕ ಹೆಗಲಿಗೆ ಚೀಲ ಹಾಕಿ ಶಾಲೆಗೆ

ಹೊರಟಿದ್ದಾನೆ. ಮೂರನೆಯ ಅಂಕದಲ್ಲಿ ಮಹಾವಿದ್ಯಾಲಯದ ವಿದ್ವಾಂಸ. ನಾಲ್ಕನೆಯ ಅಂಕದಲ್ಲಿ ವಿವಾಹಮಂಟಪ, ಪತ್ನೀಸಹಿತ. ಐದನೆಯ ಅಂಕದಲ್ಲಿ ನಾಲ್ಕು ಮಕ್ಕಳು ಸುತ್ತಮುತ್ತ. ಆರನೇ ಅಂಕದಲ್ಲಿ ವೃದ್ಧಾಪ್ಯ. ಕಣ್ಣು ಮಂದ. ಹೆಜ್ಜೆ ತಪ್ಪುತ್ತಿದೆ; ಜನ ನೋಡಿ ನಗುತ್ತಾರೆ! ಕೊನೆಯ ಅಂಕದಲ್ಲಿ 'ಸ್ಮಶಾನ!' ಎಲ್ಲ ಅಗ್ನಿಯಲ್ಲಿ ಉರಿದು ಹೋಗುತ್ತಿದೆ. ಈ ಜೀವನ ನಾಟಕ ಶೇಕ್ಸ್‌ಪಿಯರ್ ಸುಂದರವಾಗಿ ಚಿತ್ರಿಸಿದ್ದಾನೆ. ಈ ನಾಟಕ ನೋಡುವವ ಆತ್ಮ. ಅವನಿಗೆ ಅವಸ್ಥೆಗಳಿಲ್ಲ! ಸದಾ ಏಕರೂಪ. ಈ ನಾಟಕ ನೋಡುತ್ತಲೇ ತನ್ನರಿವು ತನಗಾದರೆ ಅದು ಅವ್ಯಯಚಿಂತನ. ಜ್ಞಾನದರ್ಶನ!

❑

ಯುಗದ ಉತ್ಸಾಹವ ನೋಡಿರೆ!
ಪಂಚಶಕ್ತಿಗಳಿಗೆ ಪಂಚಪ್ರಧಾನರು
ಅವರ ಆಗುಹೋಗನು ಆ ಶರಣನೆ ಬಲ್ಲ
ಆ ಶರಣನು ತಾನು ತಾನಾಗಿ ಆರು ದರುಶನಕ್ಕೆ ಯಾಚಕನಲ್ಲ!
ಮೂರು ದರುಶನಕ್ಕೆ ಮುಯ್ಯಾನುವನಲ್ಲ
ವೇದ ಶಾಸ್ತ್ರಾಗಮ ಪುರಾಣ ಛಂದಸ್ಸು
ನಿಘಂಟುಗಳೆಂಬುವಕ್ಕೆ ಭೇದಕನಲ್ಲ
ಅದೆಂತೆಂದಡೆ: ಅವರ ಅಂಗದ ಮೇಲೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ.
ಪ್ರಸಾದವಿಲ್ಲ ಪಾದೋದಕವಿಲ್ಲದ ಭಾಷೆ
ಆ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ ಏಕಾರ್ಥವಾದ ಕಾರಣ
ಪ್ರಾಣಿಗಳೆಲ್ಲವು ಪ್ರಣಾಮಂಗೆಯ್ಯುತ್ತಿದ್ದವು
ಜೀವಿಗಳೆಲ್ಲವು ಜಯ ಜೀಯಾ ಎನುತ್ತಿದ್ದುವು
ಆತ್ಮಂಗಳೆಲ್ಲ ಅನುವ ಬೇಡುತ್ತಿದ್ದವು.
ಗುಹೇಶ್ವರಾ ಸಂಗನಬಸವಣ್ಣನ ಪಾದಕ್ಕೆ
ಈರೇಳು ಭುವನವೆಲ್ಲವೂ ಜಯ ಜೀಯಾ ಎನುತ್ತಿದ್ದವು

**ಅಲ್ಲಮಪ್ರಭುದೇವರು**

# ಪ್ರಸನ್ನಚಿತ್ತರು

**ಪ್ರೊ. ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್**

ತಮ್ಮ ದಿವ್ಯವಾದಂತಹ ಪ್ರಭೆಯಿಂದ ಬೆಳಗಿದ ಪರಮಪೂಜ್ಯರಾಗಿದ್ದಂತಹ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ದಿವ್ಯವಾದಂತಹ ಕೆಲಸ ಎಂತಹದ್ದು, ಅವರು ಎಷ್ಟೊಂದು ರೀತಿಯಲ್ಲಿ ಸೇವೆಯನ್ನು ಮಾಡಿದ್ದಾರೆ. ಎಂತಹ ಅದ್ಭುತವಾದಂತಹ ವ್ಯಕ್ತಿತ್ವ ಅವರದು ಎಂಬುದೆಲ್ಲ ನೆನಪಿಗೆ ಬಂದು, ದೇಹ, ಮನಸ್ಸು ಪುಳಕಿತವಾಗುತ್ತದೆ, ಮನಸ್ಸು ಹರ್ಷವಾಗುತ್ತದೆ. ಅವರು ಈ ಕ್ಷೇತ್ರದ ಅಧ್ಯಕ್ಷರಾಗಿದ್ದಾಗ, ಅನೇಕ ಸಾರಿ ಅವರನ್ನು ಸಂದರ್ಶಿಸಿ ಅವರ ಮಾತುಗಳನ್ನು ಕೇಳುವಂತಹ ಅವರ ಅನುಗ್ರಹವನ್ನು ಪಡೆಯುವಂತಹ ಭಾಗ್ಯ ನನ್ನದಾಗಿತ್ತು. ಯಾವಾಗಲೂ ನನ್ನ ಬಗ್ಗೆ, ನನ್ನಂತಹ ಅನೇಕರ ಬಗ್ಗೆ, ಪ್ರತಿಯೊಬ್ಬರೂ ಕೂಡ ಸ್ವಾಮಿಗಳಿಗೆ ನನ್ನ ಮೇಲೆ ವಿಶೇಷವಾದ ಅಭಿಮಾನವಿದೆ ಅಂತ ಕೂಡ ಭಾವಿಸುತ್ತಾರೆ. ಆ ರೀತಿಯಲ್ಲಿ ಅವರು ವರ್ತಿಸುತ್ತಾ ಇದ್ದರು. ಯಾವುದೇ ಸಭೆಗೆ ಹೋದರೂನೂ ಹಿಂದುಗಡೆ ನಾನು ಕುಳಿತಿದ್ದರೆ, ಅಲ್ಲಿ ಕೃಷ್ಣಸ್ವಾಮಿ ಕುಳಿತಿದ್ದಾನೆ, ಅವನನ್ನು ಮುಂದಕ್ಕೆ ಕರೆತಂದು ಕೂರಿಸಿ ಅಂತ ಹೇಳುತ್ತಿದ್ದರು. ಅವರಿಗೆ ನನ್ನ ಮೇಲೆ ಅಷ್ಟೊಂದು ಪ್ರೀತಿ, ವಿಶ್ವಾಸ ಅಭಿಮಾನ. ತಮ್ಮ ಬಗ್ಗೆ ಯಾರ್‍ಯಾರಿಗೆ ಭಕ್ತಿ, ಗೌರವ, ಅಭಿಮಾನ ಇರುತ್ತದೆ, ಅಂತಹವರನ್ನೆಲ್ಲ ತುಂಬಾ ಪ್ರೀತಿಯಿಂದ ನೋಡುತ್ತಿದ್ದಂತಹ ಅಸಾಧಾರಣವಾದ ವ್ಯಕ್ತಿತ್ವ. ನಾನು ಅನೇಕ ಸನ್ಯಾಸಿಗಳನ್ನು ನೋಡಿದ್ದೇನೆ, ಆ ಒಂದು ನಿಷ್ಠೂರವಾದಂತಹ ಜೀವನ, ಅವರನ್ನು ಬಹಳಷ್ಟು ಮಟ್ಟಿಗೆ ಕಟುವಾಗಿ ಮಾಡಿಬಿಡುತ್ತದೆ. ಅವರ ಮನಸ್ಸು ಬಹಳ ಮೃದುವಾಗಿರಬಹುದು. ಆದರೆ ಹೊರಗಡೆಗೆ ಆ ಮೃದುತ್ವ, ದಯೆ, ಅನುಕಂಪ, ಕನಿಕರ, ಆ ಮಾನವೀಯ ದೃಷ್ಟಿ ಕಾಣಿಸುವುದಿಲ್ಲ. ಏನು ಎಷ್ಟೊಂದು ನಿಷ್ಠೂರರು ಇವರು ಅನ್ನತಕ್ಕಂತಹ ಒಂದು ಭಾವನೆ ಬರುತ್ತದೆ. ಆದರೆ, ಡಾ. ರಾಜೇಂದ್ರ ಮಹಾಸ್ವಾಮಿಗಳವರ ಒಂದು ವೈಶಿಷ್ಟ್ಯ ಏನು ಅಂದರೆ ಅವರಷ್ಟು ಸಹೃದಯರಾದಂತಹ, ಮೃದುವಾದಂತಹ ವ್ಯಕ್ತಿತ್ವವುಳ್ಳ ವ್ಯಕ್ತಿ ಅನೇಕರಿಲ್ಲ ಅಂತ ಅನ್ನಿಸುತ್ತದೆ. ಅವರ ದಿವ್ಯವಾದಂತಹ ಭಾವಚಿತ್ರ ಏನಿದೆ? ಅವರ ಮುಖವನ್ನು ಒಮ್ಮೆ ಅವಲೋಕಿಸಬೇಕು, ಆ ಒಂದು ಪ್ರಸನ್ನತೆ. ಪ್ರಸನ್ನತೆ ಬಹಳ ಮುಖ್ಯವಾದದ್ದು, ಯಾವುದೇ ವ್ಯಕ್ತಿಯಲ್ಲಿ, ವರ್ಚಸ್ಸು ಬಹಳ ಮುಖ್ಯವಾದದ್ದು. ನಮ್ಮಲ್ಲಿ ಅಂತಃಸತ್ವ ಇದ್ದರೆ, ಅದು ಮುಖದಲ್ಲಿ

ಪ್ರಕಟವಾಗಬೇಕು. ಅದು ಬಹಳ ಮುಖ್ಯ. ಅದು ಕೇವಲ ದೈಹಿಕ, ಲೌಕಿಕವಾದದ್ದು. ಇದೊಂದು ಅಧ್ಯಾತ್ಮಿಕವಾದಂತಹ ಸಂಪತ್ತು, ತೇಜಸ್ಸು ಒಳಗಡೆ ಇದ್ದಿದ್ದರಿಂದ ಅದು ಸಂಪೂರ್ಣವಾಗಿ ಮುಖದಲ್ಲಿ ಅರಳಿ ಪ್ರಸನ್ನತೆಯನ್ನುಂಟು ಮಾಡುತ್ತದೆ. ಆ ಮುಖವನ್ನು ನೋಡಿದರೆ ಸಾಕು ಎಂತಹವರಿಗಾದರೂ ಮನಸ್ಸನ್ನು ತಟ್ಟಿ ಮಲಗಿಸಿದ ಹಾಗೆ, ಅವರನ್ನು ಸಾಂತ್ವನಗೊಳಿಸಿದ ಹಾಗೆ ಮತ್ತು ಅವರಿಗೆ ನೆಮ್ಮದಿಯನ್ನು ದೊರಕಿಸಿಕೊಟ್ಟ ಹಾಗೆ ಅಲೌಕಿಕವಾದಂತಹ ಯಾವುದೋ ಒಂದು ಅನುಭವವನ್ನು ದೊರಕಿಸಿಕೊಡುವಂತಹ ವ್ಯಕ್ತಿತ್ವ ಅವರದು. ಅದಕ್ಕೋಸ್ಕರ ಅವರ ಮೇಲೆ ವಿಶೇಷವಾದಂತಹ ಭಕ್ತಿಗೌರವ ಅಭಿಮಾನ. ಸಾಮಾನ್ಯವಾಗಿ ಎರಡು ತರಹದ ಜನಗಳನ್ನು ನಾವು ನೋಡುತ್ತೇವೆ. ಸ್ವಾಮೀಜಿಗಳಲ್ಲಿ ಮಾತ್ರವಲ್ಲ, ಬೇರೆ ಕ್ಷೇತ್ರದಲ್ಲೂ ಕೂಡ, ನಾಯಕರು ಅಂತ ಅನ್ನಿಸಿಕೊಂಡವರ ಅನೇಕರ ಮುಖವನ್ನು ನೋಡಿದಾಗ ನೆನಪಾಗುತ್ತದೆ. ಅವರ ಮನಸ್ಸು ಏನು ಅನ್ನುವುದು ಮುಖದಲ್ಲಿ ವ್ಯಕ್ತವಾಗುತ್ತದೆ. ಹಿಟ್ಲರ್, ಮುಸಲೋನಿಯನ್ನು ನೋಡಿದಾಗ ಅಥವಾ ಇಂತಹ ಸರ್ವಾಧಿಕಾರಿಗಳ ಮುಖವನ್ನು ನೋಡಿದರೆ, ಯಾರ‍್ಯಾರು ದೌರ್ಜನ್ಯದಿಂದ ಮೆರೆದರೋ ಪ್ರಪಂಚದಲ್ಲಿ, ಅವರ ಮುಖಗಳನ್ನು ನೋಡಿದರೆ ಅವರುಗಳು ಮುಖವನ್ನು ಗಂಟಿಕ್ಕಿಕೊಂಡಿರುತ್ತಾರೆ. ಅವರ ನರಗಳೆಲ್ಲ ಬಿಗಿಯುತ್ತಿರುತ್ತದೆ. ಜಗತ್ತಲ್ಲಿ ಏನೋ ಆಗಿಬಿಡುತ್ತದೆ ಅನ್ನುವ ಭಾವನೆ ಅವರಿಗೆ. ಆದರೆ ದೇವರುಗಳ ಮಹಾವ್ಯಕ್ತಿಗಳ ಮುಖಗಳನ್ನು ನೋಡಿದಾಗ, ಅವರನ್ನು ನೋಡಿದ ಕೂಡಲೇ, ಸಂದರ್ಶಿಸಿದ ಕೂಡಲೇ, ಸಂದರ್ಶನ ಮಾಡಿದವರಿಗೆ ತಕ್ಷಣ ಏನೋ ಒಂದು ಪರಿಣಾಮ ಆಗುತ್ತದೆ. ಅದಕ್ಕೇ ಸಂದರ್ಶನಕ್ಕೆ ಹೆಚ್ಚಿನ ಬೆಲೆ ನಮ್ಮಲ್ಲಿ. ಶಿವ ಎಂತಹ ಸುಂದರವಾದಂತಹ ವ್ಯಕ್ತಿತ್ವ. ಅವನನ್ನು ನೋಡಿದರೆ ಎಲ್ಲಿ ನಗೆ ಚಿಮ್ಮುತ್ತದೋ, ಸೋರುತ್ತದೋ ಅನ್ನಿಸುತ್ತದೆ. ಯಾಕೆಂದರೆ ಅಷ್ಟೊಂದು ಪ್ರಸನ್ನತೆ, ಅನುಗ್ರಹ ನೀಡುವಂತಹ ವ್ಯಕ್ತಿತ್ವ. ಮಹಾತ್ಮ ಗಾಂಧೀಜಿಯನ್ನೇ ನೋಡಿ, ಬುದ್ಧನನ್ನೇ ನೋಡಿ ಅವರ ಮುಗ್ಧತೆಯನ್ನು ನೋಡಿ, ಅವರ ಮುಖ ಎಷ್ಟೊಂದು ಪ್ರಸನ್ನವಾಗಿರುತ್ತದೆ. ಆ ಪ್ರಫುಲ್ಲತೆ ಹಾಗೂ ದಿವ್ಯವಾದಂತಹ ತೇಜಸ್ಸು ಅನೇಕರನ್ನು ಸೆಳೆದುಕೊಂಡಿತು. ಮಹಾವ್ಯಕ್ತಿಗಳಾದಂತಹವರು, ನಾಯಕರಾದಂತಹವರಿಗೆ, ಆಧ್ಯಾತ್ಮಿಕ ಕ್ಷೇತ್ರದಲ್ಲಿ, ಲೌಕಿಕ ಕ್ಷೇತ್ರದಲ್ಲಿ, ಯಾವುದೇ ಕ್ಷೇತ್ರದಲ್ಲಾಗಲಿ ಆ ನಾಯಕತ್ವವನ್ನು ಪಡೆಯಬೇಕಾಗಿದ್ದರೆ ಇದು ಇರಬೇಕಾಗುತ್ತದೆ. ಆ ಒಂದು ಪ್ರಸನ್ನತೆ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಲ್ಲಿತ್ತು. ರಾಜೇಂದ್ರಸ್ವಾಮಿಗಳವರನ್ನು ನೆನೆಸಿ ಕೊಂಡಾಗಲೆಲ್ಲ ನನ್ನ ಮನಸ್ಸಿನ ಮುಂದೆ ಪ್ರಸನ್ನವಾದ ಅವರ ಮುಖ, ವ್ಯಕ್ತಿತ್ವ ಗೋಚರವಾಗಿ, ಲೋಕದ ಅನುಗ್ರಹಕ್ಕಾಗಿ ತಮ್ಮ ಇಡೀ ಬದುಕನ್ನು ಮುಡಿಪಾಗಿಟ್ಟಂತಹ ಇಂತಹ ಒಬ್ಬರು ನಮ್ಮ ನಡುವೆ ಇದ್ದರಲ್ಲ, ನಮ್ಮ ಮುಂದೆ ಓಡಾಡಿದ್ದಾರಲ್ಲ, ಅದೇ ನೆಲದಲ್ಲಿ ನಾವು ಓಡಾಡುತ್ತಾ ಇದ್ದೇವೆಲ್ಲ. ಇದಕ್ಕೆ ನಾವು ಎಷ್ಟು ಧನ್ಯ ಅನ್ನತಕ್ಕಂತಹ ಒಂದು ಭಾವನೆ ನಮ್ಮಲ್ಲಿ ಬರುತ್ತದೆ.

ನಮ್ಮ ದೇಶದ ಒಂದು ವೈಶಿಷ್ಟ್ಯ ಏನು ಅಂತ ಅಂದರೆ ಆಧ್ಯಾತ್ಮಿಕ, ಸಾಮಾಜಿಕ, ರಾಜಕೀಯ, ವಿದ್ಯಾಕ್ಷೇತ್ರ, ಸಾಂಸ್ಕೃತಿಕ ಕ್ಷೇತ್ರ ಅಥವಾ ಯಾವುದೇ ಕ್ಷೇತ್ರದಲ್ಲಾಗಲಿ ಮಹತ್ತರವಾದಂತಹ ಕೆಲಸವನ್ನು ಮಾಡಿದರೆ ಅಂತಹವರನ್ನು ನೆನೆಸಿಕೊಳ್ಳುವಂತಹ ಕೃತಜ್ಞತೆಯ ಭಾವ ನಮ್ಮ ದೇಶದಲ್ಲಿ ಇನ್ನೂ ಇದೆ, ಆ ಸಂಸ್ಕೃತಿ ಇನ್ನೂ ಉಳಿದಿದೆ ಅಂತ ಅನ್ನಿಸುತ್ತದೆ. ಆ ಸಂಸ್ಕೃತಿಯ ಪ್ರತೀಕವಾಗಿ ಇವತ್ತು ಒಂದು ಮಹಾಪುಷ್ಪ ಅರಳಿದ ಹಾಗೆ ಈ ಒಂದು ದೊಡ್ಡ ಸಭೆಯಲ್ಲಿ ಇಷ್ಟೊಂದು ಜನ ಸೇರುತ್ತಾರೆ. ಅವರ ಮುಖಗಳನ್ನು ನೋಡಿದಾಗ ನನಗೆ ಈ ಒಂದು ಸಮಾಜದಲ್ಲಿ ಅವರ ಮುಖಗಳು ಹೇಗೆ ಅರಳುತ್ತವೆ ಅಂದರೆ ಮುಂದಿನ ಭವಿಷ್ಯ ತುಂಬಾ ಚೆನ್ನಾಗಿದೆ ಅನ್ನುವ ಒಂದು ಆಶಾಭಾವ ನಮಗೆ ಮೂಡುತ್ತದೆ. ಇಂತಹ ಒಬ್ಬ ಮಹಾವ್ಯಕ್ತಿಯ 82ನೆಯ ಜನ್ಮದಿನೋತ್ಸವವನ್ನು ನಾವು ಇವತ್ತು ಅತ್ಯಂತ ಸಂತೋಷದಿಂದ, ಸಂಭ್ರಮದಿಂದ, ಆನಂದದಿಂದ ನಾವು ಆಚರಿಸುತ್ತಾ ಇದ್ದೇವೆ. ಕೇವಲ ಎಪ್ಪತ್ತು ವರ್ಷಗಳಲ್ಲಿ ಅವರು ಮಾಡಿದಂತಹ ಕೆಲಸಗಳು ಬಹುಶಃ ನೂರೈವತ್ತು ಇನ್ನೂರು ವರ್ಷ ಗಳಾದರೂ ಯಾರು ಮಾಡಲಾರರು ಅಂತ ಅನ್ನಿಸುತ್ತದೆ. ಬಹುಶಃ ತಮ್ಮ ಇಡೀ ಬದುಕನ್ನು ಅಷ್ಟು ಸಾಂಗವಾಗಿ ಆದಷ್ಟು ಬೇಗ ಎಲ್ಲ ಕೆಲಸಗಳನ್ನು ಮಾಡಿಬಿಡಬೇಕು ಅನ್ನುವಂತಹ ಒಂದು ಮಹತ್ತರವಾದ ಆತುರದಿಂದ ನೂರು ವರ್ಷ ಬಾಳುವಂತಹ ದೇಹವನ್ನು ಅರವತ್ತೇ ವರ್ಷಗಳಲ್ಲಿ ಸಾಂದ್ರವಾದಂತಹ ಬದುಕನ್ನು ಬದುಕಿ ಅದನ್ನು ದುಡಿಸಿಕೊಂಡಿದ್ದರಿಂದ ಆ ದೇಹ ತಡೆಯದೇ ಹೋಯಿತು. ಯಾಕೆಂದರೆ ಎಷ್ಟರಮಟ್ಟಿಗೆ ದುಡಿದರು ಅಂದರೆ ಸಮಾಜಕ್ಕೋಸ್ಕರವಾಗಿ, ಜನರ ಕಲ್ಯಾಣಕ್ಕಾಗಿ ಎಪ್ಪತ್ತೇ ವರ್ಷಗಳಲ್ಲಿ ಆ ದೇಹ ತನ್ನ ಕೆಲಸವನ್ನು ನಿಲ್ಲಿಸಿತು. ಸಾಕು ಮಾಡಯ್ಯ ತಂದೆ ಲೋಕದಾಟವನಿನ್ನು ತೆರಪುಗೊಡು ತಂದೆ, ಬಂದಿಹೆನು ಬಸವನು ನೊಂದೇ ಅಂತ ಬಸವಣ್ಣನವರು ಹೇಳಿದ ಹಾಗೆ ಅವರು ಕೊನೆಯವರೆಗೂ ನಗುನಗುತ್ತಾನೇ ಇದ್ದರು. ಎಷ್ಟೆಲ್ಲ ತೊಂದರೆಗಳಿದ್ದರೂ ಸದಾ ಮಂದಸ್ಮಿತರಾಗುತ್ತಿದ್ದರು. ಒಬ್ಬ ಹೇಳುತ್ತಾನೆ ಹೆಸರಿಲ್ಲದ ಹಾಗೆ ನೂರ್ಕಾಲ ಬದುಕಿದರೇನು ಕ್ರಿಮಿಗಳ ಹಾಗೆ ಮಾಡುವ ಕೆಲಸ ದಿವ್ಯವಾಗಿರಬೇಕು, ತೇಜೋಮಯವಾಗಿರಬೇಕು, ತುಂಬಾ ಚಟುವಟಿಕೆಯಿಂದ ಕೂಡಿರಬೇಕು. ಹೆಸರಿಲ್ಲದೇ ಬದುಕಿದರೆ ನಮ್ಮಂತಹವರು ಏನು ಪ್ರಯೋಜನ ಅಂತ. ಸದಾ ಜ್ಞಾಪಿಸಿಕೊಳ್ಳುವ ಹಾಗೆ ಅಲ್ಪ ಕಾಲ ಬದುಕಿದರೂ ಸಾರ್ಥಕವಾದ ಬದುಕನ್ನು ಬದುಕಿದರೆ ಅಂತಹವರನ್ನು ಸಮಾಜ ಯಾವಾಗಲೂ ಸ್ಮರಿಸಿಕೊಳ್ಳುತ್ತದೆ ಎನ್ನುವುದಕ್ಕೆ ನಮ್ಮ ರಾಜೇಂದ್ರ ಮಹಾಸ್ವಾಮಿಗಳವರು ಒಂದು ಒಳ್ಳೆಯ ನಿದರ್ಶನ ಅಂತ ಹೇಳಬಹುದು. ರಾಜೇಂದ್ರ ಶ್ರೀಗಳವರನ್ನು ನೆನೆಸಿಕೊಂಡಾಗ ನನ್ನ ಮನಸ್ಸಿಗೆ ಬರುವಂತಹ ವಿಚಾರ, ಭಾವನೆ ಏನು ಅಂದರೆ ನಮ್ಮಲ್ಲಿ ಅನೇಕ ಮಠಗಳಿವೆ. ಸಮಾಜದಲ್ಲಿ ಆಧ್ಯಾತ್ಮಿಕವಾದ ಜಾಗೃತಿಯನ್ನುಂಟುಮಾಡುವುದಕ್ಕೆ ಈ ಮಠಗಳ ಅಗತ್ಯ ಯಾವಾಗಲೂ ಇದೆ. ಪ್ರತಿಯೊಂದಕ್ಕೂ ಒಂದು ಸ್ಥಾನ ಉಂಟು ನಮ್ಮ ಸಮಾಜದಲ್ಲಿ. ಅದು ಸರಿಯಾದ ಕ್ರಮದಲ್ಲಿ ತನ್ನ ಕಾರ್ಯಭಾರವನ್ನು ಸಮಾಜದಲ್ಲಿ ನಿರ್ವಹಿಸುತ್ತಿರಬೇಕು.

ಆದರೆ ಇವತ್ತಿನ ದಿವಸ ಯಾವುದೇ ಒಂದು ಮಠ ಆಧ್ಯಾತ್ಮಿಕದತ್ತ ತನ್ನ ಗಮನ ಕೊಡುವುದರ ಜೊತೆಗೆ, ಸಾಮಾಜಿಕವಾಗಿ ಜನರನ್ನು ಮೇಲೆ ಎತ್ತುವಂತಹ ಕೆಲಸವನ್ನು ಮಾಡಬೇಕಾಗಿದೆ. ದೇಶದಲ್ಲಿ ಎರಡು ಬಗೆಯ ಜನರಿದ್ದಾರೆ. ಉಳ್ಳವರು ಹಾಗೂ ಇಲ್ಲದವರು. ಇಲ್ಲದವರ ಸಂಖ್ಯೆ ವಿಪರೀತ, ಅಗಾಧ. ಈ ಇಲ್ಲದಿರುವವರ ಬಗ್ಗೆ ಏನಾದರೂ ಒದಗಿಸುವುದಕ್ಕೆ ಮಠ ತನ್ನ ಪ್ರಭಾವದಿಂದ ಏನಾದರು ಮಾಡಬಹುದೇ? ಎನ್ನುವುದರ ಬಗ್ಗೆ ನಾವು ಚಿಂತನೆ ನಡೆಸಬೇಕಾಗಿದೆ. ದೇವರು ಬಂದರೂ ಕೂಡ ಅನ್ನದ ರೂಪದಲ್ಲೇ ಬರಬೇಕು ಅಂತ ವಿವೇಕಾನಂದರು ಹೇಳುತ್ತಿದ್ದುದನ್ನು ನಾವು ಮರೆತಿಲ್ಲ. ಅದು ಪ್ರತಿಧ್ವನಿಸುತ್ತಾ ಇರುತ್ತದೆ ನಮ್ಮಲ್ಲಿ. ಮಹಾತ್ಮ ಗಾಂಧಿಯವರು ಹೇಳುತ್ತಾ ಇದ್ದರು ಪ್ರತಿಯೊಬ್ಬ ಭಾರತೀಯನ ಕಣ್ಣೀರನ್ನು ಒರೆಸುವವರೆಗೆ ನನಗೆ ಶಾಂತಿ, ನೆಮ್ಮದಿ, ವಿಶ್ರಾಂತಿ ಅನ್ನುವುದೇ ಇಲ್ಲ. ಎಂದು. ಅದನ್ನು ಇವತ್ತು ರಾಜೇಂದ್ರ ಶ್ರೀಗಳವರು ಬಹಳ ಚೆನ್ನಾಗಿ ನಿರ್ವಹಿಸಿದ್ದಾರೆ.

ರಾಜೇಂದ್ರ ಶ್ರೀಗಳವರು ಚಿಕ್ಕವಯಸ್ಸಿನಿಂದಲೇ ಸಮಾಜದ ಒಳಿತಿನ ಬಗೆಗೆ ಯೋಚಿಸುತ್ತಿದ್ದರು. ಯಾವ ವಯಸ್ಸಿನಲ್ಲಿ ಮಕ್ಕಳು ಆಟವಾಡಿಕೊಂಡು ಇರಬೇಕಾಗಿತ್ತೋ, ಆ ವಯಸ್ಸಿನಲ್ಲಿ ಜಗತ್ತಿನ ಆಟವನ್ನು ನೋಡಿ ಅದರ ಬಗ್ಗೆ ಯೋಚನೆಯನ್ನು ಮಾಡುವಂತಹ ವ್ಯಕ್ತಿತ್ವ ರಾಜೇಂದ್ರ ಶ್ರೀಗಳವರದ್ದು. ಹೀಗಾಗಿ ಆ ವಯಸ್ಸಿನಲ್ಲಿ ರಾಜೇಂದ್ರಗುರುಗಳು ಜ್ಞಾನವನ್ನು ವಿಸ್ತರಿಸಿಕೊಳ್ಳುವ ಹಾಗೂ ವಿಶಾಲಗೊಳಿಸುವ ಜೊತೆಗೆ ಜಗತ್ತಿನ ಕಡೆಗೆ ಚಿಂತನೆ ಹರಿಸುವುದಕ್ಕೆ ಪ್ರಯತ್ನಪಟ್ಟರು. ಆ ಸಂದರ್ಭದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭ ಮಾಡಬೇಕು ಅಂತ ಮನಸ್ಸು ಮಾಡಿದರು.

ಮಹಾವ್ಯಕ್ತಿಗಳಿಗೆ ಮನಸ್ಸು ಬಂತು ಅಂದರೆ ಹೇಗಾದರೂ ಮಾಡಿ ಅವಕಾಶ ಒದಗಿಬರುತ್ತದೆ. ಕ್ರಿಯಾಸಿದ್ಧಿ ತತ್ವೇಭವತಿ ಮಾತಾಂ. ಮಹಾಸಿದ್ಧಿಗಳಿಗೆ ಉಪಕರಣ ಮುಖ್ಯವಲ್ಲ ಸತ್ವ ಒಳಗಡೆ ಇದ್ದರೆ ಕ್ರಿಯಾಸಿದ್ಧಿ ತಾನಾಗೇ ಆಗುತ್ತದೆ. ಅದನ್ನು ನಾವು ರಾಜೇಂದ್ರ ಸ್ವಾಮಿಗಳವರಿಂದ ಕಲಿಯಬೇಕು. ಕ್ರಿಯಾಸಿದ್ಧಿಯವನ್ನು ಅವರು ಹೇಗೆ ದೊರಕಿಸಿಕೊಂಡರು ಅಂದರೆ ಒಂದು ಸಂದರ್ಭದಲ್ಲಿ ತಮ್ಮ ರುದ್ರಾಕ್ಷಿ ಮಾಲೆಯಲ್ಲಿದ್ದಂತಹ ಚಿನ್ನದ ಕವಚವನ್ನು ತೆರೆದರು, ಅದಕ್ಕೆ ಕಟ್ಟಿದ ಚಿನ್ನದ ತಂತಿಯನ್ನು ತೆಗೆದರು. ಅಲ್ಲಿ ರುದ್ರಾಕ್ಷಿ ಮುಖ್ಯ ಅದು ಪವಿತ್ರ. ಚಿನ್ನ ಹೋದರೂ ಪರವಾಗಿಲ್ಲ ಅಂತ ಅದನ್ನು ತೆಗೆದು ಮಾರಿ ವಿದ್ಯಾರ್ಥಿನಿಲಯವನ್ನು ನಡೆಸಿದರು. ಅವರ ಮನಸ್ಸು ಹೇಗಿದೆ ಅನ್ನುವುದಕ್ಕೆ ಇದೇ ಸಾಕ್ಷಿ. ಹೀಗಾಗಿ ಇವತ್ತಿನ ದಿವಸ ಮೈಸೂರು ಜಿಲ್ಲೆ ಹಾಗೂ ಹೊರಗಡೆ ಈ ಸಂಸ್ಥೆಯ ಆಶ್ರಯದಲ್ಲಿ ಅನೇಕ ವಿದ್ಯಾಸಂಸ್ಥೆಗಳು, ವಿದ್ಯಾರ್ಥಿನಿಲಯಗಳು, ತಾಂತ್ರಿಕ ಶಿಕ್ಷಣ ಕಾಲೇಜು, ಪಾಲಿಟೆಕ್ನಿಕ್, ವೈದ್ಯಕೀಯ, ದಂತವೈದ್ಯ, ಔಷಧ ವಿಜ್ಞಾನ, ಕಾನೂನು, ದೈಹಿಕ ಶಿಕ್ಷಣ ಕಾಲೇಜು, ನರ್ಸಿಂಗ್, ತರಬೇತಿ ಕೇಂದ್ರಗಳು, ಪ್ರಥಮದರ್ಜೆ ಕಾಲೇಜು, ಕಿರಿಯ ಕಾಲೇಜು, ಪ್ರೌಢಶಾಲೆಗಳು, ಪ್ರಾಥಮಿಕ ಶಾಲೆಗಳು, ವಿಶೇಷ ಶಾಲೆಗಳು, ಬಾಲವಾಡಿಗಳು,

ಆರೋಗ್ಯ ಕೇಂದ್ರ ಇಷ್ಟೆಲ್ಲವನ್ನು ನಡೆಸುತ್ತಿರುವ ಈ ಸಂಸ್ಥೆ ವಿಶ್ವವಿದ್ಯಾನಿಲಯಕ್ಕಿಂತ ಬೃಹತ್ತಾಗಿದೆ. ವಿಶ್ವವಿದ್ಯಾನಿಲಯ ಕೇವಲ ಆಡಳಿತ ದೃಷ್ಟಿಯಿಂದ ಕೆಲವು ಕಾಲೇಜುಗಳನ್ನು ಮಾತ್ರ ಹೊಂದಿದೆ. ಕೆಲವು ಕಾಲೇಜುಗಳಿಗೆ ವಿದ್ಯಾಸಂಬಂಧವಾದ ಮೇಲ್ವಿಚಾರಣೆ ಮಾತ್ರ ಹೊಂದಿರುತ್ತದೆ. ಉಳಿದಿದ್ದನ್ನು ಸರ್ಕಾರ ನಿರ್ವಹಿಸುತ್ತದೆ. ಆದರೆ ಈ ಸಂಸ್ಥೆ ಇಷ್ಟೊಂದು ಶಿಕ್ಷಣಸಂಸ್ಥೆಗಳನ್ನು ನಡೆಸಬೇಕಾಗಿದ್ದರೆ, ಪ್ರತಿಯೊಂದಕ್ಕೂ ಅಗತ್ಯವಾದಂತಹ ಸಾಧನಸಂಪತ್ತುಗಳನ್ನು ಗಳಿಸಿಕೊಳ್ಳಬೇಕಾಗಿದ್ದರೆ ಅವರ ಮಹತ್ವ ಎಂತಹದ್ದು ಎಂದು ಗೊತ್ತಾಗುತ್ತದೆ. ಇಲ್ಲಿ ಶಿಕ್ಷಣವನ್ನು ಪಡೆದಂತಹ ಪ್ರತಿಯೊಬ್ಬರೂ ತಮ್ಮ ಸಂಸಾರವನ್ನು ನಡೆಸಿಕೊಂಡು ಹೋಗುವುದನ್ನು ನೋಡಿದರೆ ದಿನವೂ ಅನ್ನದಾಸೋಹ ಸಾವಿರಾರು ಮನೆಯಲ್ಲಿ ನಡೆಯುತ್ತಾ ಇದೆ. ಅದಕ್ಕಾಗಿ ನನಗೆ ಈ ಮಠದ ಬಗ್ಗೆ ವಿಶೇಷವಾದ ಗೌರವ. ಇವತ್ತು ಸಮಾಜದಲ್ಲಿ ಇದನ್ನು ಮಾಡಬೇಕು. ಇರುವವರ ಮತ್ತು ಇಲ್ಲದಿರುವವರ ನಡುವೆ ಇರುವ ಅಂತರವನ್ನು ಹೋಗಲಾಡಿಸಬೇಕು. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಇಲ್ಲಿ ಹೇಳಲೇಬೇಕಾಗುತ್ತದೆ. ಬಸವಣ್ಣನವರೇ ಈ ರೂಪದಲ್ಲಿ ಅವತಾರ ತಾಳಿ ಇಷ್ಟೆಲ್ಲ ಕೆಲಸ ಮಾಡಿರಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಕೃಪೆ : 'ಘನ–ಮನ' (ಜೆಎಸ್‌ಎಸ್ ಗ್ರಂಥಮಾಲೆ ಪ್ರಕಟಣೆ)**

□

ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತ್ತಯ್ಯಾ.
ಬಯಲ ಜೀವನ ಬಯಲ ಭಾವನೆ,
ಬಯಲು ಬಯಲಾಗಿ ಬಯಲಾಯಿತ್ತಯ್ಯಾ.
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ.

**– ಅಲ್ಲಮಪ್ರಭುದೇವರು**

ವೀರಶೈವ ಟೀಕು ಸಾಹಿತ್ಯ ಸರಣಿ

# ಶಬರಶಂಕರವಿಲಾಸ-ಟೀಕು : ದ್ವಿತೀಯಾಶ್ವಾಸ

**ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು**

ಚ॥ ಉದಯಿಸಿ ಚಂದ್ರಮನುಮಸ್ತನಗಾಗ್ರದೊಳಿರ್ಪ ಭಾನುವುಂ ।
ಪದೆದು ವಿಳಾಸದಿಂ ತಳೆದ ಶಂಖದ ಚಕ್ರದ ಮಾಳ್ಕೆಯಂ ಮನ ॥
ಕ್ಕೊದವಿಸೆ ಪೀತವಾಸದವೊಲೊಪ್ಪಿರೆ ಗೈರಿಕಧಾತು ಮೇಘಮೊಂ ।
ದಿದ ಗಿರಿ ಕೃಷ್ಣರೀತಿವಡೆದೊಪ್ಪುಗುಮಂತದು ತಳ್ತ ಸಂಜೆಯೋಳ್ ॥ ೫೯ ॥

**ಟೀಕ** ॥ ಉದಯಿಸಿ ತೋರ್ಪ – ಮೂಡಿ ಕಾಣಿಸುವ, ಚಂದ್ರಮನುಂ – ಚಂದ್ರನು, ಅಸ್ತನಗಾಗ್ರದೊಳಿರ್ಪ – ಪಶ್ಚಿಮಾದ್ರಿ ಶಿಖರದಲ್ಲಿರುವ, ಭಾನುವುಂ – ಸೂರ್ಯನು, ಪದೆದು – ತಿಳಿಯಲ್ಪಟ್ಟ, ವಿಳಾಸದಿಂ – ವಿನೋದದಿಂದ, ತಳೆದ – ಧರಿಸಿದ, ಶಂಕದ – ಧವಳಾಬ್ಜದ ಚಕ್ರದ – ಚಕ್ರಾಯುಧದ, ಮಾಳ್ಕೆಯಂ – ಬಗೆಯನ್ನು, ಮನಕ್ಕೆ – ನೋಡುವವರ ಚಿತ್ತಕ್ಕೆ, ಒದವಿಸೆ – ಉಂಟುಮಾಡುತ್ತಿರಲು, ಗೈರಿಕಧಾತು – ಬೆಟ್ಟದಲ್ಲಿ ಹುಟ್ಟುವ ಪಚ್ಚತಾಳಕ ಮೊದಲಾದುವು, ಪೀತವಾಸದವೋಲು – ಪಿತಾಂಬರದಂತೆ, ಒಪ್ಪಿರೆ – ಚನ್ನಾಗಲೂ ಬೆಳಗುತ್ತಿರಲು, ಮೇಘಮೊಂದಿದ – ಕಪ್ಪು ಮೋಡ ಮುಚ್ಚಿದ, ಗಿರಿ – ಇಂದ್ರಕೀಲಾದ್ರಿಯು, ಕೃಷ್ಣರೀತಿವಡೆದು – ವಿಷ್ಣುವಿನ ಬಗೆಯಂ ಪಡೆದು, ತಳ್ತ ಸಂಜೆಯೋಳ್ – ಪಲ್ಲವಿಸಿದ ಸಂಧ್ಯಾಕಾಲದಲ್ಲಿ, ಅದಂತೊಪ್ಪುಗುಂ – ಆ ಇಂದ್ರಕೀಲವು ಹಾಗೆ ಬೆಳಗುವದು.

**ತಾ** ॥ ಸಂಜೆಯ ಹೊತ್ತಿನಲ್ಲಿ ಬೆಟ್ಟದ ಮೂಡಲಿನಲ್ಲಿ ಬೆಳಗೆ ಚಂದ್ರೋದಯವು ಪಡುವಲಿನಲ್ಲಿ ಕೆಂಪಗೆ ಸೂರ್ಯಾಸ್ತವು ಕಾಣಲ್ಪಡುತ್ತಿರುವಲ್ಲಿ ಶಂಖಚಕ್ರಗಳನ್ನು ಧರಿಸಿದ ಹಾಗಿತ್ತು. ಅರಿದಳವೂ ತಾಳಕವೂ ಮೊದಲಾದ ಧಾತುಗಳು, ಪೀತಾಂಬರದ ಹಾಗೆ ಹೊಳೆಯುತ್ತಿದ್ದವು. ಮೋಡ ಮುಚ್ಚಿದ ಬೆಟ್ಟವು ಕಪ್ಪಗೆ ವಿಷ್ಣುವಿನ ಹಾಗಿತ್ತು. ಗಮ್ಯೋಪಮಾಲಂಕಾರವು ॥ ೬೦ ॥

ಕಂ॥ ಅರುಣೋದಯದರುಣದ್ಯುತಿ ।
ಗಿರಿಕಟಕದ ಪಳಿಕದಲ್ಲಿ ಬಿಂಬಿಸೆ ಕಾಣು ॥
ತ್ತರುಣಜಲಂಗೆತ್ತಲ್ಲಿಯೆ ॥
ಹರಿಣಾರಿಯ ಮರಿಗಳೆಯ್ದಿನಕ್ಕುತ್ತಿರ್ಕುಂ ॥ ೬೧ ॥

**ಟೀಕ** ॥ ಅರುಣೋದಯದ – ಉದಯಸಂಧ್ಯೆಯ ಕೆಂಚಾಯದ, ಅರುಣದ್ಯುತಿ

– ಕೆಂಬೆಳಕು, ಗಿರಿಕಟಕದ – ಗುಡ್ಡದ ತಪ್ಪಲಿನ, ಪಳಿಕದಲ್ಲಿ – ಸ್ಫಟಿಕದಲ್ಲಿ, ಬಿಂಬಿಸೆ – ಪ್ರತಿಫಲಿಸಲು, ಕಾಣುತ್ತ – ನೋಡುತ್ತ, ಅರುಣಜಲಂಗೆತ್ತು – ರಕುತವೆಂದುಕೊಂಡು ಅಲ್ಲಿಯೆ ಬೆಟ್ಟದೊಳಗಣ ಹರಿಣಾರಿಯ ಮರಿಗಳು – ಹುಲಿಯ ಪಿಳ್ಳೆಗಳು, ಎಯ್ದಿ – ಬಂದು, ನಕ್ಕುತಿರ್ಕುಂ – ನಾಲಿಗೆಯಿಂದಲೇ ಹನಗೊಳುತ್ತಿರ್ಪುವು.

**ತಾ** ॥ ಸ್ಫಟಿಕತುಲಾಶಿಲದಲ್ಲಿ ಪಡಿನೆಳಲಾದ ಸಂಧ್ಯಾರಾಗವನ್ನು ಹುಲಿಯ ಮರಿಗಳು ರುಧಿರಭ್ರಾಂತಿಯಿಂದ ನೆಕ್ಕುತಿರುವವು. ಇದರಿಂದ ಪರ್ವತದಲ್ಲಿ ನಿರ್ಮಲಗಳಾದ ಸ್ಫಟಿಕಶಿಲೆಗಳು ವಿಶೇಷವಾಗಿರ್ಪುದೆಂಬರ್ಥವು । ಪುಣ್ಯಫಲಿತವಾದ ಪರ್ವತೌನ್ನತ್ಯವು ವ್ಯಂಗ್ಯವಾಗಿರ್ಪುದು । ಭ್ರಾಂತಿಮದಲಂಕಾರವು ಗೆತ್ತುಯೆಂಬುದರಿಂದ ವಾಚ್ಯಕವಾಗಿದೆ. ಹರಿಣ–ಹುಲ್ಲೆಗಳಿಗೆ ಹರಿ ಹಗೆಯಾದ್ದು ಹುಲಿಯೆಂದು ರೂಢವು. ಅರುಣನು ಸೂರ್ಯಸಾರಥಿಯಾದ ನೂರುವು ಅರುಣ – ಕೆಂಪಾದ, ಅರುಣಜಲಕೆಂಪುನೀರೆಂದು ರಕುತವೆಂಬುದು ರೂಢಿ ಪಳಿಕಂ ಸ್ಫಟಿಕಶಬ್ದ ತದ್ಭವವು । ಇರ್ಕುಂ – ಇರ್ಧಾತುವಿನ ವಚನಭೇದವಿಲ್ಲದ ಪ್ರತ್ಯಯವುಳ್ಳ ನಿಷ್ಪನ್ನ ಕ್ರಿಯಾರೂಪವು (ನಕ್ಕು ಧಾತುಲೇಹನಾರ್ಥಕ) ೫೩

ಕಂ॥ ಪಳುಕಿನ ಪಾಸರೆಯಲಿ ನಿ।
ರ್ಮಳತೆಯನಾ ಗಿರಿಯ ಖಚರತತಿ ಕಾಣ್ಕುಮಿಳಾ ॥
ತಳಮಂ ತಳದಹಿತಳಮಣಿ ।
ವಿಲಸಿತ ರುಚಿ ವಿಸ್ಫುರತ್ಫಣಾಮಂಡಲಮಂ ॥ ೩೨ ॥

**ಟೀಕ** ॥ ಆ ಗಿರಿಯ – ಆ ಬೆಟ್ಟದ, ಪಳುಕಿನ – ಸ್ಫಟಿಕದ, ಪಾಸರೆಯಲಿ – ಬಂಡೆಯಲ್ಲಿ, ಖಚರತತಿ – ದೇವಸಮೂಹವು, ನಿರ್ಮಳತೆಯಂ – ನೈರ್ಮಲ್ಯದಿಂದ, ಇಳಾತಳಮಂ ತಳೆದ – ಭೂಮಿಯಂ ಹೊತ್ತ, ಫಣಿಪನ – ನಾಗೇಂದ್ರನ, ಮಣಿವಿಲಸಿತ – ರತ್ನಗಳಿಂ ಶೋಭಿಸುವ, ರುಚಿವಿಸ್ಫುರತ್ ಕಾಂತಿಯಿಂ – ಹೊಳೆಯುವ, ಫಣಾಮಂಡಲಮಂ – ಹೆಡೆಗಳ ಗುಂಪನ್ನು, ಕಾಣ್ಗುಂ – ನೋಡುವದು.

**ತಾ** ॥ ಭೂಮಿಯ ಪಾತಾಳದ ಅಡಿಯಿಂದ ಸ್ಫಟಿಕವಾಗಿಬೆಳದಿರುವ ಬಂಡೆಯು ನಿರ್ಮಲವಾಗಿರುವದರಿಂದ ಅದರ ಕೆಳಗೆ ಹೊತ್ತಿರುವ ಆದಿಶೇಷನ ರತ್ನದ ಹೆಡೆಗಳನ್ನು ಮೇಲೆಯಿರುವ ದೇವತೆಗಳು ಕಾಣುತ್ತಿರುವರು । ಸ್ವರ್ಗದಲ್ಲಿರುವ ದೇವತೆಗಳಿಗೆ ಪಾತಾಳಶೇಷನ ಹೆಡೆಗಳು ನಡುವೆ ಭೂಧರದ ಪಳುಕಿನ ಅರೆಯಂಬ ಕನ್ನಡಿಯಲ್ಲಿ ಕಾಣಿಸಿದವೆಂದು ಭಾವವು. ಇದರಿಂದ ಆಮೂಲಾಗ್ರವಾಗಿ ಅತಿನಿರ್ಮಲವಾದ ಸ್ಫಟಿಕಶಿಲಾಭಾಗವು ಈ ಬೆಟ್ಟದಲ್ಲಿ ಕನ್ನಡಿಯ ಹಾಗೆ ಬೆಳಗುತ್ತಿರುವದೆಂದು ಅತಿಶಯವಾಗಿ ಬಣ್ಣಿಸಲ್ಪಟ್ಟಿದೆ ॥ ೩೨ ॥

ಕಂ॥ ಅಹಿಪತಿ ನಿಜಭಾರಮನೀ ।
ಮಹಿಧರಮುಂ ಪೊತ್ತುದೆಂದು ಫಣೀಮಣಿಗಣಮಂ ॥
ವಹಿಲದಿನಿತ್ತನೋ ಪೇಳೆನೆ ।
ಬಹುರತ್ನಕದಂಬಮದರತ ತಪ್ಪಲೊಳೆಸೆಗುಂ ॥ ೩೩ ॥

**ಟೀಕ** ॥ ಅಹಿಪತಿ – ನಾಗರಾಜನು, ನಿಜಭಾರಮಂ – ತನ್ನ ಹೊರೆಯನ್ನು, ಈ ಮಹೀಧರಮುಂ – ಈ ಬೆಟ್ಟವು, ಪೊತ್ತುದೆಂದು – ಹೊತ್ತಿದೆಯೆಂದು, ಫಣಿಮಣಿಗಣಮಂ – ಹೆಡೆಗಳ ರತ್ನಗಳ ಗುಂಪನ್ನು, ವಹಿಲದಿಂ – ಪ್ರೀತಿಯಿಂದ, ಇತ್ತನೋ ಪೇಳೆನೆ ಕೊಟ್ಟನೋ ಹೇಳೆಂಬಂತೆ ಅದರ ಇಂದ್ರಕೀಲಾದ್ರಿಯ ತಪ್ಪಲೊಳು, ಸಾನುವಿನಲ್ಲಿ ಬಹುರತ್ನಕದಂಬಂ – ಅನೇಕ ರತ್ನಸಮೂಹವು, ಎಸೆಗುಂ – ಶೋಭಿಸುವದು.

ತಾ ॥ ಆ ಬೆಟ್ಟದಲ್ಲಿರುವ ಅನೇಕ ರತ್ನಗಳು ಎಲ್ಲಿ ಬಂದವೆಂದರೆ ಆದಿಶೇಷನು ಭೂಮಿಯನ್ನು ಹೊರುವ ತನ್ನ ಕೆಲಸಕ್ಕೆಬೆಟ್ಟವು ಭೂಧರವೆನಿಸಿ ಸಹಾಯವಂ ಮಾಡುವದರಿಂದ ಅದಕ್ಕೆ ತನ್ನ ಹೆಡೆಗಳ ರತ್ನಗಳನ್ನು ಪಾರಿತೋಷಕವಾಗಿ ಕೊಟ್ಟಿದ್ದಾನೆಯೋ ಎಂಬಂತೆ ಇರುವದೆಂದು ಹೇತೂತ್ಪ್ರೇಕ್ಷಾಲಂಕಾರವು । ಇದರಿಂದ ಅನೇಕ ರತ್ನಂಗಳಾ ಬೆಟ್ಟದಲ್ಲಿದ್ದವೆಂದು ಭಾವವು ॥ ೩೩ ॥

ಕಂ॥ ಮೊಗಮಿಟ್ಟೊದಲ್ಕೆಳಸುಗು ।
ಮಗದಗ್ರದ ಕರಡಿಯಮರ್ದುಗೈಯ್ಯನ ಪುತ್ತಂ ॥
ಮಿಗಮನದಂ ಪುಲಿಪೊಯ್ಯ ।
ಲ್ಬಗೆವುದು ತಾನೊಂದೊಡದ್ರಿಯೇನುನ್ನತಮೋ ॥ ೩೪ ॥

**ಟೀಕ** ॥ ಅಗದ – ಇಂದ್ರಕೀಲದ, ಅಗ್ರದ – ತುದಿಯ, ಕರಡಿ – ಭಲ್ಲೂಕವು, ಅಮರ್ದುಗೈಯ್ಯನ – ಅಮೃತಕಿರಣನಾದ ಚಂದ್ರನ, ಪುತ್ತಂ – ಹುತ್ತವನ್ನು, ಮೊಗಮಿಟ್ಟು – ತನ್ನ ಮುಸುಡಮಿಟ್ಟು, ಊದಲ್ಕೆ – ಊದುವದಕೆ, ಎಳಸುಗುಂ – ಬಯಸುವದು, ಅದಂ – ಆ ಕಳಂಕವನ್ನೆ, ಮಿಗಮಂ – ಮೃಗವೆಂದು, ಪುಲಿ – ಹುಲಿಯು, ತಾಂ – ತಾನು, ಪೊಯ್ಯಲ್ಬಗೆವುದು – ಹೊಡೆಯಲ್ಬಯಸುವದು, ಎಂದೊಡೆ – ಎಂದರೆ, ಅದ್ರಿ – ಬೆಟ್ಟವು, ಏನುನ್ನತ್ತಮೋ – ಎಷ್ಟು ಉದ್ದವಾದುದೋ!

**ತಾ** ॥ ಆ ಬೆಟ್ಟದ ಶಿಖರವನ್ನು ಸೋಂಕುತ್ತ ಚಂದ್ರಬಿಂಬವು ಬಂದಾಗ ಅದರೊಳಗಿನ ಕಳಂಕವನ್ನು ಗೆದ್ದಲ ಹುತ್ತವೆಂದುಕೊಂಡು ಕರಡಿಯು ಬಾಯಿಬಿಟ್ಟು ಗೆದ್ದಲನ್ನು ಹೀರುವದಕ್ಕೆ ಊದಲೆಳಸುವದು. ಅದೇ ಕಳಂಕವನ್ನು ಹುಲ್ಲೆಯೆಂದುಕೊಂಡು ಹುಲಿಯು ಹೊಡೆಯಲ್ಬಯಸುವುದು ಎಂದು ಹೇಳಿದರೆ ಆ ಮಾತು ದಿಟವಾಗದಿದ್ದರೂ ಬೆಟ್ಟವು ಬಹಳ ಉದ್ದವಾದದ್ದೆಂದು ತಾತ್ಪರ್ಯವು ತೋರುತ್ತೆ. ಅತಿಶಯೋಕ್ತ್ಯಲಂಕಾರವು ॥ ೩೪ ॥

**ವ** ॥ ಮತ್ತಮಾ ನಗೇಂದ್ರಂ ನರೇಂದ್ರನಂತನೇಕ ವಿರಾಜಿತ ಮಣಿಕಟಕರಾಜಿತಮುಂ, ಅಧಿಕಾನನಭ್ರಾಜಿತಮುಂ, ಮರುತ್ಪಥದಂತೆ ಬಹುಲತಾರಾ ರಾಜಿತಮುಂ, ಭಾಸ್ವದ್ವಿಧೂಪಲಸಿತ ರುಚಿಮನೋಜ್ಞಮುಂ, ಮಧುಕರಾಳೀಯಂತೆ ಸಮದ ಪುಂಡರೀಕ ಗಂಡಕಮಂಡಿತಮುಂ, ಸುಗಂಧಸುಮನೋಗಣ ರಾಗಾನ್ವಿತಮುಂ, ದೈತ್ಯಸೈನ್ಯದಂತೆ ಹರಿಪರಾಹತ ಸದ್ಬಲಖಡ್ಗಿಮಂಡಿತಮುಂ, ಮಿಳಿದ್ದಾನವಪುಷ್ಕಳಭರೋಚಿತಮುಂ, ಯಜ್ಞದಾಗಮದಂತೆ ಸದಧ್ವರಚಿತ ವಿಭ್ರಮಶಿಖಿರಾಜಿತಮುಂ, ವಿತತಧೀವರ ಮುಖೋದ್ಗತ

ಶ್ರುತಿವಿಶದಾರಾವ ವಿಜೃಂಭಿತಮುಂ, ಸುವಂಶಾನ್ವಿತಮಾಗಿಯುಂ, ಕುಜಾತಿಸಮೃದ್ಧಮುಂ, ಶಬಲೋಪಯುಕ್ತಮಾಗಿಯುಮವಿಗ್ರಹಾಶ್ರಯಮುಂ, ಮದನರಾಗಮಹಿತಸ್ಥಿತಿಯಾಗಿಯುಂ, ಶಂಬರವಿಲಾಸಾಸ್ಪದಮುಂ, ಘನತರಕ್ಷುಧಾವನ ಸರಕೃಷ್ಣಸಾರವ್ಯಾವೃತ್ತಿಯಾಗಿಯು, ಲುಬ್ಧಕಕುಲಲಕ್ಷಣವ್ಯಾಪಾರಸಂಗತಮುಂ, ವಿರಾಜಿತಾಮ್ರ ಶ್ರೀಯುಕ್ತಮಾಗಿಯುಂ, ಕಪಿಶತಾಲಂಚಿತಮು – ಸರ್ವದಾರೂಪ ಶೋಭಿತಮಾಗಿಯು, ಮತನುಶೋಭಾಸ್ಪದಮೆನಿಸಿರ್ದುದಂತುವುಲ್ಲದೆಯುಂ ॥ ೫ ॥

**ಟೀಕೆ** ॥ ಮತ್ತು – ಮತ್ತು, ಆ ನಗೇಂದ್ರಂ, ಆ ಯಿಂದ್ರಕೀಲಪರ್ವತಶ್ರೇಷ್ಠವು, ನರೇಂದ್ರನಂತೆ – ರಾಜಶ್ರೇಷ್ಠನ ಹಾಗೆ, ಅನೇಕವಿರಾಜಿತ ಮಣಿಕಟಕರಂಜಿತಮಾಗಿಯೂ, ಅಧಿಕಾನನಭ್ರಾಜಿತಮಾಗಿಯೂ ಇದೆ. ನಗೇಂದ್ರನು ಉಪಮೇಯವು ನರೇಂದ್ರನು ಉಪಮಾನವು. ಅನೇಕಪವಿರಾಜಿತಮಣಿ ಕಟಕರಂಜಿತತ್ವವೂ ೧ ಅಧಿಕಾನನಭ್ರಾಜಿತತ್ವವೂ ೧ ಇವೆರಡೂ ಸಾಧಾರಣ ಧರ್ಮಗಳು ಅಂತೆಯೆಂಬುವದು ಉಪಮಾವಾಚಕವು. ಆದ್ದರಿಂದ ಪೂರ್ಣೋಪಮಾಲಂಕಾರವು ಇಲ್ಲಿ ಸಾಧಾರಣಧರ್ಮಪದಗಳಿಗೆ ಉಪಮೇಯಪರವಾಗಿ ಒಂದರ್ಥವೂ ಉಪಮಾನಪರವಾಗಿ ಒಂದರ್ಥವೂ ಆಗುವುದರಿಂದ ಪೂರ್ಣೋಪಮೆಯು ಶ್ಲೇಷಾಲಂಕಾರಮೂಲಕವಾಗಿದೆ. ಉಪಮಾನೋಪಮೇಯಗಳಿಗೆ ಅರ್ಥಸಾಧರ್ಮವಿಲ್ಲದಿದ್ದರೂ ನಾಮುವಾತ್ರ ಸಾದೃಶ್ಯವೆಂದರಿವುದೂ. ಈ ಮೇರೆ ಒಂದುಪಮಾನಕ್ಕೆ ೨ – ೩ ಸಾಧಾರಣ ಧರ್ಮಗಳು ಹೇಳಲ್ಪಟ್ಟಿದೆ. ಈ ವಚನದಲ್ಲಿ ಸರ್ವತ್ರ ಹೀಗೆ ನೋಡಿಕೊಳ್ಳತಕ್ಕದ್ದು. ಇದರಲ್ಲಿನ ಸಾಧಾರಣ ಧರ್ಮವಚನಗಳೆಲ್ಲಕ್ಕೂ ವೊಂದನೆಯ ಅರ್ಥವು ಉಪಮಾನಪರವಾಗಿಯೂ, ಎರಡನೆಯ ಅರ್ಥವು ಉಪಮೇಯಪರವಾಗಿಯೂ ವಿವರಿಸಿ ಬರೆಯಲ್ಪಡುವುದು ಹೇಗೆಂದರೆ

ನರೇಂದ್ರನಂತೆ, ರಾಜಶ್ರೇಷ್ಠನ ಹಾಗೆ, ೧ ಅನೇಕಪ – ಆನೆಗಳಿಂದ, ವಿರಾಜಿತ, ವಿಶೇಷವಾಗಿ ಪ್ರಕಾಶಿಸುವ – ಮಣಿರತ್ನಗಳುಳ್ಳ – ಕಡಕ, ದಂಡುಪಾಳ್ಯಗಳಿಂದ, ರಂಜಿತಂ – ಶೋಭಿಸುವವನು – ಮತ್ತು ಅಧಿಕ – ಹೆಚ್ಚಾದ, ಆನ್ಯನ – ಮುಖಗಳಿಂದ, ಭ್ರಾಜಿತಂ – ಬೆಳಗುತ್ತಿರುವವನು.

**ತಾ** ॥ ದೊರೆಯ ದಂಡಿನಲ್ಲಿ ಆನೆಗಳೂ ರತ್ನಗಳೂ ಬೆಳಗುತ್ತಿವೆ. ಅನೇಕರ ಮುಖಗಳೂ ಹೊಳೆಯುತ್ತಿವೆ. ನಗೇಂದ್ರಂ – ಪರ್ವತಶ್ರೇಷ್ಠವು, ಅನೇಕ – ಬಹುವಾದ, ಪವಿ – ಸಿಡಿಲುಗಳಿಂದಲೂ – ಅಥವಾ ಅನೇಕಪ – ಕಾಡಾನೆಗಳಿಂದಲೂ – ವಿ – ಹಕ್ಕಿಗಳಿಂದಲೂ, ರಾಜಿತ – ದೀಪಿಸುತ್ತಿರುವ, ಮಣಿಕಟಕ – ರತ್ನದಪ್ಪಲ್ಗಳಿಂದ ರಂಜಿತಮಾಗಿರ್ಪುದು. ಮತ್ತು ಅಧಿಕಾನನ – ಕಾಡಿನಲ್ಲಿ – ಭ್ರಾಜಿತಂ – ಬೆಳಗುತ್ತಿರುವುದು.

**ತಾ** ॥ ಬೆಟ್ಟದಲ್ಲಿ ಆನೆಗಳೂ, ಹಕ್ಕಿಗಳೂ, ಸಿಡಿಲುಗಳೂ, ವಜ್ರಗಳೂ, ರತ್ನದ ವಸ್ತುಗಳೂ ಇವೆ. ಬೆಟ್ಟವು ಕಾಡಿನಲ್ಲಿದೆ. ಮರುತ್ಪಥದಂತೆ, ವಾಯುಮಾರ್ಗದ ಹಾಗೆ –

(ಆಕಾಶದಂತೆ) ಬಹುಳ ತಾರಾರಾಜಿತವಾಗಿಯೂ ಮತ್ತು ಭಾಸ್ವದ್ವಿಧೂಪಲಸಿತ ರುಚಿಮನೋಜ್ಞವಾಗಿಯೂ ಇದೆ. ೧ ಬಹುಲ – ಬಹಳವಾದ ತಾರಾ – ನಕ್ಷತ್ರಗಳಿಂದ, ರಾಜಿತಂ, ಬೆಳಗುವುದು ಮತ್ತು ಭಾಸ್ವತ್ – ಸೂರ್ಯನಿಂದಲೂ, ವಿಧು – ಚಂದ್ರನಿಂದಲೂ, ಉಪಲಸಿತ – ಪ್ರಕಾಶಗೊಳಿಸಲ್ಪಟ್ಟ, ರುಚಿ, ಕಾಂತಿಗಳಿಂದ, ಮನೋಜ್ಞಂ – ಮನೋಹರವಾದ್ದು; ಗಗನ. ೨ ಬಹು – ಅನೇಕವಾದ, ಲತಾಬಳ್ಳಿಗಳಿಂದ, ರಾರಾಜಿತಂ – ವಿಶೇಷವಾಗಿ ಬೆಳಗುತ್ತಿರುವುದು. ಮತ್ತು ಭಾಸ್ವತ್ – ಪ್ರಕಾಶಿಸುತ್ತಿರುವ, ವಿಧೂಪಲ – ಚಂದ್ರಕಾಂತಶಿಲೆಗಳ, ಸಿತ – ಬಿಳುಪಾದ, ರುಚಿ – ಕಾಂತಿಯಿಂದ, ಮನೋಜ್ಞಂ – ಮನೋಹರವಾದದ್ದಾಗಿದೆ. ಮಧುಕರಾಳಿಯಂತೆ – ಭೃಂಗಸಮೂಹದ ಹಾಗೆ, ಸಮದಪುಂಡರೀಕಗಂಡಕಮಂಡಿತವಾಗಿಯೂ, ಸುಗಂಧಸುಮನೋಗಣ ರಾಗಾನ್ವಿತಮಾಗಿಯೂ ಇದೆ. ೧ ಸಮದ – ಮದೋದಕದಿಂ ಕೂಡಿದ, ಪುಂಡರೀಕ – ಆನೆಗಳ, ಗಂಡಕ – ಕಪೋಲಗಳಲ್ಲಿ, ಮಂಡಿತಂ – ಅಲಂಕೃತವಾದ, ಸುಗಂಧ – ಪರಿಮಳವುಳ್ಳ, ಸುಮನೋಗಣ – ಪುಷ್ಪಮಂಜದಲ್ಲಿ, ರಾಗಾನ್ವಿತಂ – ಅಭಿಲಾಷದಿಂ ಕೂಡಿದ್ದು – ೨. ಸಮುದ್ರ – ಗರ್ವದಿಂ ಕೂಡಿದ, ಪುಂಡರೀಕ – ಹುಲಿಗಳಿಂದಲೂ, ಗಂಡಕ – ಖಡ್ಗಮೃಗಗಳಿಂದಲೂ, ಮಂಡಿತಂ – ಅಲಂಕೃತಮಾದುದು, ಸುಗಂಧ – ಪರಿಮಳದಿಂದಲೂ, ಸುಮನೋಗಣ – ದೇವಸಂಘದಿಂದಲೂ, ರಾಗ – ಗೈರಿಕಾದಿ ಧಾತುಗಳ ಕೆಂಬಣ್ಣದಿಂದಲೂ, ೨ ಅನ್ವಿತಂ – ಕೂಡಿದ್ದು ॥ * ॥ ಪರ್ವತವು, ದೈತ್ಯಸೈನ್ಯದಂತೆ – ಅಸುರರ ದಂಡಿನ ಹಾಗೆ, ಹರಿವರಾಹತ ಖಡ್ಗಿಮಂಡಿತವಾಗಿಯೂ ಮಿಳದ್ದಾನವಪುಷ್ಕಳಭರೋಚಿತವಾಗಿ ಇದೆ. ೧ – ಹರಿ, ಇಂದ್ರನಿಂದ, ಪರಾಹತ – ಹೊಡದೋಡಿಸಲ್ಪಟ್ಟ, ಸತ್ – ಒಳ್ಳೆಯ – ಬಲ – ಬಲಾಸುರನಿಂದಲೂ, ಖಡ್ಗಿ – ಕತ್ತಿಗಳುಳ್ಳವರಿಂದಲೂ, ಮಂಡಿತಂ – ಅಲಂಕೃತವಾದ್ದು, ಮಿಳಿತ್ – ಕೂಡಿದ, ದಾನವ – ರಾಕ್ಷಸರ, ಪುಷ್ಕಳ – ಪೂರ್ಣವಾದ, ಭರ – ಅತಿಶಯಕ್ಕೆ, ಉಚಿತಂ – ಯೋಗ್ಯವಾಗಿರುವುದು

**ತಾ** ॥ ದೈತ್ಯರ ಸೇನೆಯಲ್ಲಿ ಇಂದ್ರನಿಗೆ ಸೋತ ಬಲಾಸುರನೂ ಖಡ್ಗಪಾಣಿಗಳೂ ಇರುವರು. ಆ ಸೈನ್ಯವು ದಾನವರ ಗುಂಪಿಗೆ ತಕ್ಕದ್ದಾಗಿರುವುದು. ೨. ಹರಿ – ಸಿಂಹದಿಂದ, ಪರಾಹತ – ಹೊಡದು ಸೋಲಿಸಲ್ಪಟ್ಟ, ಸದ್ಬಲ – ಮಹಾಬಲಮುಳ್ಳ, ಖಡ್ಗ ಗುರಾಣಿ ಮೃಗಗಳಿಂದ, ಮಂಡಿತಂ – ಅಲಂಕರಿಸಲ್ಪಟ್ಟದ್ದು, ಮಿಳತ್ – ಕೂಡಿದ, ದಾನ– ಮದೋದಕಮುಳ್ಳ, ವಪುಃ – ಮೈಯುಳ್ಳ, ಕಲಭೆ – ಮರಿಯಾನೆಗಳಿಂದ, ರೋಚಿತಂ – ಬೆಳಗಲ್ಪಟ್ಟಿರುವುದು. ತಾ ॥ ಬೆಟ್ಟದಲ್ಲಿ ಸಿಂಹಗಳು ಖಡ್ಗಮೃಗಗಳನ್ನು ಸೋಲಿಸುತ್ತಿವೆ. ಗಂಡಾನೆಮರಿಗಳ ಮೈಯಲ್ಲಿ ಸೊಕ್ಕು ಬೆವರು ಮೂಡುತ್ತಿದೆ ॥ * ॥ ನಗೇಂದ್ರವು, ಯಜ್ಞದ ಆಗಮದಂತೆ, ಕ್ರತುಶಾಸ್ತ್ರದ ಹಾಗೆ, ಸದಧ್ವರಚಿತವಿಭ್ರಮಶಿಖಿವಿರಾಜಿತವಾಗಿಯೂ, ವಿತತ ಧೀವರ ಮುಖೋದ್ಗತ ಶ್ರುತಿವಿಶದಾರ ವವಿಜೃಂಭಿತಮಾಗಿಯೂ ಇದೆ. ೧

ಸತ್ – ಸಮೀಚೀನವಾದ, ಅಧ್ವರ – ಯಜ್ಞದಲ್ಲಿ, ಚಿತ – ಇಟ್ಟಿಗೆಗಳಿಂದ ಜೋಡಿಸಲ್ಪಟ್ಟ ಕುಂಡದಲ್ಲಿ, ವಿಭ್ರಮ – ವಿಲಾಸಮುಳ್ಳ, ಶಿಖಿ, ಅಗ್ನಿಯಿಂದ, ವಿರಾಜಿತಂ – ವಿಶೇಷವಾಗಿ ಪ್ರಕಾಶಿಸುವುದು ಮತ್ತು ವಿತತ – ವಿಸ್ತಾರವಾದ, ಧೀ – ಬುದ್ಧಿಯಿಂದ, ವರ – ಶ್ರೇಷ್ಠರಾದ ವಿಪ್ರರ, ಮುಖ – ಬಾಯಿಯಿಂದ, ಉದ್ಗತ ಹೊರಡುತ್ತಿರುವ, ಶ್ರುತಿ – ವೇದಗಳ, ವಿಶದ – ಸ್ಪಷ್ಟವಾದ, ಆರವ – ಧ್ವನಿಯಿಂದ, ವಿಜೃಂಭಿತಂ – ಉಚ್ಚಾರ್ಯಗೊಂಡದ್ದು ॥ ತಾ ॥ ಶಾಸ್ತ್ರೋಕ್ತ ಯಜ್ಞದಲ್ಲಿ ಚನ್ನಾಗಿ ಬೆಳಗುವದು, ಜ್ಞಾನಾಧಿಕಾರದ ಬ್ರಾಹ್ಮಣ ವೇದಘೋಷವು ವೆಗ್ಗಳವಾಗಿರ್ಪುದು. ೨. ಸದಧ್ವ – ನಕ್ಷತ್ರಮಾರ್ಗದಲ್ಲಿ, ರಚಿತ – ಮಾಡಲ್ಪಟ್ಟ, ವಿಭ್ರಮ, ವಿಲಾಸಮುಳ್ಳ ಶಿಖಿ– ನವಿಲುಗಳಿಂದಲೂ ವಿ – ಹಕ್ಕಿಗಳಿಂದಲೂ, ರಾಜಿತಂ – ಬೆಳಗುತ್ತಿರುವುದು. ವಿತತ – ವಿಸ್ತಾರವಾದ, ಧೀವರ – ಬೇಡರ, ಮುಖ – ಬಾಯಿಂದ, ಉದ್ಗತ – ಹೊರಟ, ಶ್ರುತಿವಿಶದ – ಕಿವಿಗೆ ಚನ್ನಾಗಿ ಕೇಳಿಸುವ, ಆರವ – ಕೂಗುಗಳಿಂದ, ವಿಜೃಂಭಿತಂ – ರೇಗುವಿಕೆಯುಳ್ಳದ್ದು ॥ ತಾ – ಉದ್ದವಾದ ಬೆಟ್ಟದಲ್ಲಿ ನವಿಲು ಮೊದಲಾದ ಹಕ್ಕಿಗಳು ನಕ್ಷತ್ರದಲ್ಲಿ ತಿರುಗಿ ಬರುತ್ತಿರುವುವು. ಬೇಡರ ಬೇಟೆಯ ಕೂಗುಗಳು ಬಹಳವಾಗಿ ಕೇಳಬರುತ್ತಿರುವುವು. ॥ * ॥ ಇಲ್ಲಿಂದ ಮುಂದಕ್ಕೆ ವಿರೋಧಾಭಾಸಾಲಂಕಾರದಿಂದ ಪರ್ವತವು ವರ್ಣಿಸಲ್ಪಡುತ್ತೆ. ಹೇಗೆಂದರೆ –

ಅರ್ಥಶ್ಲೇಷವುಳ್ಳ ಪದಗಳಿಗೆ ಮುಂಚೆಯೊಂದರ್ಥಮಂ ಪೇಳಿ ವಿರೋಧವಂ ತೋರಿಸಿ ಬಳಿಕಂ ಮತ್ತೊಂದರ್ಥವಂ ಪೇಳುವುದರಿಂದ ಅವಿರೋಧವಂ ತೋರಿದರೆ ವಿರೋಧಾಭಾಸಾಲಂಕಾರವೆನಿಸುವುದು. ಒಂದನೆಯದು ವಿರುದ್ಧಾರ್ಥವಾಗಿಯೂ ೨ನೆಯದು ಅವಿರುದ್ಧಾರ್ಥವಾಗಿಯೂ, ತಿಳಿಯಲ್ತಕ್ಕದ್ದು. ೧. ಸು – ಸಮೀಚೀನವಾದ, ವಂಶ – ಕುಲದಿಂದ ಅನ್ವಿತಂ – ಕೂಡಿದ್ದು ಆಗಿಯೂ, ಆದರೂ ಕು – ಕುತ್ಸಿತವಾದ, ಜಾತಿ – ಕುಲದಿಂದ, ಸಮೃದ್ಧಂ – ಸಂಪನ್ನವಾದುದು. ಇಲ್ಲಿ ಸುವಂಶವು ಕುಜಾತಿಯೂ ಒಂದೆಡೆಯಲ್ಲಿ ಇರ್ಪುದೆಂಬುದೇ ವಿರೋಧವು. ೨. ಸು – ಒಳ್ಳೆಯ, ವಂಶ – ಬಿದುರುಗಳಿಂದ, ಅನ್ವಿತಂ – ಕೂಡಿದುದಾಗಿಯೂ, ಕುಜ – ಮರಗಿಡಬಳ್ಳಿಗಳಿಂದ, ಅತಿ ಸಮೃದ್ಧಮುಂ – ಬಹಳ ಸಂಪನ್ನವಾಗಿಯೂ ಇರುವುದು ಬೆಟ್ಟ ॥ ೧ – ಶಬರ – ಕಿರಾತರಿಗೆ, ಉಪಯುಕ್ತಮಾಗಿಯುಂ – ಉಪಯೋಗಿಸುವುದಾದರೂ | ಆ ವಿಗ್ರಹಾಶ್ರಯಮುಂ, ವಿ – ಪಕ್ಷಿಗಳ, ಗ್ರಹ – ಹಿಡಿಯುವಿಕೆ, ಆಶ್ರಯಂ – ಆಧಾರವು, ನ – ಅಲ್ಲದ್ದು (ಇಲ್ಲಿ ಬೇಡರಿಗೆ ಉಪಯೋಗಿಸುವ ಸ್ಥಲದೊಳು ಹಕ್ಕಿಗಳನ್ನು ಹಿಡಿಯುವಿಕೆಯಿಲ್ಲವೆಂಬುವುದೇ ವಿರೋಧವು) ೨. (ಶಬಲ–ರಲಯೋರಭೇದಃ) ಆಕಳಿಗೆ ಉಪಯುಕ್ತವಾದರೂ ಅವಿ – ಕುರಿಗಳನ್ನು ಗ್ರಹ – ಹಿಡಿಯುವ, ತೋಳಗಳಿಗೆ, ಆಶ್ರಯಂ – ಆಧಾರವಾಗಿರುವುದು ಬೆಟ್ಟ. ಅವುಗಳಿಗೆ ವಿರೋಧವಿಲ್ಲವು. ಮದನ – ಮನ್ಮಥನ, ರಾಗ – ಅನುರಕ್ತಿಯಿಂದ, ಮಹಿತಪೂಜ್ಯವಾದ – ಸ್ಥಿತಿಯಾಗಿಯುಂ,

ಇರ್ಕೆಯುಳ್ಳದ್ದಾದರೂ, ಶಂಬರ – ಶಂಬರಾಸುರನ, ವಿಲಾಸ – ವಿನೋದಕ್ಕೆ, ಆಸ್ಪದಂ – ನಿಮಿತ್ತವಾಗಿರುವುದು (ಇಲ್ಲಿ ಮನ್ಮಥನಿಗೂ ಶಂಬರಾಸುರನಿಗೂ ವಿರೋಧವು). ೨. ಮದ – ಸೊಕ್ಕುಳ್ಳ, ನರಮನುಷ್ಯರ, ಆಗಮ – ಬರುವಿಕೆಗೆ, ಹಿತ – ಇಷ್ಟವಾದ ಸ್ಥಿತಿಯಾಗಿಯೂ, ಶಬರ – ನೀರಿನ – ವಿ – ಹಕ್ಕಿಗಳ, ಲಾಸ – ಕುಣಿದಾಟಕ್ಕೆ ಅಥವಾ ಶಂಬರವಿಲಾಸ ಜಲವಿನೋದಕ್ಕೆ, ಆಸ್ಪದಂ – ನಿಮಿತ್ತವಾಗಿಯೂ ಇರುವುದು ಬೆಟ್ಟ. (ಮದಶಾಲಿಗಳು ಬಂದು ಹಿತವಾಗಿದ್ದು ನಿರ್ಝರಂಗಳಲ್ಲಿ ಜಲಕ್ರೀಡೆಯನೆಸಗುವರೆಂದು ಭಾವವು.) ೧ – ಘನ – ದೊಡ್ಡ ತರಕ್ಷು – ಹುಲಿಯ, ಧಾವನ ಓಟದಿಂದ – ಸರತ್ ತಪ್ಪಿಸಿಕೊಂಡು ಹೋಗುವ, ಕೃಷ್ಣಸಾರ – ಜಿಂಕೆಗಳುಳ್ಳದ್ದಕ್ಕಿಂತಲೂ, ವ್ಯಾವೃತ್ತಿ – ಭೇದವುಳ್ಳದ್ದಾಗಿಯೂ, ಲುಬ್ಧಕಕುಲ – ಬೇಡರ ಜಾತಿಯ, ಲಕ್ಷಣ – ಗುರ್ತುಗಳ, ವ್ಯಾಪಾರ – ಕೆಲಸಗಳಿಂದ, ಸಂಗತಂ – ಕೂಡಿದ್ದು (ಓಡಿಬರುವ ಹುಲಿಗಳೂ ಓಡಿ ಹೋಗುವ ಜಿಂಕೆಗಳೂ ಉಳ್ಳದ್ದಲ್ಲವಾಗುವಲ್ಲಿ ಬೇಟೆಗಾರರಿಗೆ ಕೆಲಸವುಂಟೆಂಬುವದು ವಿರೋಧವು). ೨. ಘನತರ – ಬಹಳ ಹೆಚ್ಚಾದ, ಕ್ಷುಧಾ – ಹಸಿವಿನಿಂದ, ವನ – ಕಾಡಿನಲ್ಲಿ, ಸರತ್ – ಚರಿಸುವ, ಕೃಷ್ಣಸಾರ – ಜಿಂಕೆಗಳ, ವಿ – ಹಕ್ಕಿಗಳ, ಅವೃತ್ತಿ – ಸುಳಿದಾಟವುಳ್ಳದ್ದಾಗಿಯೂ, ಬೇಡರ ಕುಲಕ್ಕೆ ಲಕ್ಷಣವಾದ ಬೇಟೆಯ ಕೆಲಸದಿಂದ ಕೂಡಿದ್ದಾಗಿಯೂ ಇರುವುದು. ಬೆಟ್ಟವೆಂದರೆ ಸ್ವಭಾವವೆ – ೧. ವಿರಾಜ – ವಿಶೇಷವಾಗಿ ಶೋಭಿಸುವ, ತಾಮ್ರ – ತಾಮ್ರಧಾತುವಿನ, ಶ್ರೀ ಚೆಂಬಣ್ಣದಿಂದ ಯುಕ್ತಮಾಗಿಯುಂ, ಕಪಿಶತಾ – ಕಪಿಲವರ್ಣದಿಂದ, ಲಾಂಛಿತಂ – ಗುರ್ತು ಮಾಡಲ್ಪಟ್ಟದ್ದು (ಇಲ್ಲಿ ಕೇವಲ ಕೆಂಪಾಗಿರುವದು ಕಪಿಲ ಬಣ್ಣವೆಂದರೆ ವಿರೋಧವು. ವಿಶೇಷವಾಗಿ ಹೊಂಬಣ್ಣವೂ, ಕೊಂಚ ಕಪ್ಪೂ ಕೊಂಚ ಕೆಂಪೂ ಬೆರೆತ ಬಣ್ಣವೇ ಕಪಿವು). ೨. ವಿ – ಹಕ್ಕಿಗಳಿಂದ, ರಾಜಿತ – ಬೆಳಗುತ್ತಿರುವ, ಆಮ್ರ – ಮಾವಿನಮರಗಳ, ಶ್ರೀ – ಸಂಪತ್ತಿನಿಂದ, ಯುಕ್ತಂ – ಕೂಡಿದ್ದು, ಕಪಿ – ಮಂಗಗಳ, ಶತ – ೧೦೦ ಎಂಬುದು ಉಪಲಕ್ಷಕವು. ಬಹುವಾನರಗಳಿಂದ, ಲಾಂಛಿತಂ – ಗುರ್ತು ಮಾಡಲ್ಪಟ್ಟದ್ದು (ಹಕ್ಕಿಗಳೂ ಮಾವಿನ ಮರಗಳೂ ಕಪಿಗಳೂ ಬೆಟ್ಟದೊಳಿರುವಿಕೆ ವಿರೋಧವಿಲ್ಲವು). ಸರ್ವದಾ – ಯಾವಾಗಲೂ, ರೂವ – ಆಕಾರದಿಂದ, ಶೋಭಿತಂ – ಹೊಳೆಯುತ್ತಿರುವುದಾದರೂ ಅತನು – ಶೋಭಾಸ್ಪದಂ, ತನು – ಶರೀರದ, ಶೋಭಾ – ಕಾಂತಿಗೆ, ಆಸ್ಪದಂ – ನಿಮಿತ್ತವಾದ್ದು, ನ – ಅಲ್ಲದ್ದು (ಇಲ್ಲಿ ರೂಪದಿದ್ದು ದೇಹಶೋಭೆಗೆ ನಿಮಿತ್ತವಿಲ್ಲವೆಂಬುವದೇ ವಿರೋಧವು). ೨. ಸರ್ವ – ಸಮಸ್ತಗಳಾದ, ದಾರು – ಮರಗಳಿಂದ, ಉವ ಸಮೀಪದಲ್ಲಿ, ಶೋಭಿತಂ – ಬೆಳಗುವುದು, ಅತನು – ಮನ್ಮಥನ (ತನುವಿಲ್ಲದವನ ಅನಂಗನ), ಶೋಭಾ – ಸಂಪತ್ತಿಗೆ, ಆಸ್ಪದಂ – ನಿಮಿತ್ತವೂ ಬೆಟ್ಟವೆಂದರೆ ವಿರೋಧವಿಲ್ಲವು. ಹೀಗೆ ಎನಿಸಿ ಇರ್ದುದು. ಇಂತು ಅಂತುಮಲ್ಲದೆಯುಂ – ಹಾಗೂ ಅಲ್ಲದೆ. ॥೫॥

ಚ॥ ಹಿಮನಗದಂತೆ ಮೇಣದು ಸದಾ ಮಹಿಮಾನ್ವಿತಮಸ್ತಶೈಲದಂ ।
ತಮಳಿನವೃದ್ಧಹಂಸಯುತಮಿಂದ್ರಹರಿದ್ಗಿರಿಯಂತನಂತ ರ ॥
ತ್ನಮಹಿತಮಾದಿತೇಯ ನಗದಂತೆ ಸುರಾಗಗಣಾವೃತಂ ಮನೋ ।
ಜ್ಞಮಲಯಭೂಧ್ರದಂತೆ ಮೃದುಯಾನಮರುದ್ರುಚಿರಂ ಮಹೀಧರಂ ॥೩೫॥

**ಟೀ** ॥ ಮೇಣದು ಮಹೀಧರಂ – ಮತ್ತು ಇಂದ್ರಕೀಲಪರ್ವತವು, ಹಿಮನಗದಂತೆ –ಹಿಮಾಚಲದ ಹಾಗೆ, ಸದಾಮಹಿತಾನ್ವಿತವಾಗಿದೆ. ೧ ಉಪಮಾನ ೨ ಉಪಮೇಯವೆಂದರಿವುದು. ೧ ಸತ್ – ಒಳ್ಳೆಯ, ಅಮ – ಅಪಕ್ವವಾದ, ಹಿಮ– ಐಕಿಲಿನಿಂದ – ಕರಗದೆ ಇರುವ ಮಂಜುಗಡ್ಡೆಗಳಿಂದ ಅನ್ವಿತಂ – ಕೂಡಿದ್ದು ೨ ಸದಾ – ಯಾವಾಗಲೂ, ಮಹಿಮಾ – ಮಹಾತ್ಮ್ಯದಿಂದ, ಅನ್ವಿತಂ – ಸಂಬಂಧಿಸಿದ್ದು॥ ಅಸ್ತಶೈಲದಂತೆ – ಪಶ್ಚಿಮಾಚಲದ ಹಾಗೆ – ೧ – ಮಳಿನ – ಮಸುಕಾದ (ಬೆಳಕು ಕುಂದಿದ), ವೃದ್ಧ – ಮುದಿಯಾದ (ಅಸ್ತಮಿಸುವ), ಹಂಸ ಸೂರ್ಯನಿಂದ – ಯುತಂ. ೨. ಮಲಿನ – ಮಲೀಮಸವುಳ್ಳದ್ದಾಗಿಯೂ (ದೂರದಿಂದ ನೋಡಿದರೆ ಬೆಟ್ಟವು ಮೇಘವರ್ಣದ ಹಾಗೆ ಮಸುಕುಮಸುಕಾಗಿ ಕಾಣುವುದು). ವೃದ್ಧ – ವಯೋಧಿಕರಾದ, ಹಂಸ – ಯತಿಗಳಿಂದ, ಯುತಂ – ಕೂಡಿದ್ದು ॥ ಇಂದ್ರಹರಿದ್ಗಿರಿಯಂತೆ ಪೂರ್ವದಿಕ್ಪರ್ವತದಹಾಗೆ (ಉದಯಾಚಲದಂತೆ), ೧ ,ಅನಂತರತ್ನ ದ್ಯುಮಣಿಯಾದ ಸೂರ್ಯನಿಂದ, ಮಹಿತಂ ಬೆಳಗುತ್ತಿರುವುದು, ೨, ಅನಂತ – ಅಸಂಖ್ಯಾತಗಳಾದ, ರತ್ನ ಮಣಿಗಳಿಂದ, ಮಹಿತಂ – ಪೂಜ್ಯವಾದ್ದು. ಆದಿತೇಯನಗದಂತೆ – ದೇವಗಿರಿಯಾದ ಮೇರುವಿನ ಹಾಗೆ, ಸುರ – ದೇವತೆಗಳ (ಮತ್ತು), ಆಗಟ್ಟ – ಬೆಟ್ಟಗಳ, ಗಣ – ಗುಂಪುಗಳಿಂದ, ಆವೃತಂ – ಬಳಸಲ್ಪಟ್ಟದ್ದು । ೨ – ಸುರಾಗ – ಕಲ್ಪವೃಕ್ಷಗಳ – ಅಥವಾ ಸಮೀಚೀನವಾದ ಅನುರಕ್ತಿಯುಳ್ಳವರ, ಗಣ – ಗುಂಪುಗಳಿಂದ ಆವೃತವಾದ್ದು ಮನೋಜ್ಞಮಲಯಭೂಧ್ರದಂತೆ – ಮನೋಹರವಾದ ಗಂಧದ ಬೆಟ್ಟದ ಹಾಗೆ, ೧ – ಮೃದುಯಾನ – ಮಂದಗಮನವುಳ್ಳ, ಮರುತ್ – ಗಾಳಿಯಿಂದ, ರುಚಿರಂ – ಮನೋಹರವಾದ್ದು. ೨. ಮೃದುಯಾನ – ಮೇರುನಡೆಯುಳ್ಳ, ಮರುತ್ – ದೇವತೆಗಳಿಂದ॥ ರುಚಿರಂ – ರಮ್ಯವಾಗಿರ್ಪುದು. ತಾ ॥ ಹಿಮಾಲಯದಲ್ಲಿ ಹಿಮವಿದೆ. ಅಸ್ತಾಚಲದಲ್ಲಿ ಮುಳುಗುವ ಸೂರ್ಯನಿರುವನು. ಉದಯಾಚಲದಲ್ಲಿ ಮೂಡುವ ನೇಸರಿರುವುದು. ಸುರಾಚಲದಲ್ಲಿ ದೇವರ್ಕಳಿರ್ಪರು, ಮಲಯಾಚಲದಲ್ಲಿ ಕಿರುಗಾಳಿಯಿರ್ಪುದು, ಇಂದ್ರಕೀಲದೊಳಾದರೋ ಮಹಿಮೆ, ಮುದಿಸನ್ಯಾಸಿಗಳು ಅನೇಕ ರತ್ನಗಳು, ಕಲ್ಪವೃಕ್ಷಗಳು, ದೇವತೆಗಳು ಸಹಾ ಇರುವರು. ಆದ್ದರಿಂದ ಸರ್ವ ಪರ್ವತಗಳಿಗಿಂತಲೂ ಇಂದ್ರಕೀಲಾದ್ರಿಯೇ ಶ್ರೇಷ್ಠವೆಂದು ಭಾವವು. ಶ್ಲೇಷೆಯ ಮೂಲಕ ಸಾದೃಶ್ಯಪೂರ್ಣೋಪ ಮಾಲಂಕಾರವು. ॥ ೩೫ ॥

ಚ॥ ಕರಮೆಸೆದತ್ತು ದೇವವನದಿಂ ಬನದಿಂ ಬಿನದಂಬಡುತ್ತೆಸಂ ।
ಚರಿಪ ನಭಶ್ಚರಪ್ರಕರದಿಂ ಝುರದಿಂ ನೆರದಿಂಬುವೆತ್ತ ಕಿಂ ॥
ನ್ನರಕುಲದಿಂದೆ ರನ್ನಗವಿಯಿಂ ಪವಿಯಿಂ ಸವಿಯಿಂ ಪೊದಳ್ದ ಕಿಂ ।
ಪುರುಷರ ಗಾನದಿಂದೆ ಖಗದಿಂ ಮೃಗದಿಂ ನಗದಿಂದೆ ಕಂದರಂ ॥ ೩೬ ॥

**ಟೀಕೆ** ॥ ಕಂದರಂ – ಇಂದ್ರನೀಲಾದ್ರಿಯ ದರಿಯು ದ್ರೋಣೀದೇಶ – ಗುಡ್ಡದ, ದೇವವನದಿಂ – ದೇವತೆಗಳ ತೋಟದಿಂದಿಲೂ, ಬನದಿಂ – ಆರಾಮದಿಂದಲೂ, ಬಿನದಂಬಡುತ್ತೆ – ವಿನೋದಪಡುತ್ತೆ, ಸಂಚರಿಪ – ತಿರುಗುವ, ನಭಶ್ಚರ – ಗಗನಚಾರಿಗಳ, ಪ್ರಕರದಿಂ – ಗುಂಪಿನಿಂದಲೂ, ಝುರದಿಂ – ಗುಡ್ಡದ ಹೊನಲಿನ ಪ್ರವಾಹದಿಂದಲೂ, ನೆರೆದು – ಕೂಡಿ, ಇಂಬುವೆತ್ತ – ಹಿತವನ್ನು ಪಡೆದ, ಕಿನ್ನರಕುಲದಿಂದೆ – ಕಿನ್ನರಜಾತಿ ದೇವರ್ಕಳಿಂದಲೂ ರನ್ನಗವಿಯಿಂ – ರತ್ನಗುಹೆಯಿಂದಲೂ, ಪವಿಯಿಂ – ವಜ್ರದಿಂದಲೂ, ಸವಿಯಿಂ, ಪೊದಳ್ದ – ಅನುರಾಗದಿಂದ ಸೇರಿದ, ಕಿಂಪುರುಷರ – ಕಿಂಪುರುಷರೆಂಬ ದೇವರ್ಕಳ, ಗಾನದಿಂದೆ – ಗೀತದಿಂದಲೂ ಖಗದಿಂ – ಹಕ್ಕಿಯಿಂದಲೂ, ಮೃಗದಿಂ – ಮಿಗದಿಂದಲೂ, ನಗದಿಂದೆ – [ಮರ]ಗಿಡದಿಂದಲೂ, ಕರಂ – ಅತಿಶಯವಾಗಿ, ಎಸೆದತ್ತು – ಶೋಭಿಸಿತು. ಬೆಟ್ಟದಲ್ಲಿ ಎಲ್ಲವೂ ಇದ್ದವು. (ಉದಾತ್ತಾಲಂಕಾರ). ಪ್ರತಿ ಪಾದ ದಲ್ಲಿಯೂ ಏಕವಿಭಕ್ತಿಕಾಕ್ಷರದ್ವಯಸದೃಶ ಪದತ್ರಯ ಘಟಿಕವಾಗಿರ್ಪುದರಿಂ ತ್ರಿಪ್ರಾಶವೆಂಬ ಶಬ್ದಾಲಂಕಾರವು. ॥೩೬ ॥

ಚಂ ॥ ನಿಡುಜಡೆ ಬೆನ್ನೊಳಾಡೆ ಕಳಕಾಂಚಿ ಝುಣತ್ಕೃತಿ ಪೊಣ್ಮೆ ತಳ್ತ ಪೊಂ ।
ಗೊಡಮೊಲೆಗಳ್ಕದಕ್ಕದಿಸೆ ಪೀವರವೃತ್ತನಿತಂಬಮಂಡಲಂ ॥
ಪೊಡರೆ ಮುಖಾಂಶು ನೇತ್ರರುಚಿನೆ ಪರ್ಬಿ ಪಳಂಚೆ ನಗಾಗ್ರದಿಂದೆ ಧಿಂ ।
ಕಿಡುತೆ ನಭೋಂತದೋಳ್ವಿಹರಿಪರ್ವ ಚರಾಂಗನೆಯರ್ವಿಲಾಸದಿಂ ॥ ೩೭ ॥

**ಟೀಕೆ** ॥ ನಿಡುಜಡೆ – ದೀರ್ಘವೇಣಿ, ಉದ್ದವಾದ ಜಡೆ, ಬೆನ್ನೊಳು – ಹಿಂಗಡೆಯಲ್ಲಿ, ಆಡೆ – ಜೋಲಾಡುತ್ತಿರಲು, ಕಳ – ಅವ್ಯಕ್ತಮಧುರವಾದ ಕಾಂಚಿಝುಣತ್ಕೃತಿ – ಉಡಿಗುಂಟಿಗಳ ಝುಣತ್ಕಾರವು (ಡಾಬಿನ ಕಿರುಗೆಜ್ಜೆಗಳ ಸಿಂಜಿತವು). ಪೊಣ್ಮೆ – ಕೇಳಿಸುತ್ತಿರಲು, ತಳ್ತ – ಉಬ್ಬಿದ, ಪೊಂಗೊಡಮೊಲೆಗಳ್ – ಕನಕಕಲಶೋಪಮ ಕುಚಂಗಳು, ಕದಕ್ಕದಿಸೆ – ಗುಪ್ತವಾಗಿ ಸಮ್ಮರ್ದದಿಂದೊರದಾಡಲು, ಪೀವರ – ಬಲಿತದ್ದಾಗಿಯೂ, ವೃತ್ತ – ಬಟುವಾಗಿಯೂ ಇರುವ, ನಿತಂಬಮಂಡಲಂ – ಶ್ರೋಣೀಬಿಂಬವು (ಕಟಿಪಶ್ಚಾದ್ಭಾಗ – ಅಂಡು), ಪೊಡರೆ – ಸ್ಫುರಿಸುತ್ತಿರಲು, ಮುಖಾಂಶು – ಮೊಗದ ಕದಿರೂ, ನೇತ್ರರುಚಿ – ಕಣ್ಣಹೊಳಪೂ, ಪರ್ಬಿ – ಹಬ್ಬಿಕೊಂಡು, ಪಳಂಚೆ – ತಟ್ಟುತ್ತಿರಲು, ನಗಾಗ್ರದಿಂದೆ – ಮರದ ತುದಿಯಿಂ, ಧಿಂಕಿಡುತೆ – ಧುಮ್ಮಿಕ್ಕುತೆ, ಖಚರಾಂಗನೆಯರ್ – ಖೇಚರಕಾಂತೆಯರು, ನಭೋಂತದೊಳ್ – ಗಗನಮಧ್ಯದಲ್ಲಿ, ವಿಲಾಸದಿಂ – ವಿನೋದಚೇಷ್ಟೆಯಿಂದ, ವಿಹರಿಪರ್ – ಕ್ರೀಡಿಸುವರು. ತಾ ॥ ಇಂದ್ರಕೀಲವು ದೇವಸ್ತ್ರೀಯರಿಗೆ ಶೃಂಗಾರವಿಹಾರಸ್ಥಾನವಾಗಿರ್ಪುದು. ೩೭ ॥

(ಮುಂದುವರಿಯುವುದು)

# ವೀರಶೈವ ಧರ್ಮದಲ್ಲಿ ಮೌಲ್ಯಗಳು

**ಡಾ. ಸಿ. ಶಿವಕುಮಾರಸ್ವಾಮಿ**

(ಮುಂದುವರೆದಿದೆ)

ಸಿದ್ಧಾಂತ ಶಿಖಾಮಣಿಯು 'ನಾನ್ನತೋಯಸಮಂ ದಾನಂ ನಾನ್ನತೋಯಸಮಂ ತಪಃ (ಅನ್ನದಾನ, ಜಲದಾನಗಳಿಗೆ ಸಮಾನವಾದ ದಾನವಾಗಲಿ, ತಪಸ್ಸಾಗಲಿ ಇರುವುದಿಲ್ಲ. (ಸಿ.ಶಿ., 9.48) ಎಂದು ಹೇಳಿದೆ.

ಚೆನ್ನಬಸವಣ್ಣನವರು ಒಂದು ವಚನದಲ್ಲಿ ಸತ್ಯಶುದ್ಧ ಕಾಯಕದ ಸ್ವರೂಪವನ್ನು ಹೀಗೆ ವಿವರಿಸಿದ್ದಾರೆ:

ಲಿಂಗಮುಖವು ಜಂಗಮವೆಂಬುದಾಗಿ,
ತಾನು ಸತ್ಕಾಯಕದಿಂದ ಸಂಪಾದಿಸಿದ
ಸತ್ಪದಾರ್ಥವ ಜಂಗಮಕ್ಕಿತ್ತು
ತತ್ಪ್ರಸಾದವ ಭಕ್ತಿಯಿಂದ ಪಡೆದು ಸೇವಿಸಬಲ್ಲಡೆ
ಅದು ಅಶನವೆಂಬೆ, ಈ ಕ್ರಮಕ್ಕೆ ಹೊರಗಾದುದೆ ಅನಶನವೆಂಬೆ,
'ನಾಶನಾನಶನೇ ಅಭಿ' ಎಂದುದಾಗಿ,
ಇಂತೀ ಅಶನ ಅನಶನಗಳ ಭೇದವನರಿಯದೆ
ತನುವ ದಂಡಿಸದೆ ಮನವ ಖಂಡಿಸದೆ
ತನಗಾಗಿ ಜನವ ಮೋಸಗೈದು ತಂದು
ಮನೆಯಲ್ಲಿ ಮಡಗಿದ ದ್ರವ್ಯವು ಗುರುವಿಗೆ ಸಲ್ಲದು,
ಲಿಂಗಕ್ಕೆ ಸಲ್ಲದು, ಜಂಗಮಕ್ಕೆ ಸಲ್ಲದಾಗಿ.
ಇಂತೀ ಬಿನುಗು ಮಾನವನ ನಮ್ಮ ಕೂಡಲ
ಚೆನ್ನಸಂಗಮದೇವನು
ಹೀನಯೋನಿಯಲ್ಲಿ ಬರಿಸದೆ ಮಾಣ್ಬನೆ!

– ವಚನ., 1534

ಸತ್ಯಶುದ್ಧ ಕಾಯಕದಿಂದ ಗಳಿಸಿದ ದ್ರವ್ಯದಿಂದ ಜಂಗಮಕ್ಕೆ ದಾಸೋಹ ಮಾಡುವ ಸದ್ಭಕ್ತನ ಹೃದಯದಲ್ಲಿ ಭಗವಂತನು ಅಚ್ಚೊತ್ತಿದಂತೆ ನೆಲೆಸಿರುತ್ತಾನೆ ಎಂದಿದ್ದಾನೆ ಮಾದಾರ ಧೂಳಯ್ಯ ಎಂಬ ವಚನಕಾರ:

ಸತ್ಯ ಶುದ್ಧ ಕಾಯಕವ ಮಾಡಿ ತಂದು,
ವಂಚನೆಯಿಲ್ಲದೆ ಪ್ರಪಂಚವಳಿದು

ನಿಚ್ಚ ಜಂಗಮಕ್ಕೆ ದಾಸೋಹವ ಮಾಡುವ
ಸದ್ಭಕ್ತನ ಹೃದಯದೊಳಗೆ ಅಚ್ಚೊತ್ತಿದಂತಿಪ್ಪ
ಕಾಮಧೇನು ಧೂಳೇಶ್ವರ. (ವಚನ, 102)

ಗುರುಪೂಜೆಗೆ, ಲಿಂಗಾರ್ಚನೆಗಾಗಿ ಮತ್ತು ಜಂಗಮದಾಸೋಹಕ್ಕಾಗಿ ನಾನು ಕಾಯಕವನ್ನು ಮಾಡುತ್ತೇನೆ ಮತ್ತು ಭಗವಂತನು ಅನುಗ್ರಹಿಸಿದ ದ್ರವ್ಯಗಳನ್ನು ಅವನ ಸ್ವರೂಪರೇ ಆದ ಗುರು–ಲಿಂಗ–ಜಂಗಮಗಳಿಗಲ್ಲದೆ ಮತ್ತಾರಿಗೂ ತಾನು ಅರ್ಪಿಸುವುದಿಲ್ಲ ಎಂದಿದ್ದಾರೆ ಬಸವಣ್ಣನವರು ಈ ವಚನದಲ್ಲಿ:

ನಾನು ಆರಂಬವ ಮಾಡುವೆನಯ್ಯಾ, ಗುರುಪೂಜೆಗೆಂದು,
ನಾನು ಬೆವಹಾರವ ಮಾಡುವೆನಯ್ಯಾ, ಲಿಂಗಾರ್ಚನೆಗೆಂದು,
ನಾನು ಪರಸೇವೆಯ ಮಾಡುವೆನಯ್ಯಾ
ಜಂಗಮ ದಾಸೋಹಕ್ಕೆಂದು,
ನಾನಾವಾವ ಕರ್ಮಂಗಳ ಮಾಡಿದೊಡೆಯೂ
ಆ ಕರ್ಮಫಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು,
ನಿಮ್ಮ ಸೊಮ್ಮಿಂಗೆ ಸಲಿಸುವೆನು
ನಿಮ್ಮಾಣೆ ಕೂಡಲಸಂಗಮದೇವಾ. (ವಚನ, 709)

**ಸದಾಚಾರ**

ವೀರಶೈವ ಧರ್ಮವು ಆಚಾರಪ್ರಧಾನವಾಗಿದ್ದು, ಆಚಾರಸಂಪನ್ನನಾದವನು ಸರ್ವತ್ರ ಗೌರವಕ್ಕೆ ಪಾತ್ರನಾಗುವುದಲ್ಲದೆ, ಭಗವಂತನ ಸಾಕ್ಷಾತ್ಕಾರಕ್ಕೂ ಅರ್ಹನಾಗುತ್ತಾನೆ. ಒಬ್ಬ ವ್ಯಕ್ತಿ ಆಚಾರಸಂಪನ್ನನಾಗುವುದರಿಂದ ವ್ಯಷ್ಟಿ–ಸಮಷ್ಟಿಗಳ ಹಿತ ಸಹಜವಾಗಿ ಉಂಟಾಗುತ್ತದೆ. ಹೀಗಾಗಿ ಸದಾಚಾರ ಅಥವಾ ಆಚಾರಸಂಪನ್ನತೆಯೂ ಒಂದು ಮೌಲ್ಯವೆಂದು ಹೇಳಬಹುದು. ಚಂದ್ರಜ್ಞಾನಾಗಮವು ಆಚಾರವನ್ನು ಕುರಿತು ಹೀಗೆ ಹೇಳಿದೆ :

ಆಚಾರ ಏವ ಸರ್ವೇಷಾಮಲಂಕಾರಾಯ ಕಲ್ಪತೇ ।
ಆಚಾರಹೀನಃ ಪುರುಷೋ ಲೋಕೇ ಭವತಿ ನಿಂದಿತಃ ॥
ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ ।
ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಾತ್ ॥
ಶಿವಸ್ಯ ಭಕ್ತಿರಾಧಾರ ಆಚಾರಃ ಸರ್ವದೇಹಿನಾಮ್ ।
ಆಚಾರಃ ಪರಮೋ ಧರ್ಮಃ ಆಚಾರಃ ಪರಮಂ ಧನಮ್। ।
ಜ್ಞಾನಮಾಚಾರಹೀನಂ ಚೇನ್ನ ತದ್ಭವತಿ ಸಿದ್ಧಯೇ ।

– ಕ್ರಿ.ಪಾ. 9.16–19

"ಆಚಾರವೇ ಎಲ್ಲರಿಗೂ ಅಲಂಕಾರವಾದುದು. ಆಚಾರಹೀನನಾದ ವ್ಯಕ್ತಿಯು ಲೋಕದಲ್ಲಿ ನಿಂದಿತನಾಗುತ್ತಾನೆ. ಆಚಾರಸಹಿತವಾದ ಜ್ಞಾನದಿಂದ ಮಹೇಶ್ವರನ ಅನುಗ್ರಹ

ಪ್ರಾಪ್ತವಾಗುತ್ತದೆ. ಆದುದರಿಂದ ದೇಹಪಾತನದವರೆಗೆ ಜ್ಞಾನಿಯಾದವನು ಆಚಾರವಂತನಾಗಬೇಕು. ಶಿವನ ಪ್ರಾಪ್ತಿಗೆ ಭಕ್ತಿಯು ಆಧಾರವಾಗಿದ್ದು, ಎಲ್ಲ ದೇಹಧಾರಿಗಳಿಗೂ ಆಚಾರವೇ ಆಧಾರ. ಆಚಾರವೇ ಶ್ರೇಷ್ಠವಾದ ಧರ್ಮ ಮತ್ತು ಶ್ರೇಷ್ಠವಾದ ಸಂಪತ್ತು. ಆಚಾರವಿಲ್ಲದ ಜ್ಞಾನದಿಂದ ಸಿದ್ಧಿಯೂ ಪ್ರಾಪ್ತವಾಗುವುದಿಲ್ಲ.'

ಆಚಾರವಂತನಾದವನೆ ಭಕ್ತ. ಅದೇ ಅವನಿಗೆ ಅಲಂಕಾರ. ಆಚಾರದಿಂದಲೇ ಭಕ್ತನಿಗೆ ಮುಕ್ತಿ ಎಂಬ ಪೂರ್ವೋಕ್ತ ಶಿವಾಗಮದ ಅಭಿಪ್ರಾಯವನ್ನು ಸ್ವತಂತ್ರ ಸಿದ್ಧಲಿಂಗೇಶ್ವರರು ಸರಳವಾಗಿ ವಚನದಲ್ಲಿ ಹೇಳಿದ್ದಾರೆ:

ಆಚಾರವೆ ಭಕ್ತಂಗೆ ಅಲಂಕಾರವು
ಆಚಾರವೆ ಭಕ್ತಂಗೆ ಸರ್ವಪೂಜ್ಯವು,
ಇಂತೀ ಆಚಾರವುಳ್ಳವನೆ ಭಕ್ತನು,
ಆಚಾರವುಳ್ಳವನೆ ಯುಕ್ತನು,
ಆಚಾರವುಳ್ಳವನೆ ಮುಕ್ತನು,
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ. (ವಚನ, 89)

ಪರಮಾತ್ಮನಾದ ಶಿವನು ಸದಾಚಾರಪ್ರಿಯನಾಗಿದ್ದು, ಸದಾಚಾರದಿಂದಲೇ ಪೂಜಿಸಲ್ಪಡುತ್ತಾನೆ. ಸದಾಚಾರವಿಲ್ಲದೆ ಶಿವನು ಪ್ರಸನ್ನನಾಗುವುದಿಲ್ಲ ಎಂದು ಸಿದ್ಧಾಂತ ಶಿಖಾಮಣಿ ಬೋಧಿಸಿದೆ:

ಸದಾಚಾರಃ ಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ ।
ಸದಾಚಾರಂ ದಿನಾ ತಸ್ಯ ಪ್ರಸಾದೋ ನೈವ ಜಾಯತೇ ॥ (ಸಿ.ಶಿ., 16.66)

ಇಲ್ಲಿ ಉಕ್ತವಾಗಿರುವ ಸದಾಚಾರಗಳೆಂದರೆ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯೆ, ಕ್ಷಮೆ, ದಾನ, ಪೂಜೆ, ಜಪ ಮತ್ತು ದಾನ ಎಂಬವುಗಳು.

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾ ಕ್ಷಮಾ ।
ದಾನಂ ಪೂಜಾ ಜಪೋ ಧ್ಯಾನಮಿತಿ ಧರ್ಮಸ್ಯ ಸಂಗ್ರಹಃ (ಸಿ.ಶಿ., 16.59)

ಇದನ್ನೇ ಚೆನ್ನಬಸವಣ್ಣನವರು "ಆಚಾರವಿಲ್ಲದೆ ಅನುಗ್ರಹವಿಲ್ಲ., ಅನುಗ್ರಹವಿಲ್ಲದೆ ಏನೂ ಇಲ್ಲ" (ವ. ಸಂ. 261) ಎಂದಿದ್ದಾರೆ.

ಬಸವಣ್ಣನವರು 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂದು ಈ ವಚನದಲ್ಲಿ ಹೇಳಿದ್ದಾರೆ:

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ.
ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೆ ಮರ್ತ್ಯಲೋಕ
ಆಚಾರವೇ ಸ್ವರ್ಗ, ಅನಾಚಾರವೇ ನರಕ.
ಕೂಡಲಸಂಗಮದೇವಾ, ನೀವೇ ಪ್ರಮಾಣು.

(ವಚನ, 239)

ಚೆನ್ನಬಸವಣ್ಣನವರು 'ಆಚಾರ'ವೆಂಬುದು ಖಡ್ಗದ ಅಲಗಿನಂತೆ. ಆಚಾರ – ಹೀನನಾದರೆ ಅದು ಪ್ರಾಣವನ್ನು ತೆಗೆಯುತ್ತದೆಂದು ಹೇಳುವ ಮೂಲಕ ಪ್ರತಿಯೊಬ್ಬರೂ ಆಚಾರವಂತರಾಗಬೇಕೆಂದು ಹೇಳಿದ್ದಾರೆ:

ಆಚಾರವೆಂಬುದು ಕೂರಲಗು, ತಪ್ಪಿ ಬಂದಡೆ ಪ್ರಾಣವ ತಗಲುವುದು
ಅದು ಕಾರಣ, ಅರಿದರಿದು ಆಚರಿಸಬೇಕು (ವಚನ, 971)

ಭಕ್ತನ ಆಚಾರಗಳನ್ನು ಹೇಳುವ ಬಸವಣ್ಣನವರ ವಚನದಲ್ಲಿ ಉಕ್ತವಾಗಿರುವ ಎಲ್ಲ ಆಚಾರಗಳೂ ಮೌಲ್ಯಗಳಾಗಿವೆ ಎಂಬುದು ಗಮನಾರ್ಹವಾದುದು.

ಕಂಡ ಭಕ್ತರಿಗೆ ಕೈಮುಗಿಯುವಾತನೆ ಭಕ್ತ.
ಮೃದುವಚನವೆ ಸಕಲ ಜಪಂಗಳಯ್ಯಾ,
ಮೃದುವಚನವೆ ಸಕಲ ತಪಂಗಳಯ್ಯಾ.
ಸದುವಿನಯವೆ ಸದಾಶಿವನೊಲುಮೆಯಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ. (ವಚನ, 245)

ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಕ್ತ, ದಾಸೋಹಗಳು ತಮ್ಮತನವನ್ನು ಉಳಿಸಿಕೊಳ್ಳಬೇಕಾದರೆ ಆಚಾರವಳವಟ್ಟಿರಬೇಕೆಂದು ಚೆನ್ನಬಸವಣ್ಣನವರು ಹೇಳಿ, 'ಆಚಾರ'ದ ಮೌಲ್ಯವನ್ನು ಎತ್ತಿ ಹಿಡಿದಿದ್ದಾರೆ ಈ ವಚನದಲ್ಲಿ:

ಆಚಾರವುಳ್ಳಡೆ ಗುರು ಆಚಾರವುಳ್ಳಡೆ ಲಿಂಗ
ಆಚಾರವುಳ್ಳಡೆ ಜಂಗಮ
ಆಚಾರವುಳ್ಳಡೆ ಪಾದೋದಕ, ಆಚಾರವುಳ್ಳಡೆ ಪ್ರಸಾದ
ಆಚಾರವುಳ್ಳಡೆ ಸದ್ಭಕ್ತ, ಆಚಾರವುಳ್ಳಡೆ ದಾಸೋಹ.
ಆಚಾರವಿಲ್ಲದಿದ್ದಡೆ ಗುರುವಲ್ಲ ನರನು
ಆಚಾರವಿಲ್ಲದಡೆ ಲಿಂಗವಲ್ಲ ಶಿಲೆ
ಆಚಾರವಿಲ್ಲದಿದ್ದಡೆ ಜಂಗಮನಲ್ಲ ವೇಷಧಾರಿ
ಆಚಾರವಿಲ್ಲದಿದ್ದಡೆ ಪಾದೋದಕವಲ್ಲ ನೀರು
ಆಚಾರವಿಲ್ಲದಿದ್ದಡೆ ಪ್ರಸಾದವಲ್ಲ ಅಶನ
ಆಚಾರವಿಲ್ಲದಿದ್ದಡೆ ಭಕ್ತನಲ್ಲ ಭೂತಪ್ರಾಣಿ
ಆಚಾರವಿಲ್ಲದಿದ್ದಡೆ ದಾಸೋಹದ ಮನೆಯಲ್ಲ ವೇಶಿಯ ಗುಡಿಸಲು.
ಇದು ಕಾರಣ ಕೂಡಲಚೆನ್ನಸಂಗಯ್ಯಾ
ಆಚಾರವಿಲ್ಲದವರಿಗೆ ನಾಯಕನರಕ ತಪ್ಪದು.
(ಚೆನ್ನಬಸವಣ್ಣನವರ ವಚನ, 970)

ಇದೇ ಅಭಿಪ್ರಾಯವನ್ನು ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನವೂ ಶ್ರುತಪಡಿಸಿದೆ (ತೋಂ.ಸಿ.ವ.,11).

ಚೆನ್ನಬಸವಣ್ಣನವರು ಒಂದು ವಚನದಲ್ಲಿ 50 ಆಚಾರಗಳನ್ನು ನಿರೂಪಿಸಿದ್ದು, ಅವೆಲ್ಲವೂ ವೀರಶೈವ ಧಾರ್ಮಿಕ ಮೌಲ್ಯಗಳಾಗಿವೆ (ಚೆಬವ., 971).

ವೀರಶೈವದ ನೀತಿಸಂಹಿತೆಗಳಾದ ಪಂಚಾಚಾರಗಳು ಈ ಸಮುದಾಯದ ಧಾರ್ಮಿಕ ಮೌಲ್ಯಗಳಾಗಿವೆ:

ಲಿಂಗಾಚಾರಃ ಸದಾಚಾರಃ ಶಿವಾಚಾರಸ್ತಥೈವ ಚ।
ಭೃತ್ಯಾಚಾರೋ ಗಣಾಚಾರಃ ಪಂಚಾಚಾರಾಃ ಪ್ರಕೀರ್ತಿತಾಃ ॥

ಗುರುಣಾ ದತ್ತಲಿಂಗಾದ್ವೈ ನಾಸ್ತಿ ದೈವಂ ಮಹೀತಲೇ ।
ಇತಿ ಭಾವಾನುಸಂಧಾನಂ ಲಿಂಗಾಚಾರಃ ಸ ಉಚ್ಯತೇ ॥

ಧರ್ಮಾರ್ಜಿತೇನ ದ್ರವ್ಯೇಣ ಯತ್ಸಂತರ್ಪಣಮನ್ವಹಮ್ ।
ಗುರುಲಿಂಗಜಂಗಮಾನಾಂ ಸದಾಚಾರ ಇತಿ ಸ್ಮೃತಃ ॥

ಶಿವ ಏವ ಪರಂಬ್ರಹ್ಮ ಪಂಚಕೃತ್ಯಪರಾಯಣಮ್ ।
ನ ತತೋನ್ಯಾ ಗತಿರಿತಿ ಶಿವಾಚಾರೋ ಹಿ ಕೀರ್ತಿತಃ ॥

ಶಿವಸ್ಯ ಶಿವಭಕ್ತಸ್ಯ ಶಿವಧರ್ಮಾ ಕಸ್ಯ ಚ ।
ನ ಶೃಣೋತಿ ಚ ಯನ್ನಿಂದಾಂ ಸ ಗಣಾಚಾರ ಉಚ್ಯತೇ ॥

ಶಿವಭಕ್ತಜನಾಃ ಸರ್ವೇ ವರಿಷ್ಠಾ ಪೃಥಿವೀತಲೇ ।
ತೇಷಾಂ ಭೃತ್ಯೋऽಹಮಿತಿ ಯದ್ ಭೃತ್ಯಾಚಾರ ಇತಿ ಸ್ಮೃತಃ ॥

(ಚಂದ್ರಜ್ಞಾನಾಗಮ, ಕ್ರಿ.ಪಾ., 9.4–9)

"ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ ಇವು ಪಂಚಾಚಾರಗಳೆಂದು ಕರೆಯಲ್ಪಟ್ಟಿವೆ. ಗುರುವು ಕೊಟ್ಟ ಇಷ್ಟಲಿಂಗಕ್ಕಿಂತ ಮಿಗಿಲಾದ ದೈವವು ಭೂಮಿಯ ಮೇಲೆ ಮತ್ತೊಂದಿಲ್ಲ ಎಂಬ ಭಾವನಾತ್ಮಕ ಸಂಬಂಧವು ಲಿಂಗಾಚಾರ ಎನಿಸುತ್ತದೆ. ಧರ್ಮಮಾರ್ಗದಿಂದ ಗಳಿಸಿದ ಸಂಪತ್ತಿನಿಂದ ಪ್ರತಿದಿನವೂ ಗುರು, ಲಿಂಗ, ಜಂಗಮರ ಸಂತರ್ಪಣೆ ಮಾಡುವುದು ಸದಾಚಾರವೆಂದು ಸ್ಮರಿಸಲ್ಪಟ್ಟಿದೆ. ಶಿವನೇ ಪರಬ್ರಹ್ಮ, ಅವನೇ ಪಂಚಕೃತ್ಯಗಳಲ್ಲಿ ನಿರತನು, ಅವನನ್ನು ಬಿಟ್ಟರೆ ಬೇರೆ ಗತಿಯಿಲ್ಲ ಎಂಬುದೇ ಶಿವಾಚಾರವೆಂದು ಹೇಳಲ್ಪಟ್ಟಿದೆ. ಶಿವನ, ಶಿವಭಕ್ತರ, ಶಿವಧರ್ಮ ಮುಂತಾದವುಗಳ ನಿಂದೆಯನ್ನು ಕೇಳದಿರುವುದೇ ಗಣಾಚಾರವೆಂದು ಕರೆಯಲ್ಪಟ್ಟಿದೆ. ಈ ಭೂಮಿಯ ಮೇಲೆ ವಾಸಿಸುವ ಎಲ್ಲ ಶಿವಭಕ್ತರೂ ಶ್ರೇಷ್ಠರು, ನಾನು ಅವರ ಸೇವಕ ಎಂಬುದೇ ಭೃತ್ಯಾಚಾರ."

ಈ ಆಗಮದ ಶ್ಲೋಕಗಳ ಭಾವಾನುವಾದವು ಚೆನ್ನಬಸವಣ್ಣನವರ ಈ ವಚನದಲ್ಲಿ ಗರ್ಭೀಕೃತವಾಗಿದೆ:

ಲಿಂಗಾಚಾರ ಸದಾಚಾರ ಶಿವಾಚಾರ ಗಣಾಚಾರ ಭೃತ್ಯಾಚಾರವೆಂಬ
ಪಂಚಾಚಾರದ ಆಚರಣೆಯೆಂತೆಂದಡೆ:
ಲಿಂಗವನಲ್ಲದೆ ಅನ್ಯವನರಿಯದಿಹುದೆ ಲಿಂಗಾಚಾರ
ಸಜ್ಜನ ಕಾಯಕದಲ್ಲಿ ತಂದು ಗುರು ಲಿಂಗ ಜಂಗಮಕ್ಕೆ ನೀಡಿ,

ಸತ್ಯಶುದ್ಧನಾಗಿಹುದೆ ಸದಾಚಾರ.
ಶಿವಭಕ್ತರಲ್ಲಿ ಕುಲ ಗೋತ್ರ ಜಾತಿ ವರ್ಣಾಶ್ರಮವನರಸದೆ
ಅವರೊಕ್ಕುದ ಕೊಂಬುದೇ ಶಿವಾಚಾರ.
ಶಿವಾಚಾರದ ನಿಂದೆಯ ಕೇಳದಿಹುದೆ ಗಣಾಚಾರ.
ಶಿವಶರಣರೆ ಹಿರಿಯರಾಗಿ ತಾನೆ ಕಿರಿಯನಾಗಿ,
ಭಯಭಕ್ತಿಯಿಂದ ಆಚರಿಸುವುದೆ ಭೃತ್ಯಾಚಾರ.
ಇಂತೀ ಪಂಚಾಚಾರವುಳ್ಳ ಭಕ್ತರ ಒಕ್ಕುದನಿಕ್ಕಿ ಸಲಹಯ್ಯಾ,
ಪ್ರಭುವೆ ಕೂಡಲಚೆನ್ನಸಂಗಮದೇವಾ.

(ಚೆನ್ನಬಸವಣ್ಣನವರ ವಚನ, 1544)

ವೀರಶೈವ ಧರ್ಮದ ಪ್ರಾಣದೋಪಾದಿಯಲ್ಲಿರುವ ಪಂಚಾಚಾರಗಳು ನೀತಿ ಪ್ರಧಾನವಾಗಿದ್ದು, ಇವುಗಳ ಆಚರಣೆಯಿಂದ ಸಾಧಕನು ಸಮಾಜದಲ್ಲಿ ಸ್ವಧರ್ಮನಿಷ್ಠೆ, ಪರಧರ್ಮ ಸಹಿಷ್ಣುತೆಗಳನ್ನು ಸಾಧಿಸಬಹುದು. ಹೀಗಾಗಿ ವೀರಶೈವ ಧರ್ಮದ ಪಂಚಾಚಾರಗಳು ಧಾರ್ಮಿಕ ಮೌಲ್ಯಗಳೆನಿಸುತ್ತವೆ.

**ಕೊಟ್ಟು-ಕೊಂಬುದು ಸದಾಚಾರ**

ಶ್ರೀಗುರುವಿನಿಂದ ದೀಕ್ಷೆಯನ್ನು ಪಡೆದು ವೀರಶೈವರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ ಹೀಗೆ ಎಲ್ಲರ ಪೂರ್ವಜಾತಿಗಳು ಸಂಪೂರ್ಣವಾಗಿ ನಾಶವಾಗಿ, ಅವರೆಲ್ಲರೂ ವೀರಶೈವ-ಲಿಂಗಾಯತರೇ ಆಗುತ್ತಾರೆ. ಆದ್ದರಿಂದ ಅವರಲ್ಲಿ (ದೀಕ್ಷಾಪೂರ್ವದಲ್ಲಿ ಯಾವ ಜಾತಿಯವರು) ಎಂಬ ಕುಲವನರಸದೆ, ತನ್ನ ಕುಲದಲ್ಲಿ ಜನಿಸಿದ ಕನ್ಯೆಯನ್ನು ಅವರಿಗೆ ಕೊಡಬೇಕು ಮತ್ತು ಅವರಿಂದ ಕನ್ಯೆಯನ್ನು ತರಬೇಕು ಎಂದು ಸಿದ್ಧಾಂತ ಶಿಖಾಮಣಿ ಬೋಧಿಸಿದೆ:

ಸ್ವಮಾರ್ಗಾಚಾರವರ್ತಿಭ್ಯಃ ಸ್ವಜಾತಿಭ್ಯಃ ಸದಾ ವ್ರತೀ ।
ದದ್ಯಾತ್ ತೇಭ್ಯಃ ಸಮಾದದ್ಯಾತ್ ಕನ್ಯಾಂ ಕುಲಸಮದ್ಭವಾಮ್ ॥

(9.49)

ಸಿದ್ಧಾಂತ ಶಿಖಾಮಣಿಯ ಈ ಅಭಿಪ್ರಾಯವನ್ನೇ ಚೆನ್ನಬಸವಣ್ಣ ನವರು ತಮ್ಮ ವಚನದಲ್ಲಿ ಪುನರುಚ್ಚರಿಸಿ, ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲ ಒಂದೇ ಎಂದು ತಿಳಿದು ಕನ್ಯೆಯನ್ನು ಕೊಡುವುದು ಮತ್ತು ತರುವುದು ಸದಾಚಾರ, ಉಳಿದುದೆಲ್ಲ ಅನಾಚಾರ ಎಂದು ಹೇಳಿದ್ದಾರೆ:

ಉಂಬುದು ಉಡುವುದು ಶಿವಾಚಾರ,
ಕೊಂಬುದು ಕೊಡುವುದು ಕುಲಾಚಾರ ಎಂಬ
ಅನಾಚಾರಿಯ ಮಾತ ಕೇಳಲಾಗದು.
ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರ ಒಂದೆ ಎಂದು
ಕೊಟ್ಟು ಕೊಂಬುದು ಸದಾಚಾರ, ಉಳಿದುದೆಲ್ಲ ಅನಾಚಾರ,

ಅದೆಂತೆಂದಡೆ:
ಸ್ಫಟಿಕದ ಕೊಡದಲ್ಲಿ ಕಾಳಿಕೆಯನರಸುವ ಹಾಗೆ,
ಸಿಹಿಯೊಳಗೆ ಕಹಿಯನರಸುವ ಹಾಗೆ
ರಜಸ್ಸೂತಕ ಕುಲಸೂತಕ ಜನನಸೂತಕ ಪ್ರೇತಸೂತಕ ಉಚ್ಚಿಷ್ಟಸೂತಕ ಎಂದಡೆ,
ಆತಂಗೆ ಗುರುವಿಲ್ಲ ಲಿಂಗವಿಲ್ಲ, ಜಂಗಮವಿಲ್ಲ, ತೀರ್ಥಪ್ರಸಾದವಿಲ್ಲ
ಇಂತೀ ಪಂಚಸೂತಕವ ಕಳೆದಲ್ಲದೆ ಭಕ್ತನಾಗ
ಇಂತಹ ಭಕ್ತರಲ್ಲಿ ಕೊಟ್ಟು ಕೊಂಬುದು ಸದಾಚಾರ
ಕೂಡಲಚೆನ್ನಸಂಗಮದೇವಾ. (ವಚನ, 1018)

## ಸ್ಥಾವರಲಿಂಗಗಳ, ಶಿವಭಕ್ತರ, ಶಿವಲಾಂಛನಧಾರಿಗಳ ರಕ್ಷಣೆ

ವೀರಶೈವದ ಪಂಚಾಚಾರಗಳಲ್ಲಿ ಒಂದಾದ ಗಣಾಚಾರದ ಸ್ವರೂಪವನ್ನು ಹೇಳುವಾಗ ಶಿವನಲ್ಲಿ ಮಾತ್ರ ನಿಷ್ಠೆಯನ್ನು ಹೊಂದಿರುವ ವೀರಶೈವ ಧರ್ಮಾನುಯಾಯಿಗಳು ಸ್ಥಾವರಲಿಂಗಗಳ ನಿರ್ಮಾಲ್ಯಾದಿಗಳನ್ನು ಉಪಯೋಗಿಸಬಾರದು (ಸಿ.ಶಿ. 9.36) ಎಂದು ಹೇಳಿದ್ದರೂ, ಒಂದು ವೇಳೆ ಸ್ಥಾವರಲಿಂಗಗಳಿಗೆ ಅಥವಾ ಶೈವ ಲಾಂಛನಗಳನ್ನು ಧರಿಸಿರುವ ಶಿವಭಕ್ತರಿಗೆ ಎಲ್ಲಿಯಾದರೂ ಅಪಾಯವುಂಟಾದರೆ, ಆ ಸಂದರ್ಭದಲ್ಲಿ ಕೂಡಲೇ ಪ್ರಾಣಾರ್ಪಣೆಯನ್ನು ಮಾಡಿಯಾದರೂ ಆ ಅಪಾಯವನ್ನು ಪರಿಹರಿಸಬೇಕು. ಸ್ಥಾವರಲಿಂಗದ ರಕ್ಷಣೆ ಮಾಡುವುದೂ ಒಂದು ಧಾರ್ಮಿಕ ಮೌಲ್ಯ. ಅದನ್ನು ಸಿದ್ಧಾಂತ ಶಿಖಾಮಣಿ ಹೀಗೆ ನಿರೂಪಿಸಿದೆ:

ಯತ್ರ ಸ್ಥಾವರಲಿಂಗಾನಾಮಪಾಯಃ ಪರಿವರ್ತತೇ ।
ಅಥವಾ ಶಿವಭಕ್ತಾನಾಂ ಶಿವಲಾಂಛನಧಾರಿಣಾಮ್ ॥
ತತ್ರ ಪ್ರಾಣಾನ್ ವಿಹಾಯಾಪಿ ಪರಿಹಾರಂ ಸಮಾಚರೇತ್ ।
(9, 34–35)

ಇದಲ್ಲದೆ ಶಿವಭಕ್ತನು ಶಿವನಿಂದಕರನ್ನು ಕಂಡಾಗ ಅವರನ್ನು ಸಂಹರಿಸಬೇಕು ಅಥವಾ ಕಠೋರ ಶಬ್ದಗಳಿಂದ ಝಂಕಿಸಬೇಕು. ಒಂದು ವೇಳೆ ಇವೆರಡನ್ನೂ ಮಾಡಲು ಅಸಮರ್ಥನಾದರೆ ಆ ಸ್ಥಳವನ್ನು ಬಿಟ್ಟು ಹೋಗಬೇಕೆಂದಿದೆ, ಸಿದ್ಧಾಂತ ಶಿಖಾಮಣಿ:

ಶಿವನಿಂದಾಕರಂ ದೃಷ್ಟ್ವಾ ಘಾತಯೇದಥವಾ ಶಪೇತ್ ।
ಸ್ಥಾನಂ ವಾ ತತ್ಪರಿತ್ಯಜ್ಯ ಗಚ್ಛೇದ್ ಯದ್ಯಕ್ಷಮೋ ಭವೇತ್ ॥ (ಸಿ.ಶಿ., 9.36)

## ಉಪಸಂಹಾರ

ಇದೇ ರೀತಿ ನೂರಾರು ವೀರಶೈವ ಧರ್ಮದ ಮೌಲ್ಯಗಳು ವೀರಶೈವ ಸಿದ್ಧಾಂತ ಗ್ರಂಥಗಳಲ್ಲಿ, ಬಸವಾದಿ ಶಿವಶರಣರ ವಚನಗಳಲ್ಲಿ ನಿರೂಪಿತವಾಗಿವೆ. ಲಿಂಗಾಂಗ ಸಾಮರಸ್ಯ ರೂಪವಾದ ಮೋಕ್ಷಮಾರ್ಗದಲ್ಲಿ ಪ್ರವರ್ತಿಸುವವನು ಧಾರ್ಮಿಕ ಆಚರಣೆಯ ರೂಪದ ಎಲ್ಲ ಮೌಲ್ಯಗಳನ್ನೂ ಅನಿವಾರ್ಯವಾಗಿ ಪಾಲಿಸಬೇಕಾಗುತ್ತದೆ. ಅವುಗಳನ್ನು

ಪಾಲಿಸದಿದ್ದರೆ ಅವನಿಗೆ ಮೋಕ್ಷಪ್ರಾಪ್ತಿಯಾಗುವುದಿಲ್ಲವೆಂದು ಪಾರಮೇಶ್ವರಾಗಮವು ಪ್ರಚುರಪಡಿಸಿದೆ:

ಯಃ ಶಾಸ್ತ್ರ ವಿಮುತ್ಸರ್ಜ್ಯ ವರ್ತತೇ ಕಾಮಚಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಮ್ ॥

ತಸ್ಮಾಚ್ಛಾಸಂ ಪ್ರಮಾಣಂ ಹಿ ಕಾರ್ಯಾಕಾರ್ಯವ್ಯವಸ್ಥಿತೌ ।
ಜ್ಞಾತ್ವಾ ಶಾಸವಿಧಾನೋಕ್ತಂ ತತ್ತ್ವಂ ಕುರ್ಯಾದ್ಗುರೋರ್ಮುಖಾತ್ ॥
(7, 104–105)

ಆದ್ದರಿಂದ ವೀರಶೈವ ಧರ್ಮದಲ್ಲಿ ಜನಿಸಿದ ಪ್ರತಿಯೊಬ್ಬರೂ ಈ ಧರ್ಮದ ಆಚಾರ–ವಿಚಾರಗಳೆಂಬ ಮೌಲ್ಯಗಳನ್ನು ಪಾಲಿಸಿ, ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದಾಗ ವ್ಯಷ್ಟಿ–ಸಮಷ್ಟಿಗಳ ಹಿತ ಉಂಟಾಗಿ, ಸಮಾಜದಲ್ಲಿ ಶಾಂತಿ, ಸಮೃದ್ಧಿಗಳು ನೆಲೆಸುವಂತಾಗುತ್ತವೆ. ಈ ದಿಶೆಯಲ್ಲಿ ನಮ್ಮ ಮಠಾಧಿಪತಿಗಳ ಸಾಂದರ್ಭಿಕ ಧರ್ಮೋಪದೇಶ ಮಾರ್ಗದರ್ಶನಗಳು ಅನಿವಾರ್ಯವಾಗಿವೆ.

**ಪರಾಮರ್ಶನ ಗ್ರಂಥಗಳು**

1. ಪಾರಮೇಶ್ವರಾಗಮ
2. ಸೂಕ್ಷ್ಮಾಗಮ
3. ಸಿದ್ಧಾಂತ ಶಿಖಾಮಣಿ
4. ಸಮಗ್ರ ವಚನ ಸಂಪುಟಗಳು
5. ಶಿವಶರಣರ ವಚನಗಳಲ್ಲಿ ಸಾಮಾಜಿಕ ಮೌಲ್ಯಗಳು – ಡಾ. ಸಿ. ಶಿವಕುಮಾರಸ್ವಾಮಿ, ಶ್ರೀ ಚೆನ್ನಬಸವೇಶ್ವರ ಪ್ರಕಾಶನ, ಹಾರಕೂಡ

❑

'ಬಸವ, ಬಸವ, ಬಸವ' ಎನುತಿರ್ಪವರೆಲ್ಲರು
ಬಸವನ ಘನವನಾರೂ ಅರಿಯರಲ್ಲ?
ಅನಾದಿ ಪರಶಿವನಲ್ಲಿ ಅಂತರ್ಗತಮಾಗಿರ್ದ
ಮಹಾಪ್ರಕಾಶವೆ ಬಹಿಷ್ಕರಿಸಿತ್ತು.
ಆ ಚಿತ್ತೆ ಚಿದಂಗ ಬಸವ,
ಚಿದಂಗ ಬಸವನಿಂದುದಯಿಸಿದ
ಚಿದ್ವಿಭೂತಿಯನೊಲಿದು ಧರಿಸಿದ ಶರಣರೆಲ್ಲರು
ಜ್ಯೋತಿರ್ಮಯಲಿಂಗವಪ್ಪುದು ತಪ್ಪದು ಕಾಣಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.
– **ಉರಿಲಿಂಗಪೆದ್ದಿ**

# ತುಮಕೂರು ಹುಲುಕುಂಟೆಮಠದ ಬಿ. ಶಿವಮೂರ್ತಿಶಾಸ್ತ್ರಿ ವಿರಚಿತ 'ನಾಲ್ವಡಿ ಶ್ರೀಕೃಷ್ಣರಾಜೇಂದ್ರ ವಿಳಾಸಂ'

**ಡಾ. ಬಿ. ನಂಜುಂಡಸ್ವಾಮಿ**

ಕನ್ನಡನಾಡು ನುಡಿಗೆ ಅಪರಿಮಿತವಾದ ಸೇವೆ ಸಲ್ಲಿಸಿದ ಮಹನೀಯರಲ್ಲಿ ಬಿ. ಶಿವಮೂರ್ತಿಶಾಸ್ತ್ರಿಗಳ ಹೆಸರು ಮುಂಚೂಣಿಯಲ್ಲಿದೆ. ಇವರು ತಮ್ಮ ಇಪ್ಪತ್ತಾರನೆಯ ವಯಸ್ಸಿನಲ್ಲಿ ಈ ಖಂಡಕಾವ್ಯವನ್ನು ರಚಿಸಿದ್ದಾರೆ. ಬಿ. ಶಿವಮೂರ್ತಿಶಾಸ್ತ್ರಿಗಳ ಜನನ ೨೩.೨.೧೯೦೩; ಶಿವೈಕ್ಯ ೧೫.೧.೧೯೭೬.

ಶ್ರೀಮನ್ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ತುಮಕೂರು ಪಟ್ಟಣದ ಪ್ರಜೆಗಳ ಪ್ರಾರ್ಥನಾನುಸಾರವಾಗಿ ಇದೇ ಶುಕ್ಲ ಸಂವತ್ಸರ ಮಾರ್ಗಶಿರಮಾಸ ಶುದ್ಧ ಏಕಾದಶಿ ಗುರುವಾರ ತಾ. ೧೨.೧೨.೧೯೨೯ರ ಶುಭ ಮುಹೂರ್ತದಲ್ಲಿ ತುಮಕೂರಿನಲ್ಲಿ ಹೊಸದಾಗಿ ಹಾಕಿರುವ ವಿದ್ಯುದ್ದೀಪಗಳ ಪ್ರಾರಂಭೋತ್ಸವವನ್ನು ತಮ್ಮ ಅಮೃತಹಸ್ತದಿಂದ ಉದ್ಘಾಟಿಸಿದ ಸಮಾರಂಭದಲ್ಲಿ ಈ ಖಂಡಕಾವ್ಯ ಲೋಕಾರ್ಪಣೆಯಾಗಿದೆ. ಈ ಕೃತಿಗೆ ಉಪೋದ್ಘಾತವನ್ನು ಬರೆದವರು ಅಂದಿನ ದಿನಗಳಲ್ಲಿ ತುಮಕೂರು ನಗರದಲ್ಲಿ ವಿಶ್ರಾಂತ ಜೀವನವನ್ನು ನಡೆಸುತ್ತಾ ಇದ್ದ ಆಸ್ಥಾನ ಮಹಾವಿದ್ವಾನ್ ಕರ್ಣಾಟಕ ಭಾಷಾರತ್ನ ಪಿ.ಆರ್. ಕರಿಬಸವಶಾಸ್ತ್ರಿಗಳು. ತುಮಕೂರು ನಗರದಲ್ಲಿ ಇವರ ದತ್ತುಪುತ್ರನ ಮಗಳ ಮನೆ ಇದ್ದುದರಿಂದ ಅವರ ಆಶ್ರಯದಲ್ಲಿದ್ದರು. ಕನ್ನಡ–ಸಂಸ್ಕೃತ ಭಾಷೆಯ ಪ್ರಕಾಂಡ ಪಂಡಿತರಾಗಿದ್ದರು. ಆಸಕ್ತ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾ ಇದ್ದರು. ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಮುನುಷಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಇವರ ಪ್ರಮುಖ ವಿದ್ಯಾರ್ಥಿಗಳು ಕನ್ನಡ ಕಣ್ವ ಬಿ.ಎಂ.ಶ್ರೀಕಂಠಯ್ಯ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಂಸ ಮುಂತಾದವರು.

ತುಮಕೂರು ನಗರಕ್ಕೆ ವಿದ್ಯುತ್ತು ಬಂದಿದ್ದು ೧೨.೧೨.೧೯೨೯; ಇಂದಿಗೆ ೯೫ ವರ್ಷದ ಹಿಂದೆ. ಈ ದಿನಾಂಕ ನಮ್ಮ ಜಿಲ್ಲೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದದ್ದು. ಈಗ ನಾವು ವಿದ್ಯುತ್ ಇಲ್ಲದೆ ಒಂದು ದಿನವೂ ಇರಲು ಸಾಧ್ಯವಿಲ್ಲ. ಈ ಗ್ರಂಥ ಪ್ರಕಟಣೆಯಲ್ಲಿ ತಮ್ಮ ಸಹಾಯಹಸ್ತವನ್ನು ನೀಡಿದವರು ಬಿ.ಪಿ. ಚೊಕ್ಕನಾಥರಾಜುರವರು ಮತ್ತು ಅಡ್ವೋಕೇಟ್ ಕೆ. ಶ್ರೀನಿವಾಸಮೂರ್ತಿ ಬಿ.ಎ. ಎಲ್.ಎಲ್.ಬಿ.ಯವರು. ಈ ಇಬ್ಬರ ಬಗ್ಗೆ ಕಳೆದ ಎರಡು ದಶಕಗಳಿಂದ ವಿವರ ಸಂಗ್ರಹಿಸಲು ಪ್ರಯತ್ನಪಟ್ಟೆ. ಯಾವುದೇ ತರಹದ ವಿವರ ಲಭ್ಯವಾಗಲಿಲ್ಲ. ಈ ಗ್ರಂಥವನ್ನು

ಅಂದವಾಗಿ ಮುದ್ರಣ ಮಾಡಿಕೊಟ್ಟವರು ಬೆಂಗಳೂರು ಮಾಡೆಲ್ ಮುದ್ರಾಕ್ಷರಶಾಲಾ ವ್ಯವಸ್ಥಾಪಕರಾದ ಶ್ರೀ ಟಿ.ರ್ಯ್. ಚನ್ನಪ್ಪನವರು. ಇವರ ಸಂಪೂರ್ಣ ಹೆಸರು ತುಮಕೂರು ನಂಬೆಣ್ಣ ಚನ್ನಪ್ಪನವರು. ಇವರು ಸಹ ತುಮಕೂರು ಮೂಲದವರು. ಪ್ರಕಟಿತ ಪುಸ್ತಕದಲ್ಲಿ ಮೈಸೂರು ಚಾಮುಂಡೇಶ್ವರಿ ದೇವಾಲಯದ ಭವ್ಯ ಗೋಪುರ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಚಿತ್ರ, ಶ್ರೀ ಚಾಮರಾಜೇಂದ್ರ ಒಡೆಯರ್‌ರವರ ಚಿತ್ರ ಶ್ರೀ ನರಸಿಂಹರಾಜ ಒಡೆಯರ್‌ರವರ ಚಿತ್ರ, ಮಾರಿಕಣಿವೆ ಕರೆ, ಶ್ರೀ ಕೃಷ್ಣರಾಜಸಾಗರ, ಶಿವನಸಮುದ್ರದ ಕಾವೇರಿ ಜಲಪಾತ, ಮೈಸೂರು ಅರಮನೆ ಯುವರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಚಿತ್ರಗಳು ಇವೆ. ನನಗೆ ಅವಲೋಕನ ಮಾಡಲು ಲಭ್ಯವಾದ ಪುಸ್ತಕದಲ್ಲಿ ವೇ॥ ಟಿ. ಗುರುನಂಜಯ್ಯ ಬಿ.ಎ.ಬಿ.ಎಲ್. ಅವರು ಬರೆದ ಅಭಿಪ್ರಾಯ ಭಾಗ ನಷ್ಟವಾಗಿ ಹೋಗಿತ್ತು. "ಗಾಂಧೀಮಹಾತ್ಮನ ತತ್ವಬೋಧೆ" ಈ ಲಘುಕೃತಿಯನ್ನು ಭಾಮಿನೀ ಷಟ್ಪದಿಯಲ್ಲಿ ರಚಿಸಿದ್ದು ೧೪-೭-೧೯೨೭ ರಲ್ಲಿ ಪ್ರಕಟವಾಗಿದ್ದು, ಅದೇ ಪುಸ್ತಕದ ಮರುಮುದ್ರಣ ೪.೨.೧೯೨೮ರಲ್ಲಿ ಹೊರಬಂದಿದೆ. ಮುಂದೆ ಶಾಸ್ತ್ರಿಗಳು ತಮ್ಮ ಜೀವಿತಾವಧಿಯಲ್ಲಿ ನಾನಾ ಛಂದಸ್ಸಿನಲ್ಲಿ ಪದ್ಯಗಳನ್ನು ಬರೆದರು. ಲಘುಕಾವ್ಯ, ಖಂಡಕಾವ್ಯಗಳನ್ನು ರಚಿಸಲಿಲ್ಲ. ಈ ಕಾವ್ಯಕ್ಕೆ ಹಿರಿಯ ವಿದ್ವಾಂಸರು ಕರ್ನಾಟಕ ಭಾಷಾರತ್ನ ಪ್ರಶಸ್ತಿ ಪುರಸ್ಕೃತರೂ ಆದ ಪಿ.ಆರ್. ಕರಿಬಸವಶಾಸ್ತ್ರಿಗಳು ಬರೆದ ಉಪೋದ್ಘಾತವನ್ನು ಯಥಾವತ್ತಾಗಿ ನೀಡಲಾಗಿದೆ.

**ಉಪೋದ್ಘಾತ**

ನಾಲ್ವಡಿ ಶ್ರೀ ಕೃಷ್ಣರಾಜೇಂದ್ರ ವಿಲಾಸವೆಂಬೀ ಗ್ರಂಥವನ್ನು ನಾನು ಆದ್ಯಂತವಾಗಿ ಓದಿ ನೋಡಿದೆನು. ಇದನ್ನು ಸರಿಪಡಿಸಿಕೊಡಬೇಕೆಂದು ಅಪೇಕ್ಷಿಸಿದ ಗ್ರಂಥಕರ್ತರ ಇಚ್ಛೆಯಂತೆ ತಿದ್ದಿ ಕೊಟ್ಟರುವೆನು. ಇದಲ್ಲದೆ ಈ ಕಾವ್ಯದ ವಿಷಯದಲ್ಲಿ ನನ್ನ ಅಭಿಪ್ರಾಯವನ್ನೂ ಬರೆದಿರುವೆನು.

ಈ ಕಾವ್ಯವು ಚಂಪೂರೂಪವಾಗಿದೆ. ನಾಲ್ಕು ಭಾಗಗಳಾಗಿ ಭಾಗಿಸಲ್ಪಟ್ಟು ಪ್ರತಿ ಭಾಗಕ್ಕೂ ತರಂಗವೆಂಬ ಹೆಸರನ್ನು ಕೊಟ್ಟಿದೆ. ಪ್ರಥಮ ತರಂಗದಲ್ಲಿ ಭರತಖಂಡದ ಮತ್ತು ಕರ್ಣಾಟಕದ ವರ್ಣನೆಯಿದೆ. ದ್ವಿತೀಯ ತರಂಗದಲ್ಲಿ ಯದುವಂಶದ ರಾಜರ ಚರಿತ್ರೆಯನ್ನು ಯದುಮಹಾರಾಜರಿಂದ ಹಿಡಿದು ಆಳುವ ಮಹಾಪ್ರಭುಗಳವರೆಗೆ ಸಂಗ್ರಹವಾಗಿ ನಿರೂಪಿಸಲ್ಪಟ್ಟಿದೆ. ತೃತೀಯ ತರಂಗದಲ್ಲಿ ಶ್ರೀಮನ್ಮಹಾರಾಜರವರ ಗುಣಗಳೂ, ಸದಾಚಾರ ಸನ್ಮಾರ್ಗಗಳೂ ಹೇಳಲ್ಪಟ್ಟಿವೆ. ಚತುರ್ಥ ತರಂಗದಲ್ಲಿ ಶ್ರೀಮನ್ಮಹಾರಾಜರವರ ಕಾಲದಲ್ಲಾದ ದೇಶಾಭಿವೃದ್ಧಿ ಕಾರ್ಯಗಳು ವರ್ಣಿತವಾಗಿದೆ. ಒಟ್ಟಿನಲ್ಲಿ ಇದೊಂದು ನವೀನವೂ ಅವಲೋಕನೀಯವೂ ಆದ ಖಂಡಕಾವ್ಯ ವಾಗಿದೆ.

ಈ ಕವಿಯು ಕರ್ಣಾಟಕ ಸಾಹಿತ್ಯಪ್ರಪಂಚದಲ್ಲಿ ಹೊಸಬನಂತೆ ಕಾಣಿಸಿದರೂ, ಕವಿತಾವೈಖರಿ ಮಾತ್ರ ಸಂಸ್ಕಾರಜನ್ಯವಾದುದೆಂದು ಕಾಣುತ್ತದೆ. ಶೈಲಿಯು ಸರಳವಾಗಿಯೂ, ಗಂಭೀರವಾಗಿಯೂ, ಸ್ವಭಾವಜನ್ಯವಾಗಿಯೂ ಇದೆ. ಅನೇಕ ಸಂದರ್ಭಗಳಲ್ಲಿ ರಸಭಾವಗಳು ಚೆನ್ನಾಗಿ ಪ್ರತಿಪಾದಿಸಲ್ಪಟ್ಟು ಚಿತ್ತಾಹ್ಲಾದಕವಾಗಿವೆ. ವರ್ಣನೆಯು ನವೀನವಾಗಿದೆ. ಯುಕ್ತಿಗಳು ಹೊಸ ರೀತಿಯಿಂದ ಕೂಡಿವೆ. ಉಪಮಾನಾದ್ಯಲಂಕಾರಗಳು ಮಿತವರಿತು ಬಂದಿವೆ. ಗ್ರಂಥವು ಬಹು ಗಂಭೀರವಾಗಿಯೂ ರಸವತ್ತಾಗಿಯೂ ಇದೆ.

ಈ ಗ್ರಂಥಕರ್ತೃವಾದ ವೇ॥ ಬಿ. ಶಿವಮೂರ್ತಿಶಾಸ್ತ್ರಿಗಳೆಂಬುವರು ನನ್ನ ವಿದ್ಯಾರ್ಥಿಗಳಲ್ಲಿ ಮುಖ್ಯರು. ಇವರು ಸರ್ಕಾರದ ಪಾಠಶಾಲೆಗಳಲ್ಲಿಯೇ ಅಲ್ಲದೆ ನನ್ನಲ್ಲಿಯೂ ಸ್ವತಂತ್ರವಾಗಿ ಕೆಲವು ವರ್ಷ ವಿದ್ಯಾಭ್ಯಾಸ ಮಾಡಿದವರು. ಇವರು ಕೆಲವು ಕಾಲ ಉಪಾಧ್ಯಾಯ ವೃತ್ತಿಯಲ್ಲಿದ್ದು ಸುಮಾರು ಈಗ್ಗೆ ನಾಲ್ಕು ವರ್ಷಗಳ ಹಿಂದೆ ಆ ವೃತ್ತಿಯನ್ನು ತ್ಯಜಿಸಿ ಕೀರ್ತನ, ಪುರಾಣಶ್ರವಣ, ಭಾಷಣಾದಿಗಳ ಮೂಲಕ ಧರ್ಮಬೋಧೆ ಮಾಡುತ್ತಾ ದೇಶಸೇವೆ ಮಾಡುತ್ತಿರುವರು. ಇವರು ಒಳ್ಳೆಯ ವಾಗ್ಮಿಗಳೂ ಲೇಖಕರೂ ಆಗಿರುವುದರಿಂದ ನಾಲ್ಕು ವರ್ಷಗಳಲ್ಲಿಯೇ ಕರ್ಣಾಟಕದ ಕೀರ್ತನಕಾರರಲ್ಲಿ ಹೆಸರನ್ನು ಪಡೆದ ಗಣ್ಯರಾಗಿರುವರು. ಇದಲ್ಲದೆ ಅನೇಕ ಸಂಘಗಳಿಂದಲೂ, ದೊಡ್ಡ ಮನುಷ್ಯರಿಂದಲೂ ಬಂಗಾರದ ಪದಕಗಳನ್ನು ಪಡೆದು, ಲೋಕಪ್ರೇಮವನ್ನು ಸಂಪಾದಿಸಿರುವರು.

ಮಹಾ ವಿದ್ವಾಂಸರಾದ ಶ್ರೀಮದ್ರಂಭಾಪುರೀ ಸಂಸ್ಥಾನದ ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಈ ಗ್ರಂಥಕರ್ತೃಗಳ ಕೀರ್ತನಸಾಮರ್ಥ್ಯವನ್ನೂ, ವಿಲಕ್ಷಣ ಕವಿತಾಶಕ್ತಿಯನ್ನೂ ಪರಾಂಬರಿಸಿ ಶ್ರೀ ಪ್ರಭವ ಸಂವತ್ಸರದ ವಿಜಯದಶಮಿಯ ಪುಣ್ಯದಿನ ಆನವಟ್ಟಿಯಲ್ಲಿ ನೆರೆದಿದ್ದ ಮಹಾಸಭೆಯಲ್ಲಿ ವೀರಸಿಂಹಾಸನಾರೋಹಣ ಮಾಡಿದ್ದ ಸುಮುಹೂರ್ತದಲ್ಲಿ ಬಂಗಾರದ ಪದಕದೊಂದಿಗೆ 'ಕೀರ್ತನಕೇಸರಿ' 'ಕವಿರತ್ನ' ಎಂಬ ಘನವಾದ ಪ್ರಶಸ್ತಿಗಳನ್ನು ಆಶೀರ್ವಾದಪೂರ್ವಕ ಅನುಗ್ರಹಿಸಿದ್ದಾರೆ.

ಸ್ವಲ್ಪ ಕಾಲದೊಳಗಾಗಿ ಸರ್ವತೋಮುಖವಾದ ಅಭಿವೃದ್ಧಿಯನ್ನು ಪಡೆದು ನಾನಾ ಮುಖದಿಂದ ದೇಶಸೇವೆ ಮಾಡುತ್ತಿರುವ ವೇ॥ ಬಿ. ಶಿವಮೂರ್ತಿಶಾಸ್ತ್ರಿಗಳಿಗೆ ಸರ್ವಜ್ಞನೂ ಸರ್ವಶಕ್ತನೂ ಆದ ಪರಮೇಶ್ವರನು ಇತೋಪ್ಯತಿಶಯವಾದ ಸಾಮರ್ಥ್ಯವನ್ನು ದಯಪಾಲಿಸಿ ನಾಲ್ವಡಿ ಶ್ರೀ ಕೃಷ್ಣರಾಜೇಂದ್ರ ವಿಲಾಸದಂತಹ ಹಲವು ಗ್ರಂಥಗಳನ್ನು ಬರೆಯುವ ಶಕ್ತಿಯನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

**ಪಿ.ಆರ್. ಕರಿಬಸವಶಾಸ್ತ್ರಿ**
ಆಸ್ಥಾನ ಮಹಾವಿದ್ವಾನ್, ಕರ್ನಾಟಕ ಭಾಷಾರತ್ನ, ಮೈಸೂರು

ಈ ಕೃತಿಯ ಕರ್ತೃ ಬಿ. ಶಿವಮೂರ್ತಿಶಾಸ್ತ್ರಿಗಳು ಬರೆದ ಪೀಠಿಕೆಯನ್ನು ಯಥಾವತ್ತಾಗಿ ಕೊಡಲಾಗಿದೆ.

**ಪೀಠಿಕೆ**

ಈ ಪ್ರಪಂಚವನ್ನೇ ಧಾರೆಯೆರೆವೆನೆಂದು ಹೇಳಿದರೂ ಯಾವ ಮಹಾನುಭಾವರ ನಾಲಗೆಯಲ್ಲಿ ಅಸತ್ಯಮಯವಾದ ಒಂದಕ್ಷರವಾದರೂ ಬರಲಾರದೋ ಅಂತಹ ಜಗನ್ಮಾನ್ಯರಾದ ಮಹಾತ್ಮ ಗಾಂಧೀಜಿಯವರ ಮುಖದಿಂದ ಶ್ಲಾಘಿಸಲ್ಪಟ್ಟಿರುವ ಕರ್ಣಾಟಕ ಸಿಂಹಾಸನಾಧೀಶ್ವರರಾದ ಶ್ರೀಮರ್ಮಹಾರಾಜ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಯಸ್.ಐ., ಜಿ.ಬಿಇ., ಅವರ ವಿಷಯವಾದ ಗ್ರಂಥವಿದು.

ನಮ್ಮ ಶ್ರೀಮರ್ಮ ಮಹಾರಾಜರವರು ಭರತಖಂಡದ ದೇಶೀಯ ಪ್ರಭುಗಳಲ್ಲಿ ಶಿರೋಮಣಿಪ್ರಾಯರೂ, ಸತ್ಯಸಂಧರೂ, ಪ್ರಜಾನುರಾಗಿಗಳೂ, ಗುರುದೇವತಾ ಶ್ರದ್ಧಾನ್ವಿತರೂ ಎನಿಸಿ ರಾಜರ್ಷಿಗಳೆಂದು ವಿಖ್ಯಾತರಾಗಿರುವರೆಂಬ ವಿಷಯವನ್ನು ಪ್ರತಿಯೊಬ್ಬ ಕನ್ನಡಿಗನೂ ಅರಿತೇ ಇರುವನು.

ಇಂತಹ ಮಹಾಪ್ರಭುಗಳು ತುಮಕೂರು ಪಟ್ಟಣದ ಪ್ರಜೆಗಳ ಪ್ರಾರ್ಥನಾನುಸಾರವಾಗಿ ಇದೇ ಶುಕ್ಲ ಸಂವತ್ಸರದ ಮಾರ್ಗಶಿರ ಮಾಸ ಶುದ್ಧ ಏಕಾದಶಿ ಗುರುವಾರ (ತಾ॥ ೧೨-೧೨-೧೯೨೯) ದ ಶುಭಮುಹೂರ್ತದಲ್ಲಿ ನಮ್ಮ ತುಮಕೂರಿನಲ್ಲಿ ಹೊಸದಾಗಿ ಹಾಕಿರುವ ವಿದ್ಯುದ್ದೀಪಗಳ ಪ್ರಾರಂಭೋತ್ಸವವನ್ನು ತಮ್ಮ ಅಮೃತಹಸ್ತದಿಂದ ನಡೆಯಿಸುವರು. ಅಭೂತಪೂರ್ವವಾದ ಈ ಮಹೋತ್ಸವದ ಸ್ಮರಣಾರ್ಥವಾಗಿ ನಮ್ಮ ಶ್ರೀಮನ್ ಮಹಾರಾಜರವರ ಸಂಬಂಧವಾದೀ ಗ್ರಂಥವನ್ನು ತುಮಕೂರು ವಾಸಿಯೂ, ಮೈಸೂರು ಪ್ರಜೆಯೂ ಆದ ಈ ಗ್ರಂಥಕರ್ತನು ಪ್ರಕಟಿಸಿರುವನು.

ಶ್ರೀ ಕೃಷ್ಣರಾಜೇಂದ್ರ ವಿಳಾಸಂ ಎಂಬೀ ಗ್ರಂಥವು ಮುಖ್ಯವಾಗಿ ರಾಜಭಕ್ತಿಯಿಂದ ಬರೆಯಲ್ಪಟ್ಟುದಾಗಿದೆ. ಈ ಗ್ರಂಥದ ಪರಿಚಯವು ಉಪೋದ್ಘಾತದಲ್ಲಿ ಬಂದಿರುವುದರಿಂದ ಅದನ್ನು ಮತ್ತೊಮ್ಮೆ ಇಲ್ಲಿ ಬರೆವುದನವಶ್ಯಕವಾಗಿದೆ.

ಮುಖ್ಯವಾಗಿ ಈ ಖಂಡಕಾವ್ಯವನ್ನು ಆದ್ಯಂತವಾಗಿ ಓದಿ ನೋಡಿ ತಿದ್ದಿಕೊಟ್ಟ ನನ್ನ ವಿದ್ಯಾಗುರುಗಳಾದ ಮೈಸೂರು ಆಸ್ಥಾನ ಮಹಾವಿದ್ವಾ್, ಕರ್ಣಾಟಕ ಭಾಷಾರತ್ನ ವೇ॥ ಪಿ.ಆರ್. ಕರಿಬಸವಶಾಸ್ತ್ರಿಗಳಿಗೂ ಇದಕ್ಕೆ ಸಹೃದಯಭಾವದಿಂದ ತಮ್ಮ ಅಭಿಪ್ರಾಯವನ್ನು ಬರೆದುಕೊಟ್ಟ ಮ॥ ಟಿ. ಗುರುನಂಜಯ್ಯ, ಬಿ.ಎ., ಬಿ.ಎಲ್., ಅಡ್ವೋಕೇಟ್, ತುಮಕೂರು ಎಂಬುವರಿಗೂ ನಾನು ಅತ್ಯಂತ ಕೃತಜ್ಞನಾಗಿರುವೆನು.

ಈ ಪುಟ್ಟ ಗ್ರಂಥವನ್ನು ಬರೆವುದರಲ್ಲಿ ನನಗೆ ಪ್ರೋತ್ಸಾಹಕರಾಗಿದ್ದ ನನ್ನ ಮಿತ್ರರಾದ ಶ್ರೀಮಾ್ ಬಿ.ಪಿ. ಚೊಕ್ಕನಾಥರಾಜರಿಗೂ, ಶ್ರೀಮಾ್ ಅಡ್ವೋಕೇಟ್ ಕೆ. ಶ್ರೀನಿವಾಸಮೂರ್ತಿ

ಬಿ.ಎ. ಎಲ್‌ಎಲ್.ಬಿ ಅವರಿಗೂ, ನಮ್ಮ ಅಪೇಕ್ಷೆಯಂತೆ ಈ ಗ್ರಂಥವನ್ನು ಅಂದವಾಗಿಯೂ ಜಾಗ್ರತೆಯಾಗಿಯೂ ಮುದ್ರಿಸಿಕೊಟ್ಟ ಬೆಂಗಳೂರು ಮಾಡಲ್ ಮುದ್ರಾಕ್ಷರಶಾಲಾ ವ್ಯವಸ್ಥಾಪಕರಾದ ಶ್ರೀ ಟಿ.ರ್ಯ್. ಚನ್ನಪ್ಪನವರಿಗೂ ನಾನು ಈ ಸಮಯದಲ್ಲಿ ಅನಂತ ಧನ್ಯವಾದಗಳನ್ನರ್ಪಿಸದಿರೆನು.

ಈ ಗ್ರಂಥವನ್ನು ಈಗ ಪ್ರಕಟಿಸಲು ನಮಗೆ ಅನುಕೂಲ ಪರಿಸ್ಥಿತಿಯನ್ನುಂಟು ಮಾಡಿದ ದಯಾಘನನಾದ ಪರಮೇಶ್ವರನನ್ನು ಎಷ್ಟು ಕೊಂಡಾಡಿದರೂ ಸಾಲದು.

ಶುಕ್ಲಸಂವತ್ಸರ ಮಾರ್ಗಶಿರ ಶುದ್ಧ ಏಕಾದಶಿ<br>ತುಮಕೂರು

ಇಂತು<br>ಕನ್ನಡಿಗರ ಸೇವಕ<br>ಬಿ. ಶಿವಮೂರ್ತಿಶಾಸ್ತ್ರಿ

ನಾಲ್ವಡಿ ಕೃಷ್ಣರಾಜ ಒಡೆಯರವರ ಸಂಪೂರ್ಣ ಜೀವನಚಿತ್ರ ಈ ಕಾವ್ಯದಲ್ಲಿ ಕಂಡುಬರುತ್ತದೆ.

.................

ವ॥ ಇಂತಪ್ಪ ಯದುಮಹಾರಾಯಂ ನಿಜಸೋದರ ಕೃಷ್ಣರಾಯಂವೆರಸು ಸೌಮಿತ್ರಿಯಿಂ ಸಮನ್ವಿತನಾದ ಶ್ರೀರಾಮಚಂದ್ರನಂತೆ ಪಲವುಂ ಸಂವತ್ಸರಂ ಧರ್ಮಮಾರ್ಗದಿಂ ಅರಸುಗೆಯ್ದು ಸಮನಂತರಂ, ಶ್ರೀಕಂಠ ಚಾಮುಂಡಾಂಬೆಯರ ಸಂಪೂರ್ಣಕೃಪಾಪಾತ್ರವಾದೀ ಯದುವಂಶಂ ದಿನದಿನಕ್ಕಂ ಬಾಲಚಂದ್ರನಂತಭಿವೃದ್ಧಿಯಂ ಪೊಂದಿದುದು.

ಯದುಭೂಪಾಲನಾಳಿದ ಮೇಲೀ ವಂಶದೊಳ್ ಪುಟ್ಟಿದ ರಾಜವೊಡೆಯರ್, ಕಂಠೀರವ ನರಸಿಂಹರಾಜ ವೊಡೆಯರ್, ಚಿಕ್ಕದೇವರಾಜ ವೊಡೆಯರೇ ಮೊದಲಪ್ಪ ಮಹಾಮಹಾ ಪ್ರತಿಭಾಶಾಲಿಗಳುಂ ಪರಾಕ್ರಮಿಗಳುಂ ವಿಖ್ಯಾತರಾಗಿ, ಸರ್ವ ಪ್ರಕಾರದಿಂ ತಮ್ಮನ್ವಯದ ಬೆಳ್ಗಸಮಂ ಎಣ್ದೆಸೆಯೊಳ್ ಪಸರಿಸಿದರ್. ಇಂತು ಕ್ರಮಕ್ರಮದಿಂ ಬಲಂಗೊಂಡೀ ಯದುವಂಶಂ ಕರ್ಣಾಟಕರಾಜ್ಯಸಿಂಹಾಸನದೊಳ್ ಶಾಶ್ವತಮಾದುದು.

ಕಂದ ॥ ಮುಮ್ಮಡಿಯ ಕೃಷ್ಣರಾಜಂ ।<br>ಸುಮ್ಮನದಿಂ ಪಂಚಮಾಬ್ದಮಾಗಿರ್ದಾಗಳ್ ॥<br>ಸಮ್ಮತಿಸೆ ಲೋಕಮೆಲ್ಲಂ ।<br>ನಮ್ಮಯ ವರರಾಜ್ಯಲಕ್ಷ್ಮಿಯೊಳ್ ಪಸೆನಿಂದಂ ॥ ೪ ॥

ವ॥ ರಾಜನೀತಿವಿದನುಂ, ವಿದ್ಯಾಸಮುದ್ರನುಂ, ಕವಿತಾಕಲಾನಿವಾಸನುಂ, ರಸಿಕಶಿರೋಮಣಿಯುಂ, ಸರಸಜನಮಾನಿತನುಂ, ಆಶ್ರಿತಜನರಕ್ಷಕನುಂ, ಗುರುದೇವತಾ ಶ್ರದ್ಧಾನ್ವಿತನುಂ, ಸಿದ್ಧಿಪುರುಷನುಂ, ಶಿವಪ್ರಸಾದಸುಧಾಸ್ವಾದನಾಸಕ್ತನುಂ ಮೇಣ್ ಶಿವಜೀವೈಕ್ಯ

ಸಂಧಾನಕುಶಲನುಮಪ್ಪ ಮುಮ್ಮಡಿಯ ಕೃಷ್ಣಭೂಪಾಲಕಂ ರಾಜ್ಯಪಾಲನಂಗೆಯ್ದ ಸಮನಂತರಂ–

ಕಂದ ॥ ಸೋಮೇಶನೊಲ್ಮೆಯಿಂದಂ ।
ಸೋಮಂಗೆಣೆಯಪ್ಪ ಚಾಮರಾಜ ಧರೇಂದ್ರಂ ॥
ಕೋಮಲೆ ಕನ್ನಡವೆಣ್ಣಂ ।
ಪ್ರೇಮಂ ಮಿಗೆ ಪೊರೆದನಾಶ್ರಿತಾಶ್ರಯದಾತಂ ॥ ೫ ॥

ವಚನ॥ ಸಕಲ ಭೂಪಾಲಚೂಡಾಮಣಿಯೆನಿಪ ಶ್ರೀಚಾಮರಾಜೇಂದ್ರ ಭೂಮಿಪಾಲಕಂ ಸಕಲಕಲಾನಿಧಿಯಪ್ಪ ಚಂದ್ರಮನಂತೆ ರಾರಾಜಿಸುತ್ತುಂ, ದಿಗಂತವಿಶ್ರಾಂತಕೀರ್ತಿಯುತನಾಗಿ ಸ್ವಯಮೇವ ವಿದ್ವಾಂಸನುಂ ಮೇಣ್ ವಿದ್ವಜ್ಜನಾಧಾರನುಮೆನಿಸಿ ಅಭಿನವಕಾಳಿದಾಸ ನಿಂದಭಿವರ್ಣಿತನಾದ ಕಾರಣಂ ಅಭಿನವ ಭೋಜರಾಜನೆನಿಸಿ, ಕರ್ಣಾಟಕ ದೇಶಭಾಷಾಭಿವರ್ಧಕನೆಂದು ಲೋಕಂ ಪೊಗಳೆ, ತನ್ನ ಪೂರ್ವಾರ್ಜಿತಪುಣ್ಯಪರಿಪಾಕದಿಂ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಶ್ರೀ ಕಂಠೀರವ ನರಸಿಂಹರಾಜ ಒಡೆಯರೆಂಬೀರ್ವರ್ ಸುಪುತ್ರರಂ ಮತ್ತಿವರ ಸಹೋದರಿಯರಾದ ಪೆಣ್ಮಕ್ಕಳನುಂ ಪಡೆದು, ಪುತ್ರಪುತ್ರಿಯರ ಬಾಲಲೀಲೆಯಂ ಮನಂದಣಿಯೆ ನೋಡಿ ಅವರಳ್ತಿಯಂ ನೀಡಿ, ಸಂತಸಂಗೂಡಿ, ಸುಖಜಲಧಿಯೊಳೋಲಾಡಿ, ವಂಶೋದ್ಧಾರಕನುಂ ಮೇಣ್ ದೇಶೋದ್ಧಾರಕನುಮೆಂದು ಜಸಂಬಡೆದು, ಮಾನವಜನ್ಮಮೆನಿಪೀ ಪಾತ್ರಮಂ ತೊರೆದು, ಜಗನ್ನಾಟಕರಂಗದಿಂ ಮರೆಯಾಗಿ, ಪರಮೇಶನಂಘ್ರಿಯಂ ಸಾರ್ದನಂತರಂ.

ವಚನ ॥ ಮತ್ತುಮಂತೆಯೆ ಬೌರಿಂಗಪೇಟೆಯಿಂ ಕೋಲಾರಕ್ಕುಂ, ಬೆಂಗಳೂರಿಂ ಚಿಕ್ಕಬಳ್ಳಾಪುರಕ್ಕುಂ, ನಂಜನಗೂಡಿಂ ಚಾಮರಾಜಪುರಕ್ಕುಂ ಧೂಮಶಕಟವನಾಗಿಸಿದುದರಿಂ ಪ್ರಜೆಗಳ್ಗೆ ನಾನಾವಿಧ ಪ್ರಯೋಜನಮಾದುದು.

ಗಾಂಧಿ ಮಹಾತ್ಮನನೊಲವಿಂ ।
ಬಂಧುರಮತಿ ಕೃಷ್ಣಭೂಪನಾಹ್ವಾನಿಸುತುಂ ॥
ನಂದಿಯ ಬೆಟ್ಟದೊಳಿರಿಸುತೆ ।
ಚೆಂದದೊಳುಪಚರಿಸಿ ಕೀರ್ತಿಯಂ ಪಿರಿದಾಂತಂ ॥ ೨೬ ॥

ಜನನುತ 'ಇರ್ವಿನ್' ಪ್ರಭುವರ ।
ನನುನಯದಿಂ ಕೃಷ್ಣ ಭೂಪನಂ ಮನ್ನಿಸುತಂ ॥
ಜನಪತಿಯ ಸುಗುಣರಾಜಿಗೆ ।
ಮನದೊಳ್ ಮಿಗೆ ಹರಿಸವಾಂತು ಸಾಯವಗೆಯ್ದಂ ॥ ೨೭ ॥

ವ॥ ಇಂತು ಧರ್ಮದಿಂ ರಾಜ್ಯಭಾರಂಗೆಯ್ವ ನಮ್ಮ ಮಹಾಪ್ರಭುಗಳ ವಂಶಸುರತರು ಶ್ರೀಕಂಠಚಾಮುಂಡಾಂಬೆಯರ ಕೃಪಾವಿಶೇಷದಿಂ ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರ ಸುಕುಮಾರ ಜಯಚಾಮರಾಜೇಂದ್ರನ ರೂಪಿನಿಂ ಫಲಿಸಿಹುದು. ರಾಜಕುಲಕಂ ಮೇಣ್ ಪ್ರಜಾವರ್ಗಕ್ಕುಂ ಅತೀವ ಹರ್ಷಾಸ್ಪದಮಾಗಿರ್ಪುದು.

ಕಂದ ॥ ಚಾಮೇಂದ್ರವಂಶಸುರತರು ।
ಚಾಮುಂಡಿಯ ದಯದೆ ಫಲವನೀಯುತೆ ನಲವಿಂ ॥
ಚಾಮೇಂದ್ರ ಪೌತ್ರನಾಮದೆ ।
ಭೂಮಿಯೊಳಖಿಲರ್ಗೆ ಮುದವನಿತ್ತಿಹುದೀಗಳ್ ॥೩೪॥

ವೃ॥ ಫಲವಿಂತೇಳ್ಗೆಯನೆಯ್ದಲೆಯ್ದೆ ವಿಲಸಚ್ಚಾಮುಂಡಿಕಾದೇವಿಯಿಂ ।
ನೆಲದೊಳ್ಕೃಷ್ಣಧರೇಂದ್ರಧರ್ಮಮೆ ವಲಂ ತಾನೀಯೆ ಸಂಪುಷ್ಟಿಯಂ
ನಳಿನಾಕ್ಷಂ ನಿಜವಂಶಕೀಯಲನಿಶಂ ಸತ್ಕೀರ್ತಿಯಂ ಭಾಗ್ಯಮಂ।
ಮಳೆಯಿಂ ಮಂಗಳಮಕ್ಕೆ ನಾಡ ಜನರ್ಗಂ ದೇವರ್ಕಳಾನಂದದಿಂ ॥

ವ॥ ನಾಲ್ವಡಿ ಶ್ರೀ ಕೃಷ್ಣರಾಜೇಂದ್ರಂ ನೆಗಳ್ಚಿದ ಸತ್ಕಾರ್ಯಂಗಳೆಲ್ಲಮಂ ಬಣ್ಣಿಸಲ್ ವಾಸವಸಚಿವನಲ್ಲದೆ ಸಾಮಾನ್ಯಂಗೆ ಸಾಧ್ಯಮಲ್ಲಮಾದುದರಿಂದೆನ್ನ - ರಿವಿರ್ದನಿತನುಸುರಿರ್ಪೆಂ.

ಇಂತು ನಾಲ್ವಡಿ ಶ್ರೀ ಕೃಷ್ಣರಾಜೇಂದ್ರ ವಿಳಾಸದೊಳ್ ರಾಜ್ಯಭಾರ ವರ್ಣನಂ ನಾಮ ಚತುರ್ಥ ತರಂಗಂ ಸಮಾಪ್ತಂ. ॥ ಮಂಗಳಂ ॥

ಈ ಖಂಡಕಾವ್ಯ ಮತ್ತೆ ಮರುಮುದ್ರಣವಾಗಿ ಆಸಕ್ತರ ಅಧ್ಯಯನಕ್ಕೆ ಲಭ್ಯವಾಗಬೇಕು. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಕಾರಣರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಮೇಲಿನ ಕಾವ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರೆ ಆದ ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿಗಳವರೇ ರಚಿಸಿರುವುದು ಒಂದು ವಿಶೇಷ. ಈ ಎರಡೂ ಕಾರಣಗಳಿಂದ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಈ ಖಂಡಕಾವ್ಯವನ್ನು ಮುದ್ರಣ ಮಾಡಿ ಕನ್ನಡಮ್ಮನ ಮಡಿಲನ್ನು ತುಂಬಲಿ ಎಂಬುದು ಸಹೃದಯರ ಕೋರಿಕೆ. ❑

ಅಯ್ಯಾ, ನಿಮ್ಮ ಶರಣರ ಚರಣದ ಭಕ್ತಿಯೇ
ಎನಗೆ ಸಾಲೋಕ್ಯಪದವಯ್ಯಾ
ನಿಮ್ಮ ಶರಣರ ಅರ್ಚನೆ ಪೂಜೆಯೇ
ಎನಗೆ ಸಾಮೀಪ್ಯಪದವಯ್ಯಾ
ಅಯ್ಯಾ, ನಿಮ್ಮ ಗಣಂಗಳ ಧ್ಯಾನವೇ
ಎನಗೆ ಸಾರೂಪ್ಯಪದವಯ್ಯಾ
ಅಯ್ಯಾ, ನಿಮ್ಮ ಪುರಾತನರ
ಜ್ಞಾನಾನುಭಾವ ಸಮರಸಾನಂದವೇ
ಎನಗೆ ಸಾಯುಜ್ಯಪದವಯ್ಯಾ.
ಇಂತೀ ಚತುರ್ವಿಧಪದಂಗಳನಲ್ಲದೆ
ಅನ್ಯವ ನಾನರಿಯೆನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ

**– ಉರಿಲಿಂಗಪೆದ್ದಿ**

# ಪ್ರಸನ್ನತೆಯೇ ಪ್ರಸಾದ, ಪ್ರಸಾದವೇ ಪರಮಾನಂದ

ಸ.ರಾ. ಸುಳಕೂಡೆ

ಇಂದಿನ ಧಾವಂತದ ಬದುಕಿನೊಳಗೆ ಸಹಜ ನಿದ್ರೆಗೂ ತಡಕಾಡುವ ಮತ್ತು ಸಮಾಧಾನದಿಂದ ಊಟ ಮಾಡಲಾಗದ ಸನ್ನಿವೇಶವು ಅತ್ಯಂತ ದಟ್ಟಗೊಳ್ಳುತ್ತಲಿದೆ. ಅದೆಷ್ಟೋ ಬುದ್ಧಿ ಮತ್ತು ಪರಿಶ್ರಮ ಉಪಯೋಗಿಸಿ ಗಳಿಸಿದ ಸಂಪತ್ತು ಸಹ ನಿದ್ರಾಭಂಗ ಮತ್ತು ಪ್ರಸನ್ನತೆಯಿಂದ ಹಸಿವು ಹಿಂಗಿಸಿಕೊಳ್ಳದಿರಲಾಗದಕ್ಕೆ ಕಾರಣವಾಗುತ್ತಲಿದೆ. ವ್ಯಕ್ತಿಗತ ಬದುಕಿನಲ್ಲಿ ನೆಮ್ಮದಿ, ಸುಖ, ಶಾಂತಿಯ ಕ್ಷಣಗಳು, ಒಳ್ಳೆಯ ದಿನಗಳು ಮುಂದುಮುಂದಕ್ಕೆ ಹೋಗುತ್ತಲಿವೆ. ಮಾನವನ ಬದುಕಿನೊಳಗೆ ಅನಿಯಮಿತವಾದ ಆಹಾರ, ವಿಹಾರ, ನಿದ್ರೆಯ ಅಶಿಸ್ತಿನಿಂದಾಗಿ ವಿಕೃತಿಗಳು, ತಾಮಸಗಳು, ವಿತಂಡ ಆಚಾರ–ವಿಚಾರಗಳಲ್ಲದೆ ಅಸಹನೆ, ಕಾಮ, ಕ್ರೋಧ, ದ್ವೇಷ, ಜಗಳ, ಜಟಾಪಟಿಗಳೆಲ್ಲವೂ ಹೆಚ್ಚಾಗುತ್ತಲಿವೆ. ಇಂದಿನ ಎಲ್ಲ ಸ್ತರದ ಮಾನವನ ಬದುಕಿನಲ್ಲಿ ಅಸಹ್ಯ ಮತ್ತು ಅಹಿತ–ಅಮಾನುಷ, ಕ್ರೌರ್ಯ, ಮೋಸ, ವಂಚನೆ, ಅಸತ್ಯ, ಅಸಹಕಾರ, ಹಗೆತನ; ಅನಗತ್ಯ ಪೈಪೋಟಿ, ಈರ್ಷೆಗಳು ಪ್ರವರ್ಧನಮಾನಕ್ಕೆ ಬರಲು ಆಹಾರ ಪದ್ಧತಿ ಮತ್ತು ಅನಗತ್ಯ ಸಂಗ್ರಹ ಬುದ್ಧಿ, ಸ್ವಾರ್ಥವೇ ಕಾರಣವಾಗಿದೆ. ಮನುಷ್ಯನ ಬದುಕು ಸಹ್ಯ, ಸುಸೂತ್ರ, ಪ್ರಸನ್ನತೆಯ ಜೊತೆಗೆ ಪ್ರಸಾದಿತವಾಗುವ ಅವಶ್ಯಕತೆ ಇದೆ. ಇಂಥ ಪ್ರಸನ್ನತೆ, ಪ್ರಸಾದಿಕತೆ ಪಡೆಯುವ ಶಿಸ್ತಿನ ಮಾರ್ಗದೊಳಗೆ ಶರಣರ ಬದುಕು ಮಾದರಿಯಾಗಿದೆ.

ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ
ಎನ್ನ ತನುಮನಧನವಲಸದಂತೆ ಮಾಡಯ್ಯಾ.
ತನು ದಾಸೋಹಕ್ಕುಬ್ಬುವಂತೆ ಮಾಡು,
ಮನ ದಾಸೋಹಕ್ಕೆ ಲೀಯಹಂತೆ ಮಾಡು,
ಧನ ದಾಸೋಹಕ್ಕೆ ಸವೆದು, ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ,
ಪರಿಣಾಮಿಸುವಂತೆ ಮಾಡು ಕೂಡಲಸಂಗಮದೇವಾ.

ಶರಣರು ಮಾನವೀಯ ಸಂಪತ್ತು ಗಳಿಸಿಕೊಳ್ಳುವ ಅಗತ್ಯತೆ ಕಂಡುಕೊಂಡು ಸತ್ಯ ಶುದ್ಧ ಕಾಯಕದೊಳಗೆ ನಿಷ್ಠೆ, ಶ್ರದ್ಧೆಯನ್ನು ಹೊಂದಿದಷ್ಟೇ ದಾಸೋಹ, ಪ್ರಸಾದದೊಳಗೂ ಹೊಂದಿದ್ದರೆಂಬುದಕ್ಕೆ ಬಸವಣ್ಣನವರ ಅನುಭಾವದ ಈ ವಚನವೇ ಸಾಕ್ಷಿಯಾಗಿದೆ. ಬಸವಣ್ಣನವರು ಮನುಷ್ಯನ ಬದುಕು ಪ್ರಸಾದಿಕಗೊಳ್ಳಬೇಕೆಂದು ಕಾಯಕ, ದಾಸೋಹ, ಸತ್ಸಂಗಗಳನ್ನೆಲ್ಲ ರೂಢಿಗೊಳಿಸಿದರು. ಯಾರು ತಮ್ಮ ತಮ್ಮ ಕಾಯಕಗಳನ್ನು

ನಿಷ್ಠೆ, ಶ್ರದ್ಧೆ ಮತ್ತು ಸತ್ಯಶುದ್ಧತೆಗೆ ಬದ್ಧತೆ ಸೂತ್ರೀಕರಿಸಿಕೊಳ್ಳುತ್ತಾರೋ ಅವರಿಗೆಂದೂ ಬದುಕಿನ ಬಾಧೆಗಳು ಬೆನ್ನು ಹತ್ತುವುದಿಲ್ಲೆಂಬುದನ್ನು ಖಾತರಿಪಡಿಸಿದ ಬಸವಣ್ಣನವರು ಬದುಕಿನ ಎಲ್ಲ ಚಟುವಟಿಕೆಗಳು ಸಾತ್ವಿಕ, ಸನ್ನಡತೆ, ಪರಿಶುದ್ಧತೆಯನ್ನು ಪಾಲಿಸುವಂತೆ ಕಟ್ಟುನಿಟ್ಟಿನ ಅನುಭವವನ್ನು ಪಸರಿಸಿದರು. ಅಂದು ಕಲ್ಯಾಣನಾಡಿನೊಳಗೆ ತಾವು ಪ್ರಸನ್ನ, ಪ್ರಸಾದಿಕರಾಗುವುದರ ಜೊತೆಗೆ ಅನ್ಯರು ಸಹ ಪ್ರಸನ್ನವಾಗಿರುವಂತೆ ನೋಡಿಕೊಂಡು ಸಕಲ ಜೀವಾತ್ಮರಿಗೆ ಲೇಸನ್ನೇ ತಂದದ್ದು ಮನನಯೋಗ್ಯವಾಗಿದೆ. ಶರಣರು ಕೇವಲ ತಮ್ಮ ಬದುಕಿನ ಆಗುಹೋಗುಗಳನ್ನು ಪರಿಶುದ್ಧ, ಪ್ರಸನ್ನತೆ, ಪ್ರಸಾದಿಕಗೊಳಿಸಿಕೊಳ್ಳುವ ಹಂತಕ್ಕೆ ಸೀಮಿತಗೊಳ್ಳಲಿಲ್ಲ. ತನ್ನ ಸಹಚರರು, ಸರ್ವಸಮೂಹವು ಪ್ರಸಾದಿಕವಾಗುವಂತೆ ನಡೆದರು, ನುಡಿದರು, ಸಹಕರಿಸಿದರು, ಪ್ರಸನ್ನತೆಯನ್ನೂ ಪಡೆದುಕೊಂಡರು.

> ಒಕ್ಕುದು ಪ್ರಸಾದವಲ್ಲ, ಮಿಕ್ಕುದು ಪ್ರಸಾದವಲ್ಲ.
> ಹತ್ತೆ ಕರೆದಿಕ್ಕುವದು ಪ್ರಸಾದವಲ್ಲ
> ತರ್ಕಿಸಿ ನಿಮ್ಮುವನಪ್ಪಿಕೊಂಡಡೆ,
> ನಿಶ್ಚಯ ಪ್ರಸಾದ ಕಾಣಾ ರಾಮನಾಥ.

ಶರಣರು ತಮ್ಮ ಆಸೆ, ಆಕಾಂಕ್ಷೆ, ಸ್ವಾರ್ಥ, ಅನುಕೂಲ, ಅಂತಸ್ತು, ಚೌಕಾಸಿ, ಇವನಾರವ ಇವನಾರವ ಎಂಬೆಲ್ಲವನ್ನೂ ಹಿಂದಿಕ್ಕಿ ಸರ್ವರೊಂದಿಗೆ ಬೆರೆತು ಸರ್ವರಿಗೂ ಸಮನಾಗಿ, ಸೌಹಾರ್ದಯುತವಾಗಿ, ಸಹಕಾರಸಹಿತವಾಗಿ, ಅನುಕೂಲಗಳು ದೊರೆಯುವಂತೆ ಬದುಕನ್ನು ರೂಪಿಸಿಕೊಂಡರು. ಅವರು ತಮಗೆ ಬೇಡವಾದದ್ದು, ಮಿಕ್ಕಿದ್ದು, ಹಳಸಿದ್ದು, ನಿರುಪಯುಕ್ತವೆಂದು ನಿರ್ಧರಿಸಿದ್ದನ್ನು ದಾಸೋಹಕ್ಕೆಂದೂ ಬಳಸಿದವರಲ್ಲ. ಅವರು ಎಲ್ಲವೂ ಇದೆ ಎಂದು ದುಂದುವೆಚ್ಚಕ್ಕೂ ಮುಂದಾದವರಲ್ಲ. ಕಾಯಕದಿಂದ ಗಳಿಸಿದ್ದನ್ನು ಸಂಯಮ, ಸುಶೀಲ, ಪರಿಶುದ್ಧತೆಯಿಂದ ಬಳಸಿ, ಒಂದಿಷ್ಟು ಉಳಿದುದ್ದನ್ನು ಅಸಹಾಯಕರಿಗೆ, ಅಗತ್ಯವೆಂದು ಕಂಡವರಿಗೆ ಪ್ರಾಂಜಲ ಮನಸ್ಸಿನಿಂದ ಕೊಟ್ಟು ಸ್ವಾವಲಂಬಿ, ಸ್ವಾಭಿಮಾನದ ಬದುಕಿಗೆ ಆಸರೆಯಾದವರು. ಕಲ್ಯಾಣನಗರದೊಳಗೆ ಯಾರೂ ಬೇಡುವವರಿರಲಿಲ್ಲ. ಮೈಗಳ್ಳರು, ಆಸೆಬುರುಕರು, ಮತ್ತೊಬ್ಬರಿಂದ ಏನೇನೋ ನೆಪ, ಮಂತ್ರ, ತಂತ್ರ, ಮುಹೂರ್ತ, ಪಂಚಾಂಗ ಹೇಳಿ ಪಡೆಯುವವರಿರಲಿಲ್ಲ. ಬಸವಾದಿ ಶರಣರು ನಂಬಿ ಆಚರಣೆಗೆ ತಂದ ಕಾಯಕ, ದಾಸೋಹ, ಸತ್ಸಂಗದ ಸಂಸ್ಕೃತಿಗೆ ಬದ್ಧರಾಗಿ, ಸಿದ್ಧರಾಗಿ, ವಚನನಿಷ್ಠರಾಗಿ ಬದುಕಿದ ಜನಸಮೂಹವು ತನ್ನಿಂದ ತಾನೇ ಸಂಘಟಿತಗೊಂಡಿದ್ದು 'ನಿಮ್ಮವನಪ್ಪಿಕೊಂಡಡೆ ನಿಶ್ಚಯ ಪ್ರಸಾದ' ಎಂಬ ಅನುಭಾವದಂತಿದೆ. ಶರಣರು ಉಪದೇಶ, ಬೋಧನೆ, ಆ, ಈ ದೇವರು, ದೇವತೆಗಳ ಶಾಪ, ಪರಿಹಾರ, ಅನುಗ್ರಹ, ಆಶೀರ್ವಾದ ಮುಂತಾದ ಸಂಗತಿಗಳನ್ನೆಲ್ಲ ಬದಿಗೆ ಸರಿಸಿ, ಕಾಯಕದಿಂದಲೇ ಬದುಕು, ಬದುಕು ಕಾಯಕಕ್ಕಾಗಿ ಎಂದು ನಂಬಿ ನಡೆದುಕೊಂಡವರು. ಅವರ ಬದುಕು ಕಾಯಕದೊಂದಿಗೆ ಪ್ರಸಾದಿಕವೂ ಆಗಿತ್ತೆಂಬುದು ಸರ್ವಸಮ್ಮತ ಅನುಭವವೇ ಆಗಿದೆ.

ಶರಣರು ಜನಜೀವನದೊಳಗೆ ಸಮಾನತೆಯ ಜೊತೆಗೆ ವರ್ಗ, ವರ್ಣ, ಶ್ರೇಣೀಕೃತ ವಿಂಗಡಣೆ, ಲಿಂಗಭೇದರಹಿತ, ಸಮಸಂಸ್ಕೃತಿ ಶ್ರಮಸಂಸ್ಕೃತಿ ಸಹಿತ ಜೀವನವಿಧಾನವನ್ನು ಪ್ರಚಲಿತಕ್ಕೆ ತಂದ ಪರಿಣಾಮವಾಗಿ ದೇಶವಿದೇಶಗಳ ಮೂಲೆಮೂಲೆಯಿಂದ ಜನರು ಕಲ್ಯಾಣಕ್ಕೆ ಬಂದು ನೆಲೆಸಿದರು. ಶರಣರಾಗಿ ಕಾಯಕ, ದಾಸೋಹ, ಸತ್ಸಂಗಕ್ಕೆಲ್ಲ ಒಗ್ಗಿಕೊಂಡರು. ಇಹದ ಬದುಕನ್ನು ಕೇವಲ ಕನಿಷ್ಠ, ಭ್ರಮೆ, ಭ್ರಾಂತಿ ಎಂಬ ಮಾತುಗಳನ್ನು ಪರಾಮರ್ಶಿಸಿದ ಶರಣರು, ಕಾಯಕ, ದಾಸೋಹ, ಸತ್ಯದ ನಡೆ–ನುಡಿಯೊಳಗೆ ನಿರತಗೊಂಡಷ್ಟು "ಸಕಲ ಪಡಿಪದಾರ್ಥಗಳು ಇದಿರಲ್ಲಿಪ್ಪವು" ಎಂಬುದನ್ನು ಸಾಧಿಸಿ ತೋರಿಸಿದರು. ಶರಣರು ನಂಬಿ ಆಚರಣೆಗೆ ತಂದಿರುವ ಲಿಂಗಧಾರಣೆ, ಲಿಂಗಪೂಜೆ, ವಿಭೂತಿ ಧಾರಣೆ, ಒಂದಿಲ್ಲೊಂದು ಕಾಯಕದೊಳಗೆ ತೊಡಗಿಕೊಂಡು, ಕೆಲಸಕ್ಕೆ ತಕ್ಕಷ್ಟು ಪ್ರತಿಫಲ ತೆಗೆದುಕೊಳ್ಳುವುದು, ಕಾಯಕದಿಂದ ಬಂದ ಪ್ರತಿಫಲದೊಳಗಿನ ಅಲ್ಪ ಭಾಗವನ್ನಾದರೂ ದಾಸೋಹಕ್ಕೆ ಅರ್ಪಿಸುವುದು ಎಲ್ಲವೂ ವೈಜ್ಞಾನಿಕತೆಯ ಅನುಸರಣೆಯ ಭಾಗವೇ ಆಗಿದೆ. ಸರ್ವರೂ ಅಷ್ಟಾವರಣ, ಷಟ್‌ಸ್ಥಲ, ಪಂಚಾಚಾರವನ್ನು ಬಿಡದೇ ಬದುಕುವುದೇ ಶರಣ ಸಂಸ್ಕೃತಿಗೆ ಶೋಭೆಯಾಗಿದೆ.

ಗುರುವಿನಲ್ಲಿ ಗುಣವನರಸಲಿಲ್ಲ,
ಲಿಂಗದಲ್ಲಿ ಲಕ್ಷಣವನರಸಲಿಲ್ಲ,
ಜಂಗಮದಲ್ಲಿ ಕುಲವನರಸಲಿಲ್ಲ,
ಪಾದೋದಕದಲ್ಲಿ ಶುದ್ಧವನರಸಲಿಲ್ಲ,
ಪ್ರಸಾದದಲ್ಲಿ ರುಚಿಯನರಸಲಿಲ್ಲ,
ಸೌರಾಷ್ಟ್ರ ಸೋಮೇಶ್ವರನ ಶರಣರಲ್ಲಿ ಮತ್ತೇನನ್ನೂ ಅರಸಲಿಲ್ಲ.

ಶರಣರು ಅಷ್ಟಾವರಣದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ; ಪಂಚ ಆಚಾರಗಳಾದ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ; ಷಟ್‌ಸ್ಥಲಗಳಾದ ಭಕ್ತಸ್ಥಲ, ಮಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ, ಐಕ್ಯಸ್ಥಲಗಳನ್ನೆಲ್ಲ ಅನುಸರಿಸಿದ ಪರಿಣಾಮದಿಂದಾಗಿ ಅವರು ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದದೊಳಗೆ ಸನ್ನಿಹಿತರಾಗಿ ಸರ್ವರೂ ಸಂಗಮದೊಳಗೆ ಬೆರೆತು ಬಾಳಿದರು. ಅವರು ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದದೊಳಗೆ ಏಕೀಕೃತಗೊಂಡಿದ್ದರಿಂದ ಜಗದ ದುರಾಸೆ, ದುಃಖಕ್ಕೆಲ್ಲ ಒಳಗಾಗಲಿಲ್ಲ. ಶರಣರು ಈ ಜಗದ ಸಿರಿಸಂಪತ್ತಿಗಿಂತಲೂ ಸರ್ವರೊಳಗೆ ಒಂದಾಗಿ ಬೆರೆತು ಬಾಳುವುದಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದರು. ಅವರು ಸರ್ವವನ್ನು, ಪರಿಶುದ್ಧ ಮನಸ್ಸಿನಿಂದ ಬದುಕಿಗೆ ಸಹಕಾರಿ ಎಂದು ಪರಿಭಾವಿಸಿ ಗುಣ, ಲಕ್ಷಣ, ಕುಲದಿಂದ ಅತೀತರಾದರು. ಮಡಿ, ಹುಡಿ, ಮುಟ್ಟಬೇಡಿ, ಹತ್ತಿರ ಬರಬೇಡಿ ಎಂಬುದಕ್ಕೂ ಅವಕಾಶವನ್ನು ಕೊಡಲಿಲ್ಲ. ಶರಣರು ತಮ್ಮ ಬದುಕಿನೊಳಗೆ ತರತಮ ಭಾವನೆಗಳು ಬರದಂತೆ ಆಚಾರ–ವಿಚಾರಗಳೆಲ್ಲವನ್ನೂ ರೂಢಿಸಿಕೊಳ್ಳುವಲ್ಲಿ ದಾಸೋಹ ಮತ್ತು ಪ್ರಸಾದ ಪ್ರಕ್ರಿಯೆಗಳು

ಪ್ರಬಲ ಶಕ್ತಿಯಾಗಿ ನಿಂತಿತು. ಅವರು ತಮ್ಮ ಕಾಯಕವನ್ನೇ ನಂಬಿದರು ಮತ್ತು ಕಾಯಕದಿಂದ ಬಂದ ಪ್ರತಿಫಲವನ್ನು ಪ್ರಸಾದಗೊಳಿಸಿ, ಸಂತೃಪ್ತತೆಗೂ, ಪ್ರಸನ್ನತೆಗೂ ದಾರಿ ಮಾಡಿಕೊಂಡರು. ನಿರ್ಭಾವ, ನಿಚ್ಚಳ, ಸುಗುಣದೊಂದಿಗೆ ಸರ್ವರ ಹಿತಸಾಧನೆಗೆ ಆಸ್ಪದ ಕೊಟ್ಟ ಶರಣರು ಪರರ ಸಂಪತ್ತು, ಸಡಗರ, ಕೀರ್ತಿ, ಅಧಿಕಾರ, ಅಂತಸ್ತು, ಪದವಿ, ಪಟ್ಟಕ್ಕೆಂದು ಆಸೆ ಪಟ್ಟವರಲ್ಲ, ಬಂದುದರಲ್ಲಿ ತೃಪ್ತಿ ಹೊಂದದೆ ಉಳಿದವರಲ್ಲ.

ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ,  
ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ,  
ಛಲ ಬೇಕು ಶರಣಂಗೆ ಪರದೈವವನೊಲ್ಲೆನೆಂಬ,  
ಛಲ ಬೇಕು ಶರಣಂಗೆ ಲಿಂಗಜಂಗಮವನೊಂದೆಂಬ,  
ಛಲ ಬೇಕು ಶರಣಂಗೆ ಪ್ರಸಾದ ದಿಟವೆಂಬ,  
ಛಲ ವಿಲ್ಲದವರ ಮೆಚ್ಚ ಕೂಡಲಸಂಗಮದೇವ.

ಶರಣರ ಕಾಯಕವನ್ನೇ ಅಚಲವಾಗಿ ನಂಬಿದ್ದರಿಂದ ಅವರ ಬದುಕು ಒಂದು ತೆರನಾದ ಸ್ಥಿರತೆಯನ್ನು ಹೊಂದಿತ್ತಲ್ಲದೆ ಮನಸ್ಸಿನೊಳಗೆ ಸಂತೃಪ್ತಿಯು ದೃಢಗೊಂಡಿತ್ತು. ಸತ್ಯಶುದ್ಧವಾದ ಕಾಯಕದೊಳಗೆ ನಿಷ್ಠೆ ಹೊಂದಿರಬೇಕೆಂಬ ಅವರ ನಿರ್ಧಾರವು ಪರಧನ, ಪರಸತಿ, ಪರದೈವದಿಂದ ಅತೀತಗೊಂಡಿತ್ತು. ಎಲ್ಲಕ್ಕೂ ಮುಖ್ಯವಾಗಿ ಜೀವನಕ್ಕೆ ಅಗತ್ಯವಿರುವ ಎಲ್ಲ ಪಡಿಪದಾರ್ಥ ಪ್ರಸಾದಗಳೆಲ್ಲವೂ ಸುನಿಶ್ಚಿತವೆಂಬ ಸತ್ಯ ಅವರೊಳಗೆ ಆವರಿಸಿಕೊಂಡಿತ್ತು. ಇದನ್ನೇ ಬಸವಣ್ಣನವರು "ಛಲ ಬೇಕು ಶರಣಂಗೆ ಪ್ರಸಾದ ದಿಟವೆಂದು" ಪರಿಭಾವಿಸಿದ್ದಾರೆ. ನಮ್ಮ ದುಡಿಮೆಗೆ ನಿಶ್ಚಿತ ಫಲ ಸಿಕ್ಕೇ ಸಿಗುತ್ತದೆಂದು ದೃಢವಾಗಿ ನಂಬಿದ್ದ ಶರಣರ ಈ ನಡೆಯು ಮಾನವನ ಬದುಕಿನಲ್ಲಿ ಇರಬೇಕಾದ ನಿಷ್ಠೆಯನ್ನು ಸೂಚಿಸುತ್ತದೆ. ಕೆಲವು ಪ್ರಚಲಿತ ವಿಚಾರಗಳಲ್ಲಿ "ನಿನ್ನ ಕೆಲಸ ನೀ ಮಾಡು, ಪ್ರತಿಫಲದ ಬಗ್ಗೆ ಚಿಂತಿಸಬೇಡ" ಎಂಬ ಧೋರಣೆ ಇದೆ. ಇದು ಶರಣರ ನಡೆ–ನುಡಿಗೆ ಪೂರಕವಲ್ಲ. ಶರಣರು ಜಗದ ಬದುಕನ್ನು ವಾಸ್ತವ ನೆಲೆಯಲ್ಲಿ ಪರಿಭಾವಿಸಿದರು ಮತ್ತು ಕಾಯಕನಿಷ್ಠೆಯುಳ್ಳ ದಾಸೋಹದೊಳಗೆ ನೆಲೆಸಿ ಬದುಕಿನ ತಾತ್ಪರ್ಯವನ್ನು ಗೆಲ್ಲಿಸಿ, ಸಂತೃಪ್ತಿಗೆ ಭಾಜನರಾದರು.

ಶರಣರು ಸದಾ ತಮ್ಮ ಕಾಯಕದ ನಡೆ ನುಡಿಯೊಳಗೆ ನಿಷ್ಠೆಯನ್ನು ಹೊಂದಿದ್ದರಿಂದ ಅವರಿಗೆ ಅರಿವೇ ಗುರುವಾಯಿತು, ಪ್ರಸಾದವೇ ಪರಿಣಾಮವಾಯಿತು. ಅವರ ಬದುಕು ಲೋಕರೂಢಿಯೊಳಗೆ ದೃಢತೆ, ವಿಶ್ವಾಸ, ಪರಿಶುದ್ಧತೆ, ಒಗ್ಗಟ್ಟು, ಏಕತೆಯನ್ನೆಲ್ಲವನ್ನೂ ತರುವ ಛಲಗಾರಿಕೆಯಿಂದಲೂ ಕೂಡಿತ್ತು. ಅವರು ಮೂಢಾಚಾರ, ಕಂದಾಚಾರಗಳಿಗೆ ಬಲಿ ಬೀಳದೆ ನಿಚ್ಚಳ ಜೀವನ ಬೆಳಕಿನೊಳಗೆ ಬದುಕಿದರು, ಬದುಕಿಸಿದರು, ಬದುಕುವ ಪರಿಸರವನ್ನು ನಿರ್ಮಿಸಿದರು. ಅವರ ಬದುಕು ಕಾಯಕಜನ್ಯ ಅನುಭವದ ಏಕತೆಯಾಗಿಯೂ ಗಮನಾರ್ಹವಾಗಿದೆ. ಅವರು ಕಾಲದ ಹಿಂದೆ, ಕಾಲದ ಮುಂದಿನ ಮನುಷ್ಯನ ಸ್ವಭಾವವನ್ನರಿತವರಾಗಿಯೂ ನಮಗೆಲ್ಲ ಮಾರ್ಗದರ್ಶಿಗಳಾಗಿದ್ದಾರೆ.

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ.
ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ.
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ
ಗುಹೇಶ್ವರಾ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು.

ಸಾಮಾನ್ಯವಾಗಿ ನಾವೆಲ್ಲರೂ ಶರಣರ ಆಶೋತ್ತರಗಳನ್ನು ಅರ್ಥೈಸಿಕೊಂಡು, ಬಂದುದೇ ಪ್ರಸಾದ, ಪಡೆದುಕೊಂಡುದೆಲ್ಲವೂ ಸಂತೃಪ್ತಿ ಎಂದು ಹೇಳುತ್ತೇವೆ. ಅಲ್ಲಮಪ್ರಭುದೇವರು ಕಾಲದ ಕಟ್ಟಳೆಯ ಕಲಿತನವನ್ನು ವಿವರಿಸದೆ ಮೌಲ್ಯಗಳಲ್ಲಾಗಿರುವ ಪರಿವರ್ತನೆಯನ್ನು ದಾಖಲಿಸಿದಂತಿದೆ. ನಾವು ಗುರುವಿನ ಸ್ಥಾನದೊಳಗಿದ್ದರೂ ಶಿಷ್ಯನ ಮನೋಗತವನ್ನರಿತು ಕಲಿಸುವ, ಕಲಿಯುವಂತೆ ಮಾಡುವ ಕಾಯಕ ನಿರ್ವಹಿಸುವ ಅನಿವಾರ್ಯತೆಯನ್ನು ಸೂಚಿಸುತ್ತದೆ. ಶಿಷ್ಯನ ಮನೋಗತಕ್ಕೆ ಕಲಿಸುವ ಪ್ರಕ್ರಿಯೆ ಕಾಯಕ ನಡೆಸಿದಾಗಲೇ ಅದು ಮಹಾಪ್ರಸಾದವಾಗುತ್ತದೆಂಬ ಅಲ್ಲಮಪ್ರಭುಗಳ ಅನುಭಾವಗಳ ಶರಣರು ಅನೂಚಾನವಾಗಿ ನಡೆಸಿಕೊಂಡ ಕಾಯಕದ ಹಿರಿಮೆಯನ್ನು ಮನನ ಮಾಡಿಕೊಡುತ್ತದೆ. ಕಾಯಕದ ಪಾವಿತ್ರ್ಯವನ್ನು ಸತತ ಎಚ್ಚರಿಕೆಯನ್ನಿಟ್ಟುಕೊಂಡು ನಿರ್ವಹಿಸುವ ಅಗತ್ಯತೆಯನ್ನು ಸ್ವಚ್ಛವಾಗಿ ಮನನ ಮಾಡಿರುವ ಅಲ್ಲಮಪ್ರಭುದೇವರು ಗುರು–ಶಿಷ್ಯರು ಒಬ್ಬನ್ನೊಬ್ಬರು ಅರಿತುಕೊಂಡು, ಕಲಿಕೆಯನ್ನು ಸಾಫಲ್ಯಗೊಳಿಸಬೇಕೆಂಬ ಅಭಿಲಾಷೆ ವ್ಯಕ್ತಪಡಿಸಿದ್ದಾರೆ. ನಮ್ಮ ಕಾಯಕಕ್ಕೆ ಚ್ಯುತಿ ಬರದಂತೆ ನಡೆದುಕೊಳ್ಳುವುದರಲ್ಲಿ ಪ್ರಸಾದದ ಮಾಹಿತಿ ಅಳವಡಿಸಿದೆ. 'ಪ್ರಸಾದ' ಪಡೆದುಕೊಂಡು ಬದುಕನ್ನು ಸರ್ವ ರೀತಿಯಿಂದಲೂ ಮಹೋನ್ನತಿಗೇರಿಸುವುದು ಸುಲಭದ ಮಾತಲ್ಲ. ನಾವು ಕೈಗೊಂಡ ಕಾರ್ಯವು ಸಾರ್ಥಕವಾಗಿ ಕೈಗೂಡಿದಾಗಲೇ ಅದು ಪ್ರಸಾದವಾಗುತ್ತದೆ. ಪರಮಾನಂದಕ್ಕೂ ಆಸರೆಯಾಗುತ್ತದೆ. ಆದರೆ ನಾವು ಎಲ್ಲದಕ್ಕೂ ಆಸೆ ಪಡುತ್ತಾ ಹೋಗಿ, ಅದು ಫಲಪ್ರದವಾಗದೆ ಹೋದಲ್ಲಿ, ನಾವು ಚಿಂತಿಸುವ ಅಗತ್ಯವಿಲ್ಲ. ಶರಣರು ನಡೆದುಕೊಂಡಂತೆ ಕಾಯಕ ಮಾಡುತ್ತಾ ಸಾಗಿದರೆ ಪ್ರತಿಫಲ, ಪ್ರಸಾದ ದಿಟವಾಗಿ ದೊರೆಯುತ್ತದೆ. ಅದಕ್ಕಾಗಿ ಆತುರಪಡದೆ ಸಂಯಮಶೀಲರಾಗಿ ಇರಬೇಕು.

ಅನಾಚಾರದ ಕಾಯಕವ ಮಾಡಿ ಪದಾರ್ಥವನೆ ಗಳಿಸಿ
ಆ ಪದಾರ್ಥವನೆ ಪಾಕವ ಮಾಡಿ, ಓಗರವ ಮಾಡುವರು,
ಆ ಓಗರವನೆ ಪ್ರಸಾದವ ಮಾಡಿ, ಆ ಪ್ರಸಾದವನೆ ಓಗರವ ಮಾಡಿ!
ಇದು ಕಾರಣ, ಕೂಡಲಸಂಗನ ಶರಣನು
ಅರ್ಪಿತವಲ್ಲದೆ ಮಾಡನು.

ಶರಣರು ತಾತ್ಕಾಲಿಕವಾಗಿ ಸರ್ವವನ್ನು ಪೂರೈಸಿಕೊಳ್ಳುವ ಧಾವಂತತೆಗೆ ಎಂದೂ ಒಳಗಾಗದವರಾಗಿದ್ದಾರೆ. ಅವರ ಬದುಕಿನೊಳಗೆ ಸ್ವವಿಮರ್ಶೆ ಸತತ ಎಚ್ಚರವಾಗಿ ಇರುವುದರಿಂದ ಅಲ್ಲಿ ತಪ್ಪಿಯೂ ಅಪಚಾರಕ್ಕೆ, ಅನಾಚಾರಕ್ಕೆ ಅವಕಾಶ ದೊರೆಯದು. ಪದೇ ಪದೇ ಶರಣರು ಸತ್ಯ ಶುದ್ಧ ಕಾಯಕವನ್ನೇ ಜೀವಾಳ ಮಾಡಿಕೊಂಡವರು. ಹೀಗಾಗಿ ಅನಾಚಾರದ ಕಾಯಕಕ್ಕೆ ಎಂದು ತಪ್ಪಿಯೂ ಮುಂದಾಗುವವರಲ್ಲ. ಇಂಥ ಅತಾಚುರ್ಯವನ್ನು ಯಾರಾದರೂ ತಪ್ಪಿ ಮಾಡುವುದು ಕಂಡುಬಂದರೆ ಅದನ್ನೆಂದೂ ಸಹಿಸರು, ಸಮರ್ಥಿಸರು. ಸತ್ಯ ಶುದ್ಧ ಕಾಯಕದ ಪ್ರಾಪ್ತಿಯೊಳಗೆ ನಾವು ನಮ್ಮ ಬದುಕಿನ ಎಲ್ಲಾ ಬೇಕು ಬೇಡಗಳನ್ನು ಪೂರೈಸಿಕೊಂಡು ಬದುಕುವುದೇ ಶರಣರು ನಮಗೆ ಬಿಟ್ಟುಹೋಗಿರುವ ಪ್ರಸಾದವಾಗಿದೆ. ಅವರ ಬದುಕಿನ ಪೂರ್ಣತ್ವ ಮತ್ತು ಪ್ರಸನ್ನತೆಯು ನಮ್ಮ ಎಲ್ಲಾ ಚಟುವಟಿಕೆಗಳನ್ನು ಪ್ರಸಾದವೆಂದು ಸ್ವೀಕರಿಸಬೇಕು.

ಆಧುನಿಕತೆಯ ಈ ಕಾಲಘಟ್ಟದೊಳಗೆ ನಾವು ಕೆಲಸದೊಳಗೆ ಅರ್ಪಣಾ ಮನೋಭಾವ ಹೊಂದಲಿ ಬಿಡಲಿ ಅಥವಾ ಯಾವುದೇ ಕೆಲಸವನ್ನು ಭ್ರಷ್ಟತೆಯೊಂದಿಗೆ ನಿರ್ವಹಿಸಲಿ ನಿಗದಿತವಾದ ಸಂಬಳ ಬಂದೇ ಬರುತ್ತದೆ. ಇಂಥ ಅಕ್ರಮ, ಅನಾಚಾರ, ಭ್ರಷ್ಟತೆಯಿಂದ ಸಂಪಾದಿಸಿದ ಹಣ ಪ್ರಸಾದಕ್ಕೆ ಎಂದೂ ಯೋಗ್ಯವಾಗದು. ಹೀಗಾಗಿ ಇಂದಿನ ದಿನಮಾನದೊಳಗೆ ಎಲ್ಲೆಲ್ಲೂ ಅಪಸ್ವರ, ಅನಾಚಾರ, ಅಪಮಾನ, ಅಪವಾದ, ಭ್ರಷ್ಟತೆ, ಅಕ್ರಮಗಳೇ ಸಾಲುಸಾಲಾಗಿ ಸುದ್ದಿಯೊಳಗಿವೆ. ಇದು ಶರಣರು ನಡೆದು ತೋರಿಸಿದ ಮಹತ್ತರ ಪ್ರಸಾದಿಕ ಪಥಕ್ಕೆ ಬಾಧಕವೂ, ಮಾರಕವೂ ಆಗಿದೆ. ಕಾರಣ ಈ ತೆರನಾದ ಬದುಕು ಮಾನವ ಕುಲಕ್ಕೆ ಶೋಭಾಯಮಾನ ಎಂದೂ ಆಗದು.

> ಪ್ರಸಾದವೆ ಅಂಗವಾದವನ ಇರವು ಎಂತುಂಟೆಂದಡೆ:
> ಒ[ಣ]ಗಿಲ್ಲದ ಕುಂಭ ಒಡೆದು ಹೋಳಾದಂತೆ
> ಮರೀಚಿಕಾಜಲವ ತುಂಬಿ ಸುರಿದ ಅಂಗದಂತಿರಬೇಕು.
> ಉರಿಯ ಮಧ್ಯದಲ್ಲಿ ನಷ್ಟವಾದ ಕರ್ಪೂರದ ಗಿರಿಯಂತಿರಬೇಕು
> ಮಹಾಪ್ರಸಾದವ ಕೊಂಡಲ್ಲಿ ಇದಿರು ಮುಯ್ಯಿಲ್ಲದಿರಬೇಕು
> ಹರವರಿ ನಷ್ಟವಾಗಿ ದಹನ ಚಂಡಿಕೇಶ್ವರಲಿಂಗದಲ್ಲಿ ಒಡಗೂಡಿರಬೇಕು.

'ಪ್ರಸಾದ' ಶರಣರು ಪರಿಪಾಲಿಸಿಕೊಂಡ ಪರಿಧಿಯೊಳಗೆ ಬದುಕಿನ ಘನತೆಯನ್ನು ಕಾಪಾಡುವ ಕಳಕಳಿ, ಕಾಳಜಿ ತುಂಬಿಕೊಂಡಿದೆ. 'ಪ್ರಸಾದ' ಈ ನಡೆ-ನುಡಿಯನ್ನು ಕಾಪಾಡಿಕೊಂಡು ಬರಬೇಕಾದರೆ ಶರಣರು ಹೇಳಿದಂತೆ ಪರಿಶುದ್ಧತೆಯುಳ್ಳ ಕರ್ತವ್ಯ, ಕಾರ್ಯಕ್ಕೆ ಪ್ರಾಶಸ್ತ್ಯ ಕೊಡಬೇಕಾಗುತ್ತದೆ.

> ದೇಹವೆಂಬ ಮನೆಯಲ್ಲಿ ಮಹಾಲಿಂಗವೆಂಬರಸು
> ಮನವೆಂಬ ಪೀಠದಲ್ಲಿ ಪೀಠದ ಮೇಲೆ ಮೂರ್ತಿಗೊಂಡಿರಲು,
> ಅಂತಃಕರಣಗಳೆಂಬ ಪರಿಚಾರಕರ ಕೈಯಿಂದ
> ಪಂಚೇಂದ್ರಿಯಗಳೆಂಬ ಪರಿಮಾಣದಲ್ಲಿ ಶಬ್ದ

ಸ್ಪರ್ಶ, ರೂಪ, ರಸ, ಗಂಧಗಳೆಂಬ ಪದಾರ್ಥಗಳನ್ನು
ಎಡೆ ಮಾಡಿಸಿಕೊಂಡು ಸವಿಯುತ್ತಿರಲು, ಆನಂದವೇ
ಮಹಾಪ್ರಸಾದವಾಗಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು
ಸದಾ ಸನ್ನಿಹಿತ ಕಾಣಿರೆ.

ಮನುಷ್ಯನು ಪ್ರಕೃತಿಯ ಮೂಲ ತತ್ತ್ವಗಳಾದ ಪಂಚಮಹಾಭೂತಗಳಿಂದ ಹೊರತಾಗಿಲ್ಲ. ಪಂಚೇಂದ್ರಿಯಗಳಿಂದ ಈ ಲೋಕವ್ಯವಹಾರವನ್ನು ನಿಭಾಯಿಸುತ್ತಿರುವ ಮನುಷ್ಯನ ಅಭಿಲಾಷೆ, ಆಕಾಂಕ್ಷೆಗಳೆಲ್ಲವೂ ಪ್ರಸಾದ ಸ್ವರೂಪವನ್ನು ಪಡೆದುಕೊಳ್ಳುವ ಅಗತ್ಯವನ್ನು ಪರಿಭಾಷಿಸಿರುವ ಶರಣರು ಸಂಯಮದಿಂದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳನ್ನು ಸವಿದು, ಆನಂದ ಪಡೆಯಬೇಕೆಂದು ಸೂಚಿಸಿದ್ದಾರೆ.

ಶರಣರು ಈ ಲೋಕವ್ಯವಹಾರವನ್ನು ಸರಳೀಕರಿಸುವ ಅನೇಕ ಸೂಕ್ತ ಪರಾಮರ್ಶೆಯನ್ನು ಸರ್ವರಿಗೂ ಯಾವುದೇ ತರತಮಕ್ಕೆ ಗುರಿಯಾಗಿಸದೆ ಪಸರಿಸಿದ್ದು ಬದುಕಿಗೆ ಸರಿಸಮಾನತೆಯ ಜೊತೆಗೆ ಸರ್ವರನ್ನು ಒಗ್ಗೂಡಿಸಿ, ಹರಿದು ಹಂಚಿಕೊಂಡು ಅನುಭವಿಸುವ ಪ್ರಸಕ್ತಿಯೆಂದು ವ್ಯಾಖ್ಯಾನಿಸಬಹುದಾಗಿದೆ. ಭಾರತೀಯರಲ್ಲಿ ಕೆಲವರು ಪಂಕ್ತಿ ಭೇದ ಮಾಡುವ ಕೆಟ್ಟ ಪದ್ಧತಿ ಇಂದಿಗೂ ಇದೆ. ಆದರೆ ಲಿಂಗಾಯತ ಸಂಸ್ಕೃತಿ ಧಾರ್ಮಿಕ ಬದುಕಿನ ನೆಲೆಯೊಳಗೆ ಅಟ್ಟ ಅಡುಗೆಯನ್ನು ಪ್ರಸಾದವನ್ನಾಗಿಸಿಕೊಂಡು ಇದ್ದವರನ್ನೆಲ್ಲ ಕರೆದುಕೊಂಡು ಉಣ್ಣುವ ರೂಢಿ ಇದೆ. ಇನ್ನು ಕೆಲ ಲಿಂಗಾಯತ ಮಠಗಳು ದಾಸೋಹಮಠಗಳಾಗಿ ಪ್ರಸಾದಕ್ಕೆ ಆದ್ಯತೆ ನೀಡಿದ್ದನ್ನು ಇಂದಿಗೂ ಕಾಣಬಹುದಾಗಿದೆ. ಕಾಯಕಕ್ಕೆ ಇರುವ ಮೌಲ್ಯ ಪ್ರಸಾದ ಕೂಡಿ ಕೈಗೊಳ್ಳುವಿಕೆಗೆ ಲಿಂಗಾಯತ ಧರ್ಮೀಯರಿಗೆ ಶರಣರು ಕೊಟ್ಟ ಪರಮಪವಿತ್ರ ಬಳುವಳಿಯಾಗಿದೆ. ಪ್ರಸಾದದ ಮಹತ್ವ ಅಗಮ್ಯವೂ ಆಗಿದೆ, ಆದರಣೀಯವೂ ಆಗಿದೆ.

ಪ್ರಸಾದವೇ ಪರಮಜ್ಞಾನ, ಪ್ರಸಾದವೇ ಪರಾಪರ,
ಪ್ರಸಾದವೇ ಪರಬ್ರಹ್ಮ, ಪ್ರಸಾದವೇ ಪರಮಾನಂದ,
ಪ್ರಸಾದವೇ ಪರಿಪೂರ್ಣ, ಸೌರಾಷ್ಟ್ರ ಸೋಮೇಶ್ವರ ಲಿಂಗದ
ಪ್ರಸನ್ನತೆಯೇ ಪ್ರಸಾದ ಇಂತಪ್ಪ ಪ್ರಸಾದದ ಮಹಾತ್ಮೆಗೆ
ನಮೋ ನಮೋ ಎನ್ನುತಿರ್ದೆನು.

ಮಾನವನ ಬದುಕು ಆಹಾರಕೇಂದ್ರಿತವೆಂಬುದು ಎಲ್ಲರೂ ಒಪ್ಪಿಕೊಂಡ ಸಂಗತಿ. ದೇಹಕ್ಕೆ ಚೈತನ್ಯ, ಶಕ್ತಿ, ಸಾಮರ್ಥ್ಯವನ್ನು ತರುವ ಆಹಾರ ಎಷ್ಟು ಸಾತ್ವಿಕವೂ ಸರಳವೂ ಇರುತ್ತದೆಯೋ ಅಷ್ಟು ಬದುಕು ಒಪ್ಪಾಗಿಯೂ, ಪ್ರಸನ್ನವಾಗಿಯೂ ಇರುತ್ತದೆ. ನಾವು ಯಾವ ರೀತಿಯ ಆಹಾರಪದ್ಧತಿ ರೂಢಿಸಿಕೊಳ್ಳುತ್ತೇವೆಯೋ ಅಂಥ ಬದುಕು ಅನುಭವಿಸುತ್ತೇವೆ. ಇಂದು ಜನರು ಆಹಾರಪದ್ಧತಿಯನ್ನು ಸರಿಯಾಗಿ ರೂಢಿಸಿಕೊಂಡಿಲ್ಲ. ಪಾಶ್ಚಾತ್ಯ ಸಂಸ್ಕೃತಿಯ ಮೋಹಕ್ಕೆ ಒಳಗಾಗಿರುವ ಹಳ್ಳಿಗರು, ಪಟ್ಟಣಿಗರು, ಎಲ್ಲಾ ಸ್ತರದ ಜನರು ತಮ್ಮ ಉಡುಗೆ–ತೊಡುಗೆಗಳನ್ನು ಹಾಗೂ ತಮ್ಮ ಆಹಾರಪದ್ಧತಿಯನ್ನು

ಬದಲಿಸಿಕೊಂಡು ತಾಮಸ, ಹೇಯ ಕೃತ್ಯಗಳಲ್ಲೂ ತೊಡಗಿಕೊಂಡಿದ್ದಾರಲ್ಲದೆ ಅನೇಕ ರೋಗಕ್ಕೂ ಒಳಗಾಗುತ್ತಿದ್ದಾರೆ. ಶ್ರಮರಹಿತ ಬದುಕಿಗೆ ಪ್ರಾಶಸ್ತ್ಯ ಕೊಡುತ್ತಾ ಅನಾರೋಗ್ಯಕ್ಕೆ ಪೂರಕವಾಗಿರುವ ಜೀವನಪದ್ಧತಿ, ಆಹಾರ–ವಿಹಾರ ಪದ್ಧತಿಯನ್ನು ಭಾರತೀಯರು ರೂಢಿಸಿಕೊಂಡು ಪ್ರಸಾದವಾಗಿರಬೇಕಾದ ಆಹಾರವನ್ನು ತಯಾರಿಸುವಲ್ಲೂ, ಬಳಸುವಲ್ಲಿ ದಿವ್ಯ ನಿರ್ಲಕ್ಷ್ಯ, ಅಜ್ಞಾನವನ್ನು ಪ್ರದರ್ಶಿಸುತ್ತಿದ್ದಾರೆ. ಹಿತಮಿತವುಳ್ಳ ಮತ್ತು ಸಾತ್ವಿಕ ಆಹಾರ ಪದ್ಧತಿಯು ಮಾನವನ ಬದುಕನ್ನು ಉನ್ನತ ಆಚಾರ–ವಿಚಾರ, ಕಾರ್ಯ, ಕಾರ್ಯಚಟುವಟಿಕೆಯೊಂದಿಗೆ ನಿರೋಗಿ, ರೋಗಮುಕ್ತ, ತಾಮಸಮುಕ್ತಗೊಳಿಸುವ ಶಕ್ತಿಯೂ ಆಗಿದೆ. ಶರಣರು ಅಂದು ಅನುಸರಿಸಿಕೊಂಡು ಸ್ವಾವಲಂಬಿ, ಸ್ವಾಭಿಮಾನ ಮತ್ತು ಸರ್ವರ ಹಿತ ಸಾಧನೆಗೆ ಅನುವು ಮಾಡಿಕೊಂಡ ಪ್ರಸಾದ, ಆಹಾರಪದ್ಧತಿಯನ್ನು ಸ್ಥಾಪಿಸಿಕೊಂಡು ಬದುಕುವತ್ತ ನಾವಿಂದು ಲಕ್ಷ್ಯ ಕೊಡಬೇಕಿದೆ. ಮಾನವನ ಬದುಕನ್ನು ಸಹ್ಯ, ಸಂತೋಷ, ಸುಮಧುರ, ಸಭ್ಯಗೊಳಿಸುವ ಸಂಕಲ್ಪವನ್ನು ಸಾಕಾರಗೊಳಿಸುವ ಶರಣರ 'ಪ್ರಸಾದ' ಮತ್ತು ಅಷ್ಟಾವರಣವನ್ನು ಪೋಷಿಸಿಕೊಂಡು ಬಳಸುವತ್ತ ಆದ್ಯ ಗಮನ ಹರಿಸಿದಷ್ಟೂ ಈ ಬದುಕು ಪ್ರಸನ್ನತೆಯಿಂದ ಕೂಡಿರುತ್ತದೆ. ಸಹಜೀವನ, ಸಹಬಾಳ್ವೆಗೂ ಸರ್ವರನ್ನೂ ಒಗ್ಗೂಡಿಸುತ್ತದೆಂಬುದನ್ನು ಅರಿತು ನಡೆದುಕೊಳ್ಳಬೇಕಿದೆ. ವಿದೇಶಿ ಅಡುಗೆ ತೊಡುಗೆಯತ್ತ ಮೋಹಿತರಾಗಿ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹಾಳುಮಾಡಿಕೊಳ್ಳುವ ಅನಾಹುತದಿಂದ ನಾವಿಂದು ಪಾರಾಗಬೇಕಿದೆ.

> ಒಲ್ಲೆನೆಂಬುದು ವೈರಾಗ್ಯ; ಒಲಿವೆನೆಂಬುದು ಕಾಯಕಗುಣ.
> ಆವ ಪದಾರ್ಥವಾದರೇನು? ತಾನಿದ್ದೆಡೆಗೆ ಬಂದುದ
> ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ.
> ಕೂಡಲಸಂಗಮದೇವನನೊಲಿಸಬಂದ
> ಪ್ರಸಾದಕಾಯವ ಕೆಡಿಸಲಾಗದು.

ಮಾನವನ ಬದುಕು ಸರ್ವಸಂಪನ್ನಗೊಂಡು, ಸಂತೃಪ್ತಿ, ತೃಪ್ತಿ, ನಿದ್ರೆ, ಪ್ರಶಾಂತಿ, ನೆಮ್ಮದಿ, ಪರಮಾನಂದ, ಪರಿಪೂರ್ಣತೆ ಪಡೆದುಕೊಳ್ಳುವ ಸರಳ ಮಾರ್ಗದೊಳಗೆ ಕಟ್ಟುನಿಟ್ಟಿನ ಆಹಾರಪದ್ಧತಿಯನ್ನು ರೂಢಿಗತ ಮಾಡಿಕೊಂಡಿರಬೇಕೆಂಬ ಶರಣರ ಅನುಭಾವವನ್ನು ಪರಿಪಾಲಿಸುವ ಅಗತ್ಯತೆ ಇಂದಿನದಾಗಿದೆ. ಈ ಬದುಕು ಇಂದು ಅಲ್ಲಸಲ್ಲದ ಕೃತ್ಯಗಳನ್ನು ಎಸಗುತ್ತಾ ಕ್ರೌರ್ಯದ ಜೊತೆಗೆ ಭಯೋತ್ಪಾದನೆಗೆ ಅಣಿಗೊಳ್ಳುವುದನ್ನು ತಪ್ಪಿಸಬೇಕಾದರೆ ಪ್ರಸಾದಕಾಯವನ್ನು ಕೆಡಿಸದಂತಹ ಆಹಾರವನ್ನು ಅಟ್ಟು ಬಳಸುವತ್ತ ದಿಟ್ಟ ನಿಲುವು ತಾಳಬೇಕಿದೆ. ಕಲ್ಯಾಣದ ಶರಣರು ಸತ್ಯ ಶುದ್ಧ ಕಾಯಕದಿಂದ ಯೋಗ್ಯವಾದ ಗಳಿಕೆ ಮಾಡಿ, ಗಳಿಕೆಯನ್ನು ದಾಸೋಹಕ್ಕೂ ಬಳಸಿ, ಪ್ರಸಾದಕಾಯ ಕೆಡದಂತಹ ಸಾತ್ವಿಕತೆಯುಳ್ಳ ಆಹಾರಪದ್ಧತಿ ರೂಢಿಸಿಕೊಂಡು ಮಾನವೀಯ ಬದುಕಿಗೆ ಘನತೆ, ಗೌರವ, ಸಮಾನತೆ, ಸಹಬಾಳ್ವೆ ತಂದುಕೊಟ್ಟದ್ದು ಶಿಮನನ ಮಾಡಿಕೊಂಡು, ಪರಿಪೂರ್ಣ, ಪ್ರಸನ್ನತೆಗೆ ಭಾಜನರಾಗಬೇಕಿದೆ. ❑

# ಗಾನಯೋಗಿ ಪಂಚಾಕ್ಷರಿ ಗವಾಯಿ

**ಡಾ. ರಮಾ ವಿ. ಬೆಣ್ಣೂರ್**

ಹುಬ್ಬಳ್ಳಿಯಿಂದ ಸುಮಾರು 80 ಕಿ.ಮೀ. ದೂರದಲ್ಲಿರುವ ಇತಿಹಾಸಪ್ರಸಿದ್ಧವಾದ ಒಂದು ಪಟ್ಟಣ ಹಾನಗಲ್. ಹಿಂದೆ ಇದಕ್ಕೆ ವಿರಾಟನಗರ ಎಂದೂ ಹೆಸರಿತ್ತು. ಪಾಂಡವರು ತಮ್ಮ ವನವಾಸದ ಹದಿಮೂರನೆಯ ವರುಷವನ್ನು ಇಲ್ಲಿ ಕಳೆದರು ಎಂಬುದು ಪ್ರತೀತಿ. ಇಲ್ಲಿನ ಮಧ್ಯಕಾಲೀನ ಶಾಸನಗಳೂ ಸಹ ಇದನ್ನು ವಿರಾಟನಗರಿ ಎಂದು ಉಲ್ಲೇಖಿಸಿವೆ. ಕದಂಬರು ಈ ಹಾನಗಲ್ಲನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡಿದ್ದರೆಂದು ತಿಳಿದುಬರುತ್ತದೆ. 11ನೆಯ ಶತಮಾನದಲ್ಲಿ ಅವರು ಇಲ್ಲಿ ಜೈನ ದೇವಾಲಯಗಳನ್ನು ಕಟ್ಟಿಸಿದ್ದರಂತೆ. ಮುಂದೆ 1001ರಲ್ಲಿ ಹೊಯ್ಸಳರ ಆಳ್ವಿಕೆಗೆ ಒಳಪಟ್ಟ ಈ ಊರು ನಂತರ ಶಿಲಾಹಾರದ ಮಲ್ಲಿಕಾರ್ಜುನ, ಕಲ್ಯಾಣಿ ಚಾಲುಕ್ಯರು, ಮರಾಠರು ಮತ್ತು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ಕಲ್ಯಾಣದ ಚಾಲುಕ್ಯರಿಂದ 12ನೆಯ ಶತಮಾನದಲ್ಲಿ ನಿರ್ಮಿತವಾಗಿರುವ ಇಲ್ಲಿನ ಶ್ರೀ ತಾರಕೇಶ್ವರ ದೇವಾಲಯ ಪ್ರಸಿದ್ಧವಾದುದು. ಇಲ್ಲಿನ ಶಿವಭಕ್ತರಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಶ್ರೀ ತಾರಕೇಶ್ವರನ ಸನ್ನಿಧಿಯಲ್ಲಿ ಹಲವಾರು ಜನರು ತಮ್ಮ ಸಾರ್ಥಕ ಬದುಕನ್ನು ಕಳೆದಿದ್ದಾರೆ. ಕಾಯಾ ವಾಚಾ ಮನಸಾ ತಮ್ಮ ಶುದ್ಧ ಭಕ್ತಿಯಿಂದ, ವೈರಾಗ್ಯದಿಂದ, ನಿರ್ಮಲ ಅಂತಃಕರಣದಿಂದ ಸಮಷ್ಠಿ ಹಿತದ ಜಪವನ್ನು ಮಾಡುತ್ತ ತಮ್ಮ ಬದುಕನ್ನು ಶಿವನಿಗೆ ಅರ್ಪಿಸಿದ ಮಹಾನುಭಾವರಲ್ಲಿ ಎದ್ದು ತೋರುವ ಹೆಸರೆಂದರೆ ಹಾನಗಲ್ಲ ಕುಮಾರ ಶಿವಯೋಗಿ ಸ್ವಾಮಿಗಳವರದು. ತಾವು ಕಂಡುಕೊಂಡ ದಿವ್ಯ ಬೆಳಕಿನ ಹಾದಿಯಲ್ಲಿ ಇತರರೂ ನಡೆಯುವಂತೆ ಪ್ರೇರೇಪಿಸಿ, ಪ್ರೋತ್ಸಾಹಿಸಿ, ಎಡೆಬಿಡದೆ ಮಾರ್ಗದರ್ಶಕರಾಗಿ ಬಾಳಿದ ದಿವ್ಯಚೇತನ ಅವರದು.

ಈ ಕಥೆಯ ಕೇಂದ್ರವ್ಯಕ್ತಿ ಪಂ. ಪಂಚಾಕ್ಷರಿ ಗವಾಯಿಗಳ ಬದುಕಿನ ಅವಲೋಕನ ಎಂದರೆ, ಒಂದರ್ಥದಲ್ಲಿ ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳ ಪುಣ್ಯಸ್ಮರಣೆಯೇ ಎಂದರೆ ಅತಿಶಯೋಕ್ತಿಯಲ್ಲ. ಒಬ್ಬ ವಿರಕ್ತ ಸನ್ಯಾಸಿ, ಲಿಂಗಾನುಸಂಧಾನದಿಂದ ಭಾವಶುದ್ಧಿ ಮಾಡಿಕೊಂಡು, ಸದಾಚಾರದಿಂದ ತನುಶುದ್ಧಿ ಮಾಡಿಕೊಂಡು ಹೇಗೆ ಸಮಾಜಮುಖಿಯಾಗಿ ಬದುಕನ್ನು ಸವೆಸುತ್ತಾ ಅತ್ಯಂತ ಪ್ರೀತಿಯಿಂದ ಶಿವನಿಗೆ ಹತ್ತಿರವಾಗಬಹುದು ಎನ್ನುವುದಕ್ಕೆ ಅವರು ಒಂದು ದೊಡ್ಡ ನಿದರ್ಶನವಾಗಿದ್ದರು.

ನೂರಾರು ಜನ ಶಿಷ್ಯರನ್ನು ಸದ್ಭಕ್ತಿಯ, ವಿರಕ್ತಿಯ ಹಾದಿಯಲ್ಲಿ ನಡೆಯುವಂತೆ ಮಾಡಿದುದಲ್ಲದೆ ತಾವೇ ಸ್ವತಃ ಇಬ್ಬರು ಅಂಧ ಬಾಲಕರ ಇಂಪಾದ ಸಂಗೀತಕ್ಕೆ ಮನಸೋತು, ಅವರಿಂದ ಲೋಕಕಲ್ಯಾಣ ಆಗಲಿದೆ, ಸಂಗೀತ ಕ್ಷೇತ್ರಕ್ಕೆ ಅವರ ಕೊಡುಗೆ ಬಹಳ ಮಹತ್ವದ್ದಾಗಲಿದೆ ಎಂಬುದನ್ನು ತಮ್ಮ ದಿವ್ಯದೃಷ್ಟಿಯಿಂದ ಗುರುತಿಸಿ, ಅವರನ್ನು ತಮ್ಮ ಆಶ್ರಯಕ್ಕೆ ತೆಗೆದುಕೊಂಡುದಲ್ಲದೆ, ಅವರ ಬದುಕಿನುದ್ದಕ್ಕೂ ಸದಾಚಾರದ, ಸನ್ಮಾರ್ಗದ ಬೆನ್ನೆಲುಬಾಗಿ ನಿಂತರು. ಅವರ ಪ್ರೀತಿ, ಕಾರುಣ್ಯಗಳು ಎಷ್ಟು ಮಹತ್ತಾದುದಾಗಿತ್ತು ಎಂದರೆ, ಅವರ ಮಾತು ಆ ಬಾಲಕರ ಪಾಲಿಗೆ ವೇದವಾಕ್ಯವಾಗಿತ್ತು. ಅದನ್ನು ತಲೆಯ ಮೇಲೆ ಹೊತ್ತು ನಡೆಸಿಕೊಡುವ ಶ್ರದ್ಧೆ, ಭಕ್ತಿ ಅವರಿಗೆ. ಅಷ್ಟು ಮಟ್ಟಿನ ಪ್ರಭಾವ ಅವರದು.

ಹಿಂದೂಸ್ತಾನಿ ಸಂಗೀತವು ಕರ್ನಾಟಕದಲ್ಲಿ ಅಷ್ಟಾಗಿ ಇನ್ನೂ ಪ್ರಚಾರದಲ್ಲಿ ಇರದಿದ್ದ ಕಾಲದಲ್ಲಿ ಅದರ ಇಂಪಿಗೆ ಮನಸೋತು, ಅದನ್ನು ಕಲಿತು, ಅದು ಕರ್ನಾಟಕದಲ್ಲಿ ಸ್ಥಿರವಾಗಿ ನೆಲೆ ನಿಲ್ಲುವಂತೆ ಮಾಡಿದ ಮಹಾನ್ ಕಾರ್ಯಕ್ಕೆ ತಮ್ಮ ಇಡೀ ಬದುಕನ್ನು ಮೀಸಲಾಗಿರಿಸಿ, ಗುರುಗಳ ಆಜ್ಞೆಯನ್ನು ಶಿರಸಾವಹಿಸಿದ ಮಹಾನ್ ಚೇತನ ಪ. ಪಂಚಾಕ್ಷರಿ ಗವಾಯಿಗಳವರದು ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ತಮ್ಮ ಹೊರಗಣ್ಣು ಇಲ್ಲದ ಕೊರತೆಯನ್ನೇ ತಮ್ಮ ಶಕ್ತಿಯನ್ನಾಗಿಸಿಕೊಂಡು ಒಳಗಣ್ಣಿನ ದಿವ್ಯದೃಷ್ಟಿಯಿಂದ, ಕಣ್ಣಿದ್ದವರು ಯಾರೂ ಮಾಡಲಾಗದಂತಹ ಮಹಾನ್ ಕಾರ್ಯವನ್ನು, ಸಂಗೀತ ಸೇವೆಯನ್ನು ಮಾಡಿ, ಅದು ನಿರಂತರವಾಗಿ ನಡೆದುಕೊಂಡು ಹೋಗುವ ಹಾಗೆ ಅದಕ್ಕೊಂದು ಭದ್ರ ಬುನಾದಿಯನ್ನು ಹಾಕಿಕೊಟ್ಟ ಪುಣ್ಯಜೀವಿ ಅವರು. ತಾವು ಬದುಕಿನುದ್ದಕ್ಕೂ ಕಲ್ಲುಮುಳ್ಳಿನ ಹಾದಿಯನ್ನೇ ತುಳಿದರೂ ತಮ್ಮನ್ನು ನಂಬಿ ಬಂದಿದ್ದ ಶಿಷ್ಯರನ್ನು ಎಂದಿಗೂ ಕೈಬಿಡದೆ, ವಿದ್ಯಾರ್ಜನೆ ಮತ್ತು ಅಧ್ಯಾಪನಗಳಲ್ಲದೆ ಕೃತಿರಚನೆ, ಆಶ್ರಮ ಸ್ಥಾಪನೆ, ನಾಟಕ, ಸಂಗೀತಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ನಿಸ್ವಾರ್ಥ ಬದುಕಿಗೆ ಉತ್ತಮ ಮಾದರಿಯಾಗಿ ನಿಂತ ಧೀಮಂತ ವ್ಯಕ್ತಿತ್ವ ಅವರದು. ಜಾತಿ–ಮತ–ಪಂಥ ಎಂಬ ಎಣಿಕೆಯನ್ನೆಂದೂ ಮಾಡದೆ ಎಲ್ಲ ಅನಾಥರಿಗೆ, ಅಂಧ ಮಕ್ಕಳಿಗೆ, ಕಡುಬಡವರಿಗೆ ಊಟ, ವಸತಿ, ಬಟ್ಟೆಯನ್ನಲ್ಲದೆ ವಿದ್ಯೆಯನ್ನೂ ನೀಡಿ, ಅವರ ಬದುಕಿಗೆ ದಾರಿದೀಪವಾದ ಮಹಾನ್ ಚೇತನ ಪಂಚಾಕ್ಷರಿ ಗವಾಯಿಗಳದು. ಉತ್ತರ ಭಾರತದಲ್ಲಿ ಭಾತ್ಖಂಡೆ, ವಿಷ್ಣು ದಿಗಂಬರ ಪಲೂಸ್ಕರ ಮುಂತಾದ ಮಹನೀಯರು ಸಂಗೀತ ಕ್ಷೇತ್ರದಲ್ಲಿ ಮಾಡಿದ ಮಹತ್ಕಾರ್ಯವನ್ನು ದಕ್ಷಿಣದಲ್ಲಿ ಪಂಚಾಕ್ಷರಿ ಗವಾಯಿಗಳು ಮಾಡಿದರೆಂದರೆ ಅದರಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆ ಇಲ್ಲ.

ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲಿ ಕಾಡಶೆಟ್ಟಿಹಳ್ಳಿ ಎಂಬುದು ಒಂದು ಸಣ್ಣ ಗ್ರಾಮ. ಅಲ್ಲಿ ಸಾಕಷ್ಟು ಶಿವಭಕ್ತರ ಮನೆಗಳಿದ್ದವು. ಅಲ್ಲಿ ಚರಂತಿಮಠದ ಗುರುಪಾದಯ್ಯ

ಮತ್ತು ನೀಲಮ್ಮ ಎಂಬ ಶರಣ ದಂಪತಿಗಳು ಸದಾಚಾರದಿಂದ, ಶಿವಚಿಂತನೆ, ಸ್ತೋತ್ರದಲ್ಲೇ ಆನಂದವನ್ನು ಅರಸುತ್ತಿದ್ದ ನಿಷ್ಠಾವಂತರು. ತನ್ನ ಭಕ್ತರನ್ನು ಪರೀಕ್ಷಿಸುವುದೆಂದರೆ ಆ ಶಿವನಿಗೆ ಬಹಳ ಪ್ರೀತಿ ಎಂದು ಕಾಣುತ್ತದೆ; ಅವರ ಮೊದಲನೆಯ ಮಗ ಗುರುಬಸವ ಅಂಧನಾಗಿಯೇ ಹುಟ್ಟಿದ. ಯಾವ ತಂದೆತಾಯಿಯರಿಗೆ ತಾನೆ ದೃಷ್ಟಿಹೀನ ಮಗನನ್ನು ನೋಡಿ ದುಃಖವಾಗದೇ ಇರದು! ಇತರ ಮಕ್ಕಳು ಆನಂದದಿಂದ ಆಟವಾಡುವುದನ್ನು ನೋಡಿದಾಗ ಸಹಜವಾಗಿಯೇ ಅವರ ದುಃಖ ಧುಮ್ಮಿಕ್ಕುವುದು. ಆದರೂ 'ಇದೂ ಶಿವನ ಪ್ರಸಾದ' ಎಂದೇ ಭಾವಿಸಿ ತಮ್ಮ ದುಃಖವನ್ನು ಅಡಗಿಸಿಕೊಂಡು, ಮಗುವಿನ ಕಲ್ಯಾಣಕ್ಕಾಗಿ ನಿತ್ಯವೂ ಈಶ್ವರನಲ್ಲಿ ಪ್ರಾರ್ಥಿಸುತ್ತಿದ್ದರು. ನೀಲಮ್ಮ ಮತ್ತೆ ಗರ್ಭ ಧರಿಸಿದಾಗ ಸಹಜವಾಗಿಯೇ ಆ ಮಾತೃಹೃದಯ ಎರಡನೆಯ ಮಗುವಾದರೂ ದೃಷ್ಟಿಯುಳ್ಳದ್ದಾಗಲಿ ಎಂದು ಭಗವಂತನಲ್ಲಿ ಮೊರೆ ಇಟ್ಟಿತು. ಮತ್ತೊಂದು ಆರೋಗ್ಯಪೂರ್ಣ ಗಂಡುಮಗುವಿಗೆ ಜನ್ಮವಿತ್ತ ನೀಲಮ್ಮನಿಗೆ ಮತ್ತೆ ಆಕಾಶವೇ ಕಳಚಿ ಬಿದ್ದಂತಹ ಅನುಭವ (1892). ಆ ಮಗುವೂ ದೃಷ್ಟಿಹೀನ ಎಂದು ತಿಳಿದ ಆ ತಾಯಿ ಮೂರ್ಛೆಹೋದಳು. ಅರಿವು ಬಂದ ಮೇಲೆ ಆ ಕೂಸನ್ನು ಎದೆಗಪ್ಪಿ ಹಿಡಿದು ಭೋರೆಂದು ಅಳುತ್ತಿದ್ದ ಆ ತಾಯಿಯ ಆಘಾತಕ್ಕೆ ಸಮಾಧಾನ ಸಿಗುವುದಾದರೂ ಹೇಗೆ? 'ಇದೆಲ್ಲ ಶಿವನ ಆಟ. ಆತ ಕೊಟ್ಟಿದ್ದನ್ನೇ ಪ್ರಸಾದ ಎಂದು ಸ್ವೀಕರಿಸುವುದೊಂದೇ ಉಳಿದ ದಾರಿ' ಎಂದು ತನ್ನ ದುಃಖವನ್ನು ನುಂಗಿಕೊಂಡು, ಮಡದಿಗೆ ಸಮಾಧಾನ ಹೇಳಿದ ಗುರುಪಾದಯ್ಯ. ಇಡೀ ಹಳ್ಳಿಯೇ ಈ ದಂಪತಿಗಳ ದಾರುಣ ಸ್ಥಿತಿಗೆ ಮಮ್ಮಲ ಮರುಗಿತು.

ಹಿರಿಯ ಗುರುಬಸವ ಮತ್ತು ಕಿರಿಯ ಗದಿಗೆಯ್ಯ ಇವರುಗಳಿಗೆ ಕಣ್ಣು ಇಲ್ಲವಾದರೂ ಅತ್ಯಂತ ಮಧುರ ಕಂಠವನ್ನು ದೇವರು ದಯಪಾಲಿಸಿದ್ದ. ಒಮ್ಮೆ ಕೇಳಿದ ತತ್ವಪದಗಳನ್ನು, ವಚನಗಳನ್ನು, ಭಜನೆಯ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವುದು ಅವರಿಬ್ಬರಿಗೂ ಸಹಜವಾಗಿ ಒಲಿದುಬಂದ ಕಲೆಯಾಗಿತ್ತು. ಬೆಳೆಯುತ್ತ ಹೋದಂತೆಲ್ಲ ಹಲವು ವಾದ್ಯಗಳನ್ನು ನುಡಿಸುವುದರಲ್ಲೂ ಆಸಕ್ತಿ ತೋರಿದ ಬಾಲಕರ ಭವಿಷ್ಯದ ಬಗ್ಗೆ ಸದಾ ಚಿಂತಿಸುತ್ತಿದ್ದ ಗುರುಪಾದಯ್ಯನಿಗೆ ಇವರಿಬ್ಬರ ಭವಿಷ್ಯ ಸಂಗೀತದಲ್ಲಿಯೇ ಇರಬಹುದು ಎಂದು ಅನಿಸಿದುದರಲ್ಲಿ ಅಚ್ಚರಿ ಏನಿಲ್ಲ. ಆ ಹಳ್ಳಿಯ ಜನರೆಲ್ಲರೂ ಈ ಅಂಧ ಬಾಲಕರ ಗಾಯನದ ಮೋಡಿಗೆ, ದನಿಯ ಇಂಪಿಗೆ ಮನಸೋತವರೇ. ಇಬ್ಬರೂ ಸದ್ಗುಣಿಗಳು. ಹೀಗಾಗಿ ಕಾಡಶೆಟ್ಟಿಹಳ್ಳಿಯಲ್ಲದೆ ಸುತ್ತಮುತ್ತಲಿನ ಹಲವಾರು ಹಳ್ಳಿಗಳಲ್ಲಿ ಯಾವುದೇ ದೊಡ್ಡಾಟ, ಭಜನಾ ಮೇಳ, ಜಾತ್ರೆ, ಉತ್ಸವವಿರಲಿ, ಅಲ್ಲಿ ಈ ಬಾಲಕರಿಗೆ ಹಾಡಲು ಆಹ್ವಾನ ಇದ್ದೇ ಇರುತ್ತಿತ್ತು. ಯಾರೇ ಕರೆದರೂ ವಿನಯದಿಂದ ಹೋಗಿ ಹಾಡಿ ಬರುತ್ತಿದ್ದ ಈ ಮಕ್ಕಳ ಕೀರ್ತಿ ಹರಡಲು ತಡವಾಗಲಿಲ್ಲ.

ದೇವರು ಒಂದು ಅಂಗವನ್ನು ಊನ ಮಾಡಿದರೆ, ಮತ್ತೊಂದನ್ನು ಅತಿ ತೀಕ್ಷ್ಣವನ್ನಾಗಿ

ಮಾಡಿರುತ್ತಾನೆ ಎಂಬುದು ಅನುಭವವೇದ್ಯವಾದ ಮಾತು. ಈ ಬಾಲಕರೂ ಅಂತೆಯೇ. ತಮ್ಮ ಅದ್ಭುತ ಗ್ರಹಣಶಕ್ತಿಯಿಂದ ಅವರು ಇತರ ಯಾರೇ ವಾದ್ಯ ನುಡಿಸುವವರು ಹಳ್ಳಿಗೆ ಬಂದರೆ, ಅದನ್ನು ಕೇಳಿ, ಸ್ಪರ್ಶಜ್ಞಾನದ ಮೂಲಕ ಆಗಲೇ, ಅದರಂತೆಯೇ ನುಡಿಸಿ ತೋರಿಸುತ್ತಿದ್ದರು. ಇವರ ಕುಶಾಗ್ರಮತಿಗೆ ಎಲ್ಲರೂ ನಿಬ್ಬೆರಗಾದವರೇ. ಆದರೂ ಅದರಿಂದೇನೂ ಹೆತ್ತ ಕರುಳಿನ ದುಃಖ ಶಮನವಾಗುವಂತಿರಲಿಲ್ಲ. 'ನೀನೊಲಿದರೆ ಕೊರಡು ಕೊನರುವುದಯ್ಯ' ಎಂದು ಶಿವನನ್ನೇ ನಂಬಿ, ಅವನೇ ದಾರಿ ತೋರಿಸಬೇಕೆಂದು ಸದಾ ಅವರ ತಂದೆ ತಾಯಿಗಳು ಪ್ರಾರ್ಥಿಸುತ್ತಿದ್ದರು.

ಹೀಗಿರುವಾಗ ಒಮ್ಮೆ ಹಾನಗಲ್ಲ ಪೂಜ್ಯ ಶ್ರೀ ಕುಮಾರ ಸ್ವಾಮಿಗಳು ಕಾಡಶೆಟ್ಟಿಹಳ್ಳಿಯಲ್ಲಿ ನಡೆಯುತ್ತಿದ್ದ ಶ್ರೀ ಹಕ್ಕಲ ಬಸವೇಶ್ವರ ಜಾತ್ರೆಗೆ ದಯಮಾಡಿಸಿದರು. ಅಲ್ಲಿಯ ಜನ ಬಲು ಆನಂದದಿಂದ ಅವರನ್ನು ಬರಮಾಡಿಕೊಂಡು ಅವರ ಪ್ರವಚನವನ್ನು ಏರ್ಪಡಿಸಿದರು. ಆ ಕಾರ್ಯಕ್ರಮಕ್ಕೆ ಮೊದಲು ಗುರುಬಸವ ಮತ್ತು ಗದಿಗೆಯ್ಯನವರಿಂದ ಪ್ರಾರ್ಥನೆ. ಶ್ರೀಗಳವರ ಪ್ರವಚನ ಕೇಳಲು ನೆರೆದಿದ್ದ ಅಸಂಖ್ಯಾತ ಭಕ್ತರ ಜನಸಾಗರ. ಶ್ರೀ ಕುಮಾರ ಸ್ವಾಮಿಗಳಿಗೆ ನಮಸ್ಕರಿಸಿದ ಬಾಲಕರು ಹಾಡಲು ಪ್ರಾರಂಭಿಸಿದರು. ಒಮ್ಮಿಂದೊಮ್ಮೆಲೆ ಸಭೆಯಲ್ಲಿ ಗದ್ದಲ ನಿಂತಿತು; ಮೌನ ನೆಲೆಸಿತು. ಅಲ್ಲಿ ನೆರೆದಿದ್ದ ಎಲ್ಲರ ಕಿವಿಗಳೂ ನೆಟ್ಟಗಾದುವು. ಮಂತ್ರಮುಗ್ಧರಾಗಿ ಪ್ರಾರ್ಥನಾಗೀತೆಯನ್ನು ಕೇಳುತ್ತಿದ್ದ ಜನಸಾಗರವನ್ನು ಕಂಡು ಸ್ವಾಮಿಗಳಿಗೂ ಅಚ್ಚರಿ. ಮಕ್ಕಳ ಕಂಠಸಿರಿಯನ್ನು ಅವರೂ ಮೆಚ್ಚಿ ತಲೆದೂಗಿದರು. ಇದ್ಯಾವುದರ ಪರಿವೆಯಿಲ್ಲದೆ ಮಕ್ಕಳು ಭಕ್ತಿಯಿಂದ ಹಾಡುತ್ತಲೇ ಇದ್ದರು. ಕಣ್ಣುಮುಚ್ಚಿ ಪ್ರಾರ್ಥನೆಯನ್ನು ಆಲಿಸುತ್ತಿದ್ದ ಶಿವಯೋಗಿಗಳ ಅಂತಶ್ಚಕ್ಷುವಿಗೆ ಏನು ಕಾಣಿಸಿತೋ, ಹಾಡು ಮುಗಿಸಿ ಬಂದು ತಮಗೆ ನಮಸ್ಕರಿಸಿದ ಮಕ್ಕಳನ್ನು ಮನದುಂಬಿ ಆಶೀರ್ವದಿಸಿದರು. ಅಲ್ಲಿಯೇ ಇದ್ದ ಅವರ ತಂದೆಯನ್ನು ಹತ್ತಿರ ಕರೆದು ಮಾತನಾಡಿಸಿದರು. "ಗಾನದೇವತೆಯ ಮಕ್ಕಳಾದ ಇವರು ಸಂಗೀತದಲ್ಲಿ ಮಹಾನ್ ಪಂಡಿತರಾಗುತ್ತಾರೆ. ನಿಮ್ಮ ಈ ಮಕ್ಕಳನ್ನು ನಮಗೆ ಒಪ್ಪಿಸುತ್ತೀರ?" ಎಂದಾಗ ಆ ತಂದೆಯ ಕಣ್ಣಿನಿಂದ ಆನಂದಬಾಷ್ಪ ಸುರಿಯತೊಡಗಿತು. ತನ್ನ ಕುರುಡು ಮಕ್ಕಳಿಗೆ ಮುಂದೆ ಭಿಕ್ಷಾಟನೆಯೇ ಗತಿಯೇನೋ ಎಂದು ಆತಂಕದಿಂದಿದ್ದ ಆತನಿಗೆ ಶ್ರೀಗಳವರ ಮಾತಿನಿಂದ ಮಹದಾನಂದವಾಯಿತು. ಇಂತಹ ಮಹಾನ್ ತಪಸ್ವಿಗಳ ಆಶ್ರಯ ದೊರಕುವುದು ತನ್ನ ಹಾಗೂ ತನ್ನ ಮಕ್ಕಳ ಸೌಭಾಗ್ಯವೆಂದೇ ಎಣಿಸಿದ. ಅವರ ಮಾತನ್ನು ಶಿರಸಾವಹಿಸಿ ಮಕ್ಕಳನ್ನು ಅವರ ಆಶ್ರಯಕ್ಕೆ ಬಿಡಲು ಸಮ್ಮತಿಸಿದ. ಈ ವಿಷಯವನ್ನು ಪತ್ನಿಗೆ ತಿಳಿಸಲು ಮನೆಗೆ ಹೊರಟ. ಇದಕ್ಕೆ ಆ ಮಾತೃಹೃದಯ ಸುಲಭವಾಗಿ ಒಪ್ಪುವುದೇ! ಕುರುಡರಾದರೇನು, ಅವು ಆಕೆಯ ಕರುಳ ಕುಡಿಗಳಷ್ಟೆ. ಕಣ್ಣಿಲ್ಲದ ಮಕ್ಕಳು ತನ್ನನ್ನು ಬಿಟ್ಟು ದೂರ ಇರಲು ಹೇಗೆ ಸಾಧ್ಯ ಎಂಬುದು ಆಕೆಯ

ಅಳಲು. ಆಕೆಯನ್ನು ಒಪ್ಪಿಸಲು ಊರ ಹಿರಿಯರೆಲ್ಲ ಮುಂದೆ ಬರಬೇಕಾಯಿತು. ಮಕ್ಕಳ ಭವಿಷ್ಯದ ಸಲುವಾಗಿ ಆಕೆ ಒಪ್ಪಲೇಬೇಕಾಯಿತು. ಇಲ್ಲವಾದಲ್ಲಿ ಮುಂದೆ ಅವರ ಭವಿಷ್ಯವೇನು? ಗುರುಗಳು ತಾವಾಗಿಯೇ ಮಕ್ಕಳ ಜವಾಬ್ದಾರಿಯನ್ನು ಹೊರಲು ಸಿದ್ಧವಾಗಿರುವುದು ಅವರ ಪುಣ್ಯವಷ್ಟೇ ಎಂದೆಲ್ಲ ಹೇಳಿ ಕೊನೆಗೂ ಆ ತಾಯಿಯನ್ನು ಒಪ್ಪಿಸುವಲ್ಲಿ ಗ್ರಾಮಸ್ಥರು ಸಫಲರಾದರು. ಎಲ್ಲರ ಒಪ್ಪಿಗೆ ಪಡೆದು ಮಕ್ಕಳು ಸಂಗೀತದಲ್ಲಿ ಶಿಕ್ಷಣ ಪಡೆದು ಭವಿಷ್ಯವನ್ನು ರೂಪಿಸಿಕೊಳ್ಳುವ ದಿಸೆಯಲ್ಲಿ ಹೆಜ್ಜೆ ಇಡಲು ಶ್ರೀಗಳವರ ಜೊತೆಯಲ್ಲಿ ಹೊರಡಲು ತಯಾರಾದರು.

ವೀರಶೈವ ಧರ್ಮಕ್ಕೆ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳವರ ಕೊಡುಗೆ ಬಹಳ ಮಹತ್ತಾದುದು. ಅವರು ಸಮಾಜದ, ದೇಶದ ಒಳಿತಿಗಾಗಿ ತಮ್ಮ ಬದುಕನ್ನೇ ಧಾರೆಯೆರೆದ ಮಹಾಪುರುಷರು. ವೀರಶೈವ ಜನಾಂಗದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಅಭಿವೃದ್ಧಿಗಾಗಿ 'ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆ'ಯನ್ನು ಸ್ಥಾಪಿಸಿದ್ದ ಅವರು ಪಾಠಶಾಲೆ, ಸಂಸ್ಕೃತ ಅಧ್ಯಯನ ಮತ್ತು ಸಂಗೀತ ಶಾಲೆಗಳ ವ್ಯವಸ್ಥೆಯನ್ನೂ ಮಾಡಿದವರು. ಲಿಂಗಾಯತ ವಿದ್ಯಾವರ್ಧಕ ಪುದುವಟ್ಟನ್ನು ಸ್ಥಾಪಿಸಿ ಅದರ ಮುಖಾಂತರ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗಿದ್ದರು. ತಾವು ಸಂಚರಿಸುತ್ತಿದ್ದ ಜಾಗಗಳಲ್ಲೆಲ್ಲಾ ಪಾಠಶಾಲೆ, ಉಚಿತ ಪ್ರಸಾದನಿಲಯ, ವಾಚನಾಲಯ ಗಳನ್ನು ಆರಂಭಿಸುತ್ತಿದ್ದರು. ಮಲಾಪಹಾರಿ (ಮಲಪ್ರಭಾ) ನದಿಯ ದಂಡೆಯಲ್ಲಿ ಅವರು ಕಟ್ಟಿಸಿದ ಶಿವಯೋಗ ಮಂದಿರವು ಅವರ ಅದ್ಭುತ ಕರ್ತೃತ್ವಶಕ್ತಿಗೆ ನಿದರ್ಶನ.

ಇಂತಹ ಮಹಿಮಾವಂತರು ತಾವಾಗಿಯೇ ಈ ಅಂಧ ಬಾಲಕರ ಜವಾಬ್ದಾರಿಯನ್ನು ಹೊತ್ತುಕೊಂಡದ್ದು ಸುಮ್ಮನೆ ಅಲ್ಲ. ಆ ಬಾಲಕರಿಂದ ಸಂಗೀತ ಕ್ಷೇತ್ರಕ್ಕೆ ಬಹಳ ದೊಡ್ಡ ಸೇವೆ ಸಲ್ಲಬೇಕಾಗಿದೆ ಎಂಬುದನ್ನು ತಮ್ಮ ದಿವ್ಯದೃಷ್ಟಿಯಿಂದ ಅರಿತಿದ್ದುದರಿಂದಲೇ, ಆ ಮಹತ್ಕಾರ್ಯಕ್ಕೆ ಅವರನ್ನು ಸಿದ್ಧಗೊಳಿಸಲೆಂದೇ, ಅವರನ್ನು ತಮ್ಮೊಡನೆ ಹಾನಗಲ್ಲಿಗೆ ಕರೆತಂದಿದ್ದರು. ಆಗ, ಉತ್ತರ ಕರ್ನಾಟಕದಲ್ಲಿ ಶಾಸ್ತ್ರೀಯ ಸಂಗೀತ ಅಷ್ಟೇನೂ ಪ್ರಚಾರ ಪಡೆದಿರಲಿಲ್ಲ. ಹಾಗಾಗಿ ಮಕ್ಕಳಿಗೆ ಒಳ್ಳೆಯ ಗುರುವಿನಿಂದ ಶಿಕ್ಷಣ ಕೊಡಿಸಲು ಶಿಕ್ಷಕರ ಹುಡುಕಾಟದಲ್ಲಿ ತೊಡಗಿಕೊಂಡರು ಶ್ರೀಗಳು. ಆಗ ತಂಜಾವೂರಿನಿಂದ ಹಾನಗಲ್ಲಿಗೆ ದೈವವಶಾತ್ ಒಬ್ಬ ಸಂಗೀತಗಾರರು ಬಂದರು. ಅವರನ್ನೇ ಈ ಮಕ್ಕಳಿಗೆ ಸಂಗೀತ ಕಲಿಸಲು ವಿನಂತಿಸಿಕೊಂಡ ಮೇಲೆ ಸುಮಾರು ಮೂರು ತಿಂಗಳ ಕಾಲ ಅವರಲ್ಲಿ ಶಿಕ್ಷಣ ದೊರೆಯಿತು. ಹಾಗೆಂದು ನಿಶ್ಚಿಂತೆಯಿಂದ ಇರುವುದಾದರೂ ಹೇಗೆ? ಶಿವ ತನ್ನ ಪರೀಕ್ಷೆಗಳನ್ನು ಒಡ್ಡುತ್ತಲೇ ಇರಬೇಕಲ್ಲ! ತಮ್ಮ ಊರಿಗೆ ಹೋದ ಆ ಸಂಗೀತಗಾರರು ಮರಳಿ ಹಾನಗಲ್ಲಿಗೆ ಬರಲೇ ಇಲ್ಲ.

(ಮುಂದುವರಿಯುವುದು)

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಮಹಾಕುಂಭಮೇಳದ ವೈಭವವನ್ನು ಕಣ್ತುಂಬಿಕೊಳ್ಳುವುದೇ ಶ್ರೇಷ್ಠ ಪುಣ್ಯ**

ಕುಂಭಮೇಳದಲ್ಲಿ ಪುಣ್ಯಸ್ನಾನ ಮಾಡುವುದು ಎಷ್ಟು ಶ್ರೇಷ್ಠವೋ, ಕುಂಭಮೇಳದ ವೈಭವವನ್ನು ಕಣ್ತುಂಬಿಕೊಳ್ಳುವುದು ಅಷ್ಟೇ ಶ್ರೇಷ್ಠ ಪುಣ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 2 ವಸಂತ ಪಂಚಮಿಯಂದು ಪ್ರಯಾಗ್‌ರಾಜ್ ಮಹಾಕುಂಭಮೇಳದ ಅಂಗವಾಗಿ ಪರಮಾರ್ಥ ನಿಕೇತನ ಆಶ್ರಮದ ವತಿಯಿಂದ ಆರೈಲ್ ಘಾಟ್‌ನಲ್ಲಿ ಆಯೋಜಿಸಿದ್ದ ಗಂಗಾರತಿ ಮತ್ತು ಸತ್ಸಂಗದಲ್ಲಿ ಆಶೀರ್ವಚನ ನೀಡುತ್ತಾ ತಿಳಿಸಿದರು. ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ಸಂಗಮದಲ್ಲಿ ದೇಶದ ಎಲ್ಲ ದಿಕ್ಕುಗಳಿಂದಲೂ ಕೊಟ್ಯಂತರ ಜನ ಬಂದು ಸೇರಿರುವುದು ಅಪೂರ್ವ ಸಂಗಮ. ಇಲ್ಲಿ ಪುಣ್ಯಸ್ನಾನ ಮಾಡುವುದು ಕೇವಲ ಸಾಂಕೇತಿಕವಾಗಿದೆ. ಆದರೆ ಈ ಸಂದರ್ಭದಲ್ಲಿ ದೇಹ ಮಾತ್ರವಲ್ಲದೇ ಆತ್ಮ ಮತ್ತ ಮನಸ್ಸುಗಳನ್ನೂ ಸಹ ಭಗವಂತನಲ್ಲಿ ಲೀನಗೊಳಿಸಿ ಪರಿಶುದ್ಧರಾದಾಗ ಅದಕ್ಕೆ ಹೆಚ್ಚು ಅರ್ಥ ಬರುತ್ತದೆ. ಸಂತರಾದವರೊಬ್ಬರು ರಾಜ್ಯದ ಆಡಳಿತ ನಡೆಸಿದರೆ ಹೇಗೆ ಅಚ್ಚುಕಟ್ಟಾಗಿ ಕಾರ್ಯಕ್ರಮವೊಂದನ್ನು ಆಯೋಜಿಸಬಹುದಾಗಿದೆ ಎಂಬುದಕ್ಕೆ ಮುಖ್ಯಮಂತ್ರಿ ಶ್ರೀ ಯೋಗಿ ಆದಿತ್ಯನಾಥ್‌ರವರು ಹಾಗೂ ಈ ಮಹಾಕುಂಭಮೇಳ ಸಾಕ್ಷಿಯಾಗಿದೆ. ಇಡೀ ಜಗತ್ತೇ ಇಂದು ಭಾರತವನ್ನು ನಿಬ್ಬೆರಗಾಗಿ ನೋಡುತ್ತಿದೆ. ಇದೊಂದು ಅದ್ಭುತವಾದ ಜಾಗತಿಕ ಸಂಸ್ಕೃತಿಯ ಮಹಾಮೇಳವಾಗಿದೆ ಎಂದು ಹೇಳಿದರು.

ಪರಮಾರ್ಥ ನಿಕೇತನದ ಸಾಧ್ವಿ ಭಗವತಿ ಸರಸ್ವತಿಯವರು, ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ಮಾತನಾಡಿದರು. ಹರಿಹರದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳು ಹಾಗೂ ಕರ್ನಾಟಕದಿಂದ ಆಗಮಿಸಿದ್ದ ವಿವಿಧ ಮಠಾಧೀಶರು ಉಪಸ್ಥಿತರಿದ್ದರು. ಸಾವಿರಾರು ಸಂಖ್ಯೆಯಲ್ಲಿ ಯಾತ್ರಾರ್ಥಿಗಳು, ಆಶ್ರಮದ ಭಕ್ತಾದಿಗಳು, ಸ್ವಯಂಸೇವಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ಭಾರತೀಯ ಸಂಸ್ಕೃತಿ ಸನಾತನವಾದುದು**

ಭಾರತೀಯ ಸಂಸ್ಕೃತಿ ಸನಾತನವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 4ರಂದು ಸೇಡಂ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಭಾರತ ವಿಕಾಸ ಸಂಗಮ ಹಾಗೂ ವಿಕಾಸ ಅಕಾಡೆಮಿಯ

ಸಹಯೋಗದಲ್ಲಿ ಆಯೋಜಿಸಿದ್ದ 7ನೇ ಭಾರತೀಯ ಸಾಂಸ್ಕೃತಿಕ ಉತ್ಸವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಗ್ರೀಸ್ ದೇಶಕ್ಕಿಂತಲೂ ಮೊದಲು ಜಗತ್ತಿಗೆ ಕಲೆ, ಸಾಹಿತ್ಯ, ಸಂಗೀತ, ಆಧ್ಯಾತ್ಮ, ಧರ್ಮ, ಸಂಸ್ಕೃತಿ, ಯೋಗ, ವಿಜ್ಞಾನ ಹೀಗೆ ಎಲ್ಲ ಕ್ಷೇತ್ರಗಳಿಗೂ ಮಹತ್ವದ ಕೊಡುಗೆಯನ್ನು ನೀಡಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. ದೇಶಕ್ಕೆ ಅಗತ್ಯವಿದ್ದಾಗಲೆಲ್ಲ ಮಹಾತ್ಮರು ಉದಿಸಿ ಮಾರ್ಗದರ್ಶನ ಮಾಡಿದ್ದಾರೆ. ಸಂತರು, ಶರಣರು, ಋಷಿಮುನಿಗಳು, ದಾಸರು ಹೀಗೆ ಅನೇಕ ಮಹನೀಯರು ನಾಡಿಗೆ ಅನನ್ಯವಾದ ಕೊಡುಗೆಯನ್ನು ನೀಡಿದ್ದಾರೆ. ದೇಶ ವಿದೇಶಿಯರ ಆಕ್ರಮಣಕ್ಕೆ ಒಳಪಟ್ಟಾಗ ಅವರು ಇಲ್ಲಿನ ಭೌತಿಕ ಸಂಪತ್ತನ್ನು ಮಾತ್ರ ಕೊಂಡೊಯ್ಯಲು ಸಾಧ್ಯವಾಯಿತೇ ಹೊರತು ಇಲ್ಲಿನ ಆಂತರಿಕ ಸಂಪತ್ತನ್ನು ನಾಶ ಮಾಡಲು ಸಾಧ್ಯವಾಗಲಿಲ್ಲ. ಮಕ್ಕಳನ್ನು ಒಳ್ಳೆಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆಸಬೇಕು. ಇದು ಮುಂದಿನ ಜನಾಂಗವು ಉತ್ತಮವಾಗಿ ಬೆಳೆಯಲು ಸಾಧ್ಯವಾಗುತ್ತದೆ, ಸಂಸ್ಕೃತಿ ಎಂಬುದು ತಾಯಿ ಬೇರು. ನಾಗರಿಕತೆ ಅವರವರ ಅನುಕೂಲಕ್ಕೆ ತಕ್ಕಂತೆ ಬದಲಾಗುತ್ತಿರುತ್ತದೆ. ಸಂಸ್ಕೃತಿಯನ್ನು ಅರ್ಥಮಾಡಿಕೊಂಡು ಆಚರಣೆ ಮಾಡಬೇಕಾದುದು ಎಲ್ಲರ ಆದ್ಯ ಕರ್ತವ್ಯ. ಸೇಡಂ ಶ್ರೀಗಳು, ಶ್ರೀ ಗೋವಿಂದಾಚಾರ್ಯರು ಮತ್ತು ಶ್ರೀ ಬಸವರಾಜ ಪಾಟೀಲ್ ಸೇಡಂರವರಗಳ ಪರಿಶ್ರಮದಿಂದ ಇಂತಹ ಒಂದು ಅದ್ಭುತವಾದ ಸಂಸ್ಕೃತಿ ಉತ್ಸವವನ್ನು ಆಯೋಜಿಸಿರುವುದು ಶ್ಲಾಘನೀಯ ಎಂದು ಹೇಳಿದರು.

ಶ್ರೀ ಕೊತ್ತಲ ಬಸವೇಶ್ವರ ಸಂಸ್ಥಾನ ಮಠದ ಶ್ರೀ ಸದಾಶಿವ ಸ್ವಾಮಿಗಳು, ಮಾಜಿ ಶಾಸಕರಾದ ಶ್ರೀ ಬಸವರಾಜ ಪಾಟೀಲ್ ಸೇಡಂ ಮೊದಲಾದವರು ಉಪಸ್ಥಿತರಿದ್ದರು.

**ಸಾರ್ವಜನಿಕರ ಕಲ್ಯಾಣಕ್ಕಾಗಿ ಮಠಮಾನ್ಯಗಳು ಶ್ರಮಿಸುತ್ತಿವೆ**

ಸಾರ್ವಜನಿಕರ ಕಲ್ಯಾಣಕ್ಕಾಗಿ ಮಠಮಾನ್ಯಗಳು ಶ್ರಮಿಸುತ್ತಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 8ರಂದು ನಂಜನಗೂಡು ತಾಲ್ಲೂಕು ಶಿರಮಳ್ಳಿ ಶ್ರೀ ಮುರುಘಿಸ್ವಾಮಿ ಮಠದ ರಾಜದ್ವಾರ, ಶ್ರೀ ಬಸವರಾಜ ಸ್ವಾಮಿಗಳ ಗದ್ದುಗೆ ಲೋಕಾರ್ಪಣೆ ಹಾಗೂ ಶ್ರೀ ಇಮ್ಮಡಿ ಮುರುಘಿ ಸ್ವಾಮಿಗಳವರ 11ನೇ ವರ್ಷದ ಪಟ್ಟಾಧಿಕಾರ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ನಾಡಿನ ಮಠಗಳು ಜನರಿಗೆ ಅಕ್ಷರ ಜ್ಞಾನವನ್ನು ನೀಡಿ, ಹಸಿವನ್ನು ನೀಗಿಸಿ ಬದುಕಿನ ಸಂಕಟ ಪರಿಹರಿಸುವ ಮೂಲಕ ಅವರ ಬಾಳಿನಲ್ಲಿ ಬದಲಾವಣೆ ತಂದು ಸುಖ ಶಾಂತಿ ನೆಲೆಸಲು ಕಾರಣವಾಗಿವೆ. ಎಲ್ಲಾ ಧರ್ಮದ ಮಠಗಳು, ಮಂದಿರಗಳ ಆಚರಣೆಗಳಲ್ಲಿ ಭಿನ್ನತೆಯಿದ್ದರೂ ಜನತೆಯ ಕಲ್ಯಾಣಕ್ಕಾಗಿ ಏಕಭಾವದಿಂದ ಶ್ರಮಿಸುತ್ತಿವೆ. ಸಕಾರಾತ್ಮಕವಾದ ಜೀವನ ರೂಪಿಸಿಕೊಳ್ಳಲು ಮಾರ್ಗದರ್ಶನ ಮಾಡುತ್ತಿವೆ ಎಂದು ಹೇಳಿದರು.

ದೇವನೂರು, ಕನಕಪುರ, ಬೆಟ್ಟದಪುರ, ಹುಲ್ಲಹಳ್ಳಿ ಮಠಗಳ ಶ್ರೀಗಳು, ಶಾಸಕರಾದ ಶ್ರೀ ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕರಾದ ಶ್ರೀ ಬಿ. ಹರ್ಷವರ್ಧನ್,

ಕಲಾವಿದರಾದ ಶ್ರೀ ಸುಚೇಂದ್ರ ಪ್ರಸಾದ್, ಶ್ರೀ ಎಸ್.ಎಂ. ಕೆಂಪಣ್ಣ, ಶ್ರೀ ಚಿಕ್ಕರಂಗನಾಯಕ, ಶ್ರೀ ಹಗಿನವಾಳು ಚೆನ್ನಪ್ಪ, ಶ್ರೀ ಎನ್.ಸಿ. ಬಸವಣ್ಣ ಮೊದಲಾದವರು ಉಪಸ್ಥಿತರಿದ್ದರು.

**ಮಹದೇಶ್ವರರು ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿದ್ದಾರೆ**

ಮಹದೇಶ್ವರರು, ಸಿದ್ಧಪ್ಪಾಜಿ ಹಾಗೂ ಮಂಟೇಸ್ವಾಮಿಯವರ ಪವಾಡಗಳು, ಕಂಸಾಳೆ ಪದಗಳು ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 9ರಂದು ಹನೂರು ತಾಲ್ಲೂಕು ದಂಟಳ್ಳಿ ಶ್ರೀ ಮಹದೇಶ್ವರ, ಶ್ರೀ ಸಿದ್ಧಪ್ಪಾಜಿ ಹಾಗೂ ಶಕ್ತಿದೇವತೆಗಳ ದೇವಸ್ಥಾನಗಳ ನಿರ್ಮಾಣದ ಶಂಕುಸ್ಥಾಪನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮಹದೇಶ್ವರರ ಪವಾಡಸದೃಶ್ಯ ಸಂಗತಿಗಳು ಪ್ರತಿಯೊಬ್ಬ ಮನುಷ್ಯನ ಮನಸ್ಸಿನ ಮೇಲೂ ಅಪಾರವಾದ ಪ್ರಭಾವ ಬೀರುತ್ತವೆ. ಸಿದ್ಧಪ್ಪಾಜಿಯವರ ಪವಾಡಗಳನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಲೇಬೇಕು. ಇಂತಹ ಮಹನೀಯರ ದೇವಸ್ಥಾನಗಳನ್ನು ಕಾಡಂಚಿನ ಗ್ರಾಮದಲ್ಲಿ ನಿರ್ಮಿಸುತ್ತಿರುವುದು ಸಂತಸದ ವಿಚಾರ ಎಂದು ಹೇಳಿದರು.

ಸಿದ್ಧಗಂಗಾ ಮಠದ ಕಿರಿಯ ಶ್ರೀಗಳು, ಸಾಲೂರು ಮಠ ಮತ್ತು ಕನಕಪುರ ಮಠಗಳ ಶ್ರೀಗಳು, ಮಾಜಿ ಶಾಸಕರುಗಳಾದ ಶ್ರೀಮತಿ ಪರಿಮಳ ನಾಗಪ್ಪ, ಶ್ರೀ ಆರ್. ನರೇಂದ್ರ, ಶ್ರೀ ಕೆ.ಆರ್. ಮಲ್ಲಿಕಾರ್ಜುನಪ್ಪ ಮೊದಲಾದವರು ಉಪಸ್ಥಿತರಿದ್ದರು.

**ಕಷ್ಟದಲ್ಲಿದ್ದವರಿಗೆ ನೆರವಾದರೆ ಮನಸ್ಸಿಗೆ ಸಂತೃಪ್ತಿ**

ಕಷ್ಟದಲ್ಲಿದ್ದವರಿಗೆ ನೆರವಾಗುವುದರಿಂದ ಮನಸ್ಸಿಗೆ ಅನಂತ ಸಂತೃಪ್ತಿ ದೊರೆಯತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 10ರಂದು ಗುಂಡ್ಲುಪೇಟೆ ತಾಲ್ಲೂಕು ಹಸಗೂಲಿ ಶ್ರೀ ಪಾರ್ವತಾಂಬ ಅಮ್ಮನವರ ದೇವಸ್ಥಾನದ ನೂತನ ಶಿಲಾದೇವತೆಯ ಪ್ರಾಣ ಪ್ರತಿಷ್ಠಾಪನೆ, ಕಳಸಾರೋಹಣ, ದೇವಾಲಯ ಲೋಕಾರ್ಪಣೆ ಮತ್ತು ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಭಗವಂತನಲ್ಲಿ ಶ್ರದ್ಧೆ, ವಿಶ್ವಾಸ ಮತ್ತು ನಿಷ್ಠೆಯನ್ನು ಬೆಳೆಸಿಕೊಳ್ಳಬೇಕಾದುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯ. ಹೊರ ಜಗತ್ತಿನ ಯಾವುದೇ ಸುಖಗಳು ನೆಮ್ಮದಿ ನೀಡುವುದಿಲ್ಲ, ಧ್ಯಾನ ಮತ್ತು ಪೂಜೆಗಳಿಂದ ಮನಸ್ಸಿಗೆ ನಿಜವಾದ ನೆಮ್ಮದಿ ದೊರೆಯುತ್ತದೆ. ಮನುಷ್ಯನ ಭಕ್ತಿ ಹರಿಯುವ ನದಿಯಂತೆ ಸದಾ ಚೈತನ್ಯಶೀಲವಾಗಿರಬೇಕು. ಗುಂಡ್ಲುಪೇಟೆಯ ಜನರು ಬಹಳ ಭಕ್ತಿಭಾವವನ್ನು ಹೊಂದಿರುವವರು. ಮಠಗಳು ಮತ್ತು ದೇವಾಲಯಗಳಿಗೆ ಉದಾರವಾಗಿ ದಾನ ಕೊಡುವಂತಹ ಮನಸ್ಸು ಇಲ್ಲಿನ ಜನತೆಗೆ ಇದೆ ಎಂದು ಹೇಳಿದರು.

ಸಿದ್ಧಗಂಗಾ, ದೇವನೂರು, ಕನಕಪುರ, ಸೋಮಹಳ್ಳಿ, ಪಡುಗೂರು, ಮಾದಾಪಟ್ಟಣ, ಗಾವಡಗೆರೆ, ಅಂಕಹಳ್ಳಿ, ದಡದಹಳ್ಳಿ, ಮೂಡುಗೂರು, ಚಿಕ್ಕತುಪ್ಪೂರು ಮುಂತಾದ ಮಠಗಳ ಶ್ರೀಗಳು, ಶಾಸಕರಾದ ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಮಾಜಿ ಶಾಸಕರಾದ

ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಹಂಗಳ ನಂಜಪ್ಪ, ಶ್ರೀ ಹೆಚ್.ಎಸ್. ಮಹೇಶ್ ಮೊದಲಾದವರುಗಳು ಉಪಸ್ಥಿತರಿದ್ದರು.

**ಭಗವಂತನನ್ನು ಕಾಣುವ ತವಕವಿರಬೇಕು**

ಭಗವಂತನನ್ನು ಕಾಣುವ ತವಕ ಮತ್ತು ಕಾತುರವಿದ್ದರೆ ಮಾತ್ರ ಮುಕ್ತಿ ಹೊಂದಲು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 17ರಂದು ನಂಜನಗೂಡು ತಾಲ್ಲೂಕು ಹೆಡಿಯಾಲ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ನೂತನ ಕಟ್ಟಡ ಉದ್ಘಾಟನೆ, ಶ್ರೀ ಚನ್ನಪ್ಪ ಸ್ವಾಮಿಗಳು ಹಾಗೂ ಶ್ರೀ ನಾಗಪ್ಪ ಸ್ವಾಮಿಗಳವರ ಆರಾಧನಾ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮಾಡುವಂತಿರಬೇಕು ಮಾಡದಂತಿರಬೇಕು ಮಾಡುವ ಮಾಟದೊಳಗೆ ತಾನು ಇಲ್ಲದಂತಿರಬೇಕು ಎಂದು ಶರಣರು ಹೇಳಿದ್ದಾರೆ. ಎಲ್ಲರೂ ಗುರುಹಿರಿಯರಿಗೆ ಗೌರವ ನೀಡಬೇಕು. ಜೀವನದಲ್ಲಿ ಸಂಸ್ಕೃತಿ–ಸಂಸ್ಕಾರಗಳನ್ನು ಅಳವಡಿಸಿಕೊಳ್ಳಬೇಕು. ಸಂಸ್ಕಾರವನ್ನು ನೀಡುವ ಕಾಯಕವನ್ನು ಮಠಗಳು ಮಾಡುತ್ತಿವೆ. ಅಂತಹ ಮಠಗಳಲ್ಲಿ ಹೆಡಿಯಾಲದ ಮಠವೂ ಒಂದಾಗಿದೆ. ಆಸ್ಪತ್ರೆಯಲ್ಲಿ ಕಣ್ಣುದಾನ ಮಾಡುವವನು ಹಾಗೂ ಪಡೆಯುವವನು ಯಾರು ಎಂದು ವೈದ್ಯರು ಹೇಳುವುದಿಲ್ಲ ಅದೇ ರೀತಿಯಾಗಿ ಈ ದಾಸೋಹ ಕಾಯಕವು ನಡೆಯುತ್ತದೆ. ಯಾರದೋ ಮನೆಯ ಅನ್ನ ಯಾರಿಗೋ ಪ್ರಸಾದವಾಗುತ್ತದೆ. ಒಟ್ಟಿಗೆ ಇದನ್ನು ಶ್ರೀ ಗುರುಮಲ್ಲೇಶ್ವರರು ಅಂದಿನ ಕಾಲದಲ್ಲೇ ಮಾಡಿದ್ದಾರೆ ಎಂದು ಹೇಳಿದರು.

ಪಡುಗೂರು ಅಡವಿ ಮಠದ ಶ್ರೀ ಶಿವಲಿಂಗೇಂದ್ರ ಸ್ವಾಮಿಗಳು ಮನುಷ್ಯನ ಮನಸ್ಸಿನ ಕತ್ತಲು ಹೋಗಲಾಡಿಸಲು ಮಠಗಳು ಜ್ಞಾನ ದಾಸೋಹವನ್ನು ಮಾಡುತ್ತಿವೆ. ಗುರುವಿಗಿಂತ ದೊಡ್ಡವರು ಯಾರೂ ಇಲ್ಲ. ಹರ ಮುನಿದರೆ ಗುರು ಕಾಯುತ್ತಾನೆ. ಇಡೀ ವಿಶ್ವವೇ ಭಾರತವನ್ನು ಗುರುಸ್ಥಾನದಲ್ಲಿ ನೋಡುತ್ತಿದೆ. ಕಾರಣ ಇಲ್ಲಿನ ಸಂಸ್ಕೃತಿ, ಶರಣರು, ಸಂತರು. ತಾಂತ್ರಿಕ ಬದುಕಿನ ಜಂಜಡದಲ್ಲಿ ನಮ್ಮ ಧಾರ್ಮಿಕ ಆಚರಣೆಗಳನ್ನು ಮರೆಯಬಾರದು ಎಂದರು.

ದಡದಹಳ್ಳಿ, ಸೋಮಳ್ಳಿ, ಗಾವಡಗೆರೆ, ಹರವೆ, ಹಂಚೀಪುರ ಮಠಗಳ ಶ್ರೀಗಳು, ಶ್ರೀ ಕೆಂಡಣ್ಣ ಶ್ರೀ ಹಿನ್‌ಕಲ್ ಬಸವರಾಜು, ಶ್ರೀ ಎಂ. ಪ್ರದೀಪ್ ಕುಮಾರ್‌ರವರುಗಳು ಮಾತನಾಡಿದರು. ಗ್ರಾಮದ ಮಹಿಳೆಯರು ಪ್ರಾರ್ಥಿಸಿದರು. ಶ್ರೀ ವೀರಭದ್ರಪ್ಪ ಸ್ವಾಗತಿಸಿದರು. ಶ್ರೀ ವೀರೇಶ್ ಕಾರ್ಯಕ್ರಮ ನಿರೂಪಿಸಿದರು.

**ಕಾಯಕ ಮತ್ತು ದಾಸೋಹದಿಂದ ಮನುಷ್ಯನಿಗೆ ಮೋಕ್ಷ**

ಕಾಯಕ ಹಾಗೂ ದಾಸೋಹಗಳು ಮನುಷ್ಯನನ್ನು ಮೋಕ್ಷದ ಹಾದಿಗೆ ಕೊಂಡೊಯ್ಯುತ್ತವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 20ರಂದು ಟಿ. ನರಸೀಪುರ ತಾಲ್ಲೂಕು ಬಿಲಿಗೆರೆಹುಂಡಿ ಶ್ರೀ ಗುರುಮಲ್ಲೇಶ್ವರ ದಾಸೋಹ

ಮಠದ ಕಟ್ಟಡದ ಜೀರ್ಣೋದ್ಧಾರ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜಗತ್ತನ್ನು ಸೃಷ್ಟಿಸಿ ನಿಯಂತ್ರಿಸುತ್ತಿರುವ ಅಗೋಚರ ಶಕ್ತಿಯಂತೆ ದಾಸೋಹದಿಂದಲೂ ಶಕ್ತಿ ಪಡೆಯಲು ಸಾಧ್ಯವಿದೆ. ದಾಸೋಹ ಸೇವೆಯಿಂದ ಭಗವಂತನ ಕೃಪೆಗೆ ಸನಿಹವಾಗಬಹುದು. ಸೃಷ್ಟಿಯಲ್ಲಿ ಹೊಸತನ್ನು ಸೃಷ್ಟಿಸುವ ಶಕ್ತಿ ಯಾರಿಗೂ ಇಲ್ಲ. ಪ್ರಕೃತಿದತ್ತವಾಗಿರುವುದನ್ನು ಮರುಸ್ಥಾಪಿಸುವುದು ಸಾಧ್ಯವಿದೆ. ಸಾಂಪ್ರದಾಯಿಕವಾಗಿ ಸರಳತೆಯಿಂದ ಧರ್ಮವನ್ನು ಆಚರಣೆ ಮಾಡಬೇಕೆಂದು ಶ್ರೀ ಗುರುಮಲ್ಲೇಶ್ವರರು ತಿಳಿಸಿಕೊಟ್ಟಿರುವುದು ಇಂದಿಗೂ ಜನಜನಿತವಾಗಿದೆ. ಅವರ ಹೆಸರಿನಿಂದ ದಾಸೋಹ ಕಾಯಕವನ್ನು ಮಠಗಳಲ್ಲಿ ನಡೆಸಿಕೊಂಡು ಬರಲಾಗುತ್ತಿದೆ.

ದೇವನೂರು ಶ್ರೀ ಮಹಾಂತ ಸ್ವಾಮಿಗಳು ಮಾತನಾಡುತ್ತಾ ನಿತ್ಯವೂ ದಾಸೋಹ ಕಾರ್ಯ ನಿರ್ವಹಿಸುವುದು ನಿಜಕ್ಕೂ ಸವಾಲಿನದಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಶ್ರೀ ಗುರುಮಲ್ಲೇಶ್ವರರ ಮಠವನ್ನು ಜೀರ್ಣೋದ್ಧಾರಗೊಳಿಸಿರುವ ಶ್ರೀ ಗುರುಸ್ವಾಮಿಗಳ ಶ್ರಮ ನಿಜಕ್ಕೂ ಮೆಚ್ಚುವಂತಹದ್ದು. ಭಕ್ತರನ್ನು ಒಗ್ಗೂಡಿಸಿ ದಾಸೋಹ ಕಾರ್ಯ ಆಯೋಜಿಸುತ್ತಿರುವುದು ಮಠಮಾನ್ಯಗಳ ಹಿರಿಮೆಯನ್ನು ಹೆಚ್ಚಿಸಿದೆ ಎಂದರು.

ಮುಡುಕನಪುರ, ಕನಕಪುರ, ವಾಟಾಳು, ದೇವನೂರು ಮಠಗಳ ಶ್ರೀಗಳು, ಶ್ರೀ ಹೆಚ್.ವಿ. ಬಸವರಾಜು, ಶ್ರೀ ಸಿ.ಎಂ. ಪ್ರಕಾಶ್, ಶ್ರೀ ಕೆ.ಎನ್. ಅಶೋಕ್, ಶ್ರೀ ಸೋಮಶೇಖರ್‌ರವರುಗಳು ಮಾತನಾಡಿದರು. ಶ್ರೀ ಜ್ಞಾನೇಂದ್ರಮೂರ್ತಿ ಸ್ವಾಗತಿಸಿದರು. ಶ್ರೀ ಮಹದೇವಸ್ವಾಮಿ ಪ್ರಾರ್ಥಿಸಿದರು. ಶ್ರೀ ಎಂ. ಶಿವಮೂರ್ತಿ ಪ್ರಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಜ್ಯೋತಿ ಪರಮೇಶ್ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಮಲ್ಲಣ್ಣ, ಶ್ರೀ ಮಹಾದೇವಸ್ವಾಮಿ, ಶ್ರೀ ರಾಜಣ್ಣ, ಶ್ರೀ ಬಿ. ಮಂಟೇಲಿಂಗಪ್ಪ, ಶ್ರೀ ಬಸವರಾಜು ಮೊದಲಾದವರು ಉಪಸ್ಥಿತರಿದ್ದರು.

**ಮಹದೇಶ್ವರರು ಸಂಚರಿಸಿದ ಸ್ಥಳಗಳು ಜಾಗೃತಿ ಕೇಂದ್ರಗಳಾಗಿವೆ**

ಶ್ರೀ ಮಹದೇಶ್ವರ ಪಾದ ಸ್ಪರ್ಷದಿಂದ ಪುನೀತವಾದ ಸ್ಥಳಗಳು ಪುಣ್ಯಕ್ಷೇತ್ರಗಳಾಗಿ ಮಾರ್ಪಟ್ಟಿವೆ ಹಾಗೂ ಜಾಗೃತಿ ಕೇಂದ್ರಗಳಾಗಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 21ರಂದು ಮಳವಳ್ಳಿ ತಾಲ್ಲೂಕು ಸಂಶೆಟ್ಟಿಪುರ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ಅಂಕ ಪ್ರತಿಷ್ಠಾಪನೆಯ ಪ್ರಯುಕ್ತ ಏರ್ಪಡಿಸಿದ್ದ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮಹದೇಶ್ವರರು ಯಾವುದೇ ವೈಭವಕ್ಕೆ ಆಸೆ ಪಟ್ಟವರಲ್ಲ. ಅವರ ಗುಡಿಗಳು ಚಿಕ್ಕವಾಗಿದ್ದರೂ ಭಕ್ತರ ಭಕ್ತಿಯ ಸ್ವರೂಪ ದೊಡ್ಡದಾಗಿದೆ. ಮಹದೇಶ್ವರ ದೇವಾಲಯದ ಗರ್ಭಗುಡಿಗೆ ಇಂದಿಗೂ ವಿದ್ಯುಚ್ಛಕ್ತಿ ಅಳವಡಿಸಲಾಗಿಲ್ಲ. ಮಾದಪ್ಪನ ಮಹಿಮೆಯಿಂದ ಬೆಳಕಿಗೆ ಯಾವ ಕೊರತೆಯೂ ಇಲ್ಲ. ಅವನ ಅನುಗ್ರಹ ಇಲ್ಲದ ಜೀವನ ನಿರರ್ಥಕ ಎಂದು ಹೇಳಿದರು.

ಕನಕಪುರ, ಸಾಲೂರು ಮಠ, ಎಂ.ಎಲ್. ಹುಂಡಿ, ಮರಿಯಾಲ, ಮಾಡ್ರಹಳ್ಳಿ, ರಾಗಿಬೊಮ್ಮಹಳ್ಳಿ ಮಠಗಳ ಶ್ರೀಗಳು ಹಾಗೂ ಕೆ.ಆರ್. ನಗರ ಕಾಗಿನೆಲೆ ಮಠ, ಚಿತ್ರದುರ್ಗದ ಮಡಿವಾಳ ಗುರುಪೀಠದ ಶ್ರೀಗಳು, ಶ್ರೀ ಕುಂದೂರು ಮೂರ್ತಿ, ಶ್ರೀ ವಿಶ್ವಾಸ್, ಶ್ರೀ ಕುಂದೂರು ಪ್ರಕಾಶ ಮೊದಲಾದವರು ಉಪಸ್ಥಿತರಿದ್ದರು.

**ಸುತ್ತೂರು ಶ್ರೀಕ್ಷೇತ್ರದಲ್ಲಿ ಸಂಭ್ರಮದ ಮಹಾಶಿವರಾತ್ರಿ**

ಸುತ್ತೂರು ಶ್ರೀಕ್ಷೇತ್ರದಲ್ಲಿ ಮಹಾಶಿವರಾತ್ರಿಯ ಅಂಗವಾಗಿ ಫೆಬ್ರವರಿ 26ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಅಹೋರಾತ್ರಿ ವಿಶೇಷ ಪೂಜೆ ಹಾಗೂ ಜಾಗರಣೆ ಕಾರ್ಯಕ್ರಮಗಳು ಜರುಗಿದವು.

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ, ಶ್ರೀ ನಾರಾಯಣಸ್ವಾಮಿ ದೇವಾಲಯಗಳಲ್ಲಿ ರುದ್ರಾಭಿಷೇಕ, ಅಷ್ಟೋತ್ತರ, ಮಹಾಮಂಗಳಾರತಿ, ಬೆಳ್ಳಿರಥ ಪ್ರಾಕಾರೋತ್ಸವ ಮೊದಲಾದ ವಿಶೇಷ ಪೂಜೆಗಳು ನೆರವೇರಿದವು. ಶ್ರೀ ನಂಜುಂಡೇಶ್ವರರ ನಾಗಾಭರಣ ಸಹಿತ ಬೆಳ್ಳಿಮೂರ್ತಿಗೆ ಉದ್ಯಮಿಗಳಾದ ಶ್ರೀ ರಾಘವೇಂದ್ರರಾವ್ ಮತ್ತು ಕುಟುಂಬದವರು ತುಲಾಭಾರ ಸೇವೆ ಸಲ್ಲಿಸಿದರು.

ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳು ಭಕ್ತಿಭಾವಭರಿತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ಮೈಸೂರಿನ ಶ್ರೀರಾಂಪುರದ ಶ್ರೀಮತಿ ಕೆ.ಪಿ. ರೇವತಿ ಶರ್ಮ ಮತ್ತು ತಂಡದವರು ಭಕ್ತಿ ಗಾಯನವನ್ನು ನಡೆಸಿಕೊಟ್ಟರು. ಮೈಸೂರಿನ ಶಾರದಾದೇವಿ ನಗರದ ಶ್ರೀ ಎಸ್.ಆರ್. ಲಕ್ಷ್ಮೀನರಸಿಂಹನ್‌ರವರು ಶಿವಕಥಾ ಸಂಕೀರ್ತನೆ ಮಾಡಿದರು. ಮೈಸೂರಿನ ಡಾ. ಲಿಂಗರಾಜು ಮತ್ತು ತಂಡದವರು ಜನಪದ ಭಕ್ತಿಗೀತೆಗಳನ್ನು ನಡೆಸಿಕೊಟ್ಟರು. ಚಾಮರಾಜನಗರ ತಾಲ್ಲೂಕಿನ ಬ್ಯಾಡಮೂಡ್ಲುವಿನ ಶ್ರೀ ಮಲೆ ಮಹದೇಶ್ವರ ಕಂಸಾಳೆ ಮತ್ತು ಸಾಂಸ್ಕೃತಿಕ ಕಲಾ ಟ್ರಸ್ಟ್‌ನವರು ನೀಲಗಾರರ ಮೇಳವನ್ನು ಮತ್ತು ಹೊರಳವಾಡಿಯ ಶ್ರೀ ಬಸವೇಶ್ವರ ಭಜನಾ ತಂಡದವರು ಭಜನೆ ನಡೆಸಿಕೊಟ್ಟರು.

ಬೆನಕನಹಳ್ಳಿ, ಚಾಮರಾಜನಗರದ ಕದಳಿ ಮಹಿಳಾ ವೇದಿಕೆ, ದೊಡ್ಡಹುಂಡಿ, ಹೂರದಹಳ್ಳಿ ಬದನವಾಳು, ಹೊಟಗಳ್ಳಿ, ದೇವನೂರು, ಹುಳಿಮಾವು, ಆಲಹಳ್ಳಿ ಮತ್ತು ಭೋಗಯ್ಯನಹುಂಡಿ ಭಜನಾ ತಂಡದವರು ಶ್ರೀಮಠ ಹಾಗೂ ಶ್ರೀ ಗದ್ದುಗೆಯಲ್ಲಿ ಅಖಂಡ ಭಜನೆ ನಡೆಸಿಕೊಟ್ಟರು. ರಾತ್ರಿ 75ಕ್ಕೂ ಹೆಚ್ಚು ವಟುಗಳು ಶಿವದೀಕ್ಷೆ ಸಂಸ್ಕಾರ ಪಡೆದುಕೊಂಡರು. ಕಾರ್ಯಕ್ರಮಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

❑

# ಪ್ರಸಾದ



## ಕೃತಿ–ಸ್ವೀಕೃತಿ

**ವಚನ ಮಂದಾರ – ಭಾಗ–1**
ಶ್ರೀಮತಿ ಸುಶೀಲಾ ಸೋಮಶೇಖರ್
ಪ್ರ: ಸ್ನೇಹಾ ಪಬ್ಲಿಷಿಂಗ್ ಹೌಸ್
ಹಂಪಿನಗರ, ಬೆಂಗಳೂರು
ಪು : 200, ಬೆಲೆ : 200/–

**ಡೋಣಿ ಸಾಲು**
**(ಪ್ರೊ. ಬಸವರಾಜ ಡೋಣೂರ ಸಂಕಥನ)**
ಪ್ರೊ. ಗಣೇಶ ಪವಾರ
ಡಾ. ಟಿ.ಡಿ. ರಾಜಣ್ಣ ತಗ್ಗಿ
ಡಾ. ಅಪ್ಪಗೆರೆ ಸೋಮಶೇಖರ
ಪ್ರ: ಅನ್ನಪೂರ್ಣ ಪಬ್ಲಿಸಿಂಗ್ ಹೌಸ್
ಅಗ್ರಹಾರ ದಾಸರಹಳ್ಳಿ, ಬೆಂಗಳೂರು
ಪು : 954, ಬೆಲೆ : 1350/–

**ಲ್ಯಾಟರೀನಾ**
ಕುಂ. ವೀರಭದ್ರಪ್ಪ
ಪ್ರ: ಸಪ್ನ ಬುಕ್ ಹೌಸ್ ಪ್ರೈ.ಲಿ.,
ಗಾಂಧಿನಗರ, ಬೆಂಗಳೂರು
ಪು : 389, ಬೆಲೆ : 350/–

**ನನ್ನ ಪಿತಾಮಹ (ಅಜ್ಜನ ಜೀವನ ಚರಿತ್ರೆ)**
ವೀಣಾ ಬನ್ನಂಜೆ
ಪ್ರ: ಬನ್ನಂಜೆ ಗೋವಿಂದಾಚಾರ್ಯ
ಪ್ರತಿಷ್ಠಾನ (ರಿ), 204, ವಸಂತಪುರ
ಮಾರುತಿ ಲೇಔಟ್, ಬೆಂಗಳೂರು

**ಸ್ಫೂರ್ತಿಯ ಚಿಲುಮೆ**
**(ಸ್ಫೂರ್ತಿ ನನ್ನದು – ಸಾಧನೆ ನಿಮ್ಮದು)**
ಬಾಲಚಂದ್ರ ಎಂ.
ಪ್ರ: ಪವಾಡ ಶ್ರೀ ಪ್ರಕಾಶನ
ಪವಾಡ ಶ್ರೀ ಬಸವಣ್ಣ ದೇವರ ಮಠ
ನೆಲಮಂಗಲ, ಬೆಂಗಳೂರು
ಪು : 128, ಬೆಲೆ : 200/–

**ದಾರಿದೀಪ**
ಬಾಲಚಂದ್ರ ಎಂ.
ಪ್ರ: ಪವಾಡ ಶ್ರೀ ಪ್ರಕಾಶನ
ಪವಾಡ ಶ್ರೀ ಬಸವಣ್ಣ ದೇವರ ಮಠ
ನೆಲಮಂಗಲ, ಬೆಂಗಳೂರು
ಪು : 128, ಬೆಲೆ : 200/–

**ಮನದ ಮಾತು**
ಬಾಲಚಂದ್ರ ಎಂ.
ಪ್ರ: ಪವಾಡ ಶ್ರೀ ಪ್ರಕಾಶನ
ಪವಾಡ ಶ್ರೀ ಬಸವಣ್ಣ ದೇವರ ಮಠ
ನೆಲಮಂಗಲ, ಬೆಂಗಳೂರು
ಪು : 136, ಬೆಲೆ : 200/–

**ಜೀವನ ದರ್ಶನ (ಬದುಕಲು ಹೊರಟವರ ಭಗವದ್ಗೀತೆ) ಭಾಗ–2**
ಬಾಲಚಂದ್ರ ಎಂ.
ಪ್ರ: ಪವಾಡಶ್ರೀ ಪ್ರಕಾಶನ
ಪವಾಡ ಶ್ರೀ ಬಸವಣ್ಣ ದೇವರ ಮಠ
ನೆಲಮಂಗಲ, ಬೆಂಗಳೂರು
ಪು : 128, ಬೆಲೆ : 200/–

**ಚಿಂಕಾರ**
ಪಿ.ಡಿ. ವಾಲೀಕಾರ
ಪ್ರ: ನಿಸರ್ಗ ಪ್ರಕಾಶನ
ಗುಳೇದಗುಡ್ಡ, ಬಾಗಲಕೋಟೆ ಜಿಲ್ಲೆ
ಪು : 72, ಬೆಲೆ : 200/–

**ಲಿಂಗಾಯತ ಧರ್ಮ–ದರ್ಶನ**
**(ಮೂಲ ತತ್ತ್ವಗಳು)**
ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)
ಪ್ರ: ಜಗಜ್ಯೋತಿ ಬಸವೇಶ್ವರ
ಅನುಭಾವ ಪೀಠ, ಮಹಂತೇಶ ನಗರ
ರಾಮದುರ್ಗ, ಬೆಳಗಾವಿ ಜಿಲ್ಲೆ.
ಪು : 48, ಬೆಲೆ : 40/–

**ಬಸವಗುರು ಪ್ರಣೀತ**
ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)
ಪ್ರ: ಜಗಜ್ಯೋತಿ ಬಸವೇಶ್ವರ
ಅನುಭಾವ ಪೀಠ, ಮಹಂತೇಶ ನಗರ
ರಾಮದುರ್ಗ, ಬೆಳಗಾವಿ ಜಿಲ್ಲೆ.
ಪು : 84, ಬೆಲೆ : 50/–

# ಲೇಖಕರ ವಿಳಾಸ

**ಡಾ. ಸಿ. ಶಿವಕುಮಾರಸ್ವಾಮಿ**
ನಂ.6, 'ಶಿವಶಕ್ತಿ', 1ನೇ ಕ್ರಾಸ್
ಪಿ.ಎಫ್. ಬಡಾವಣೆ
ವಿಜಯನಗರ
ಬೆಂಗಳೂರು 560 040
ಮೊ: 98867 91256

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ ಆಯುರ್ವೇದ
ಚಿಕಿತ್ಸಾಲಯ, ಬಿ.ಹೆಚ್. ರಸ್ತೆ
ತುಮಕೂರು 572 102
ಮೊ: 98809 96196

**ಸ.ರಾ. ಸುಳಕೂಡೆ**
#1319, ಶ್ರೀ ಶಿವಪ್ರಸಾದ
ರಾಮ ತೀರ್ಥನಗರ
ಬೆಳಗಾವಿ 598015

**ಡಾ. ರಮಾ ವಿ. ಬೆಣ್ಣೂರ್‌ರವರು**
ನಂ.40, 8ನೇ ಮೇನ್
ಸರಸ್ವತಿಪುರಂ
ಮೈಸೂರು 570009
ಮೊ: 9945282346

ಹಿಂಬದಿ ಪುಟದ ಚಿತ್ರ

ಪ್ರಯಾಗ್‌ರಾಜ್ ಮಹಾಕುಂಭಮೇಳದಲ್ಲಿ ಜುನಾಗಡ್ ಅಖಾಡದಲ್ಲಿ ಮಹಾಮಂಡಳೇಶ್ವರರಾದ ಶ್ರೀ ಸ್ವಾಮಿ ಅವಧೇಶಾನಂದ ಗಿರಿಯವರೊಡನೆ ಪರಮಪೂಜ್ಯ ಜಗದ್ಗುರುಗಳು, ವಿವಿಧ ಮಠಾಧೀಶರುಗಳು ಹಾಗೂ ಇತರರಿದ್ದಾರೆ (3 ಫೆಬ್ರವರಿ 2025)



ಸುತ್ತೂರು ಶ್ರೀಗಳು ಪ್ರಯಾಗ್‌ರಾಜ್‌ನಲ್ಲಿ ಮಹಾಕುಂಭಮೇಳಕ್ಕೆ ತೆರಳಿದ್ದಾಗ ಅಲ್ಲಿಯ ಶ್ರೀ ಕಾಶಿ ಜಂಗಮವಾಡಿ ಮಠಕ್ಕೆ ಭೇಟಿ ನೀಡಿದ್ದರು. ಕಾಶಿ ಮತ್ತು ಸುತ್ತೂರು ಜಗದ್ಗುರುಗಳವರು, ವಿವಿಧ ಮಠಾಧೀಶರುಗಳು ಹಾಗೂ ಇತರರಿದ್ದಾರೆ (3 ಫೆಬ್ರವರಿ 2025)



ಪ್ರಯಾಗ್‌ರಾಜ್ ಮಹಾಕುಂಭಮೇಳದಲ್ಲಿ ಮಹಾಕುಂಭಮೇಳದಲ್ಲಿ ಪರಮಾರ್ಥ ನಿಕೇತನ ಆಶ್ರಮದಿಂದ ಏರ್ಪಡಿಸಿದ್ದ ಗಂಗಾರತಿಯಲ್ಲಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಿರುವುದು. ಆಶ್ರಮದ ಸಾಧ್ವಿ ಭಗವತಿ ಸರಸ್ವತಿಯವರು, ವಿವಿಧ ಮಠಾಧೀಶರುಗಳು ಹಾಗೂ ಇತರರಿದ್ದಾರೆ (2 ಫೆಬ್ರವರಿ 2025)




ಹೆಗ್ಗಡಹಳ್ಳಿ ಶ್ರೀ ನಂಜುಂಡೇಶ್ವರಸ್ವಾಮಿ ದೇವಸ್ಥಾನದ ಪುನರ್‌ನಿರ್ಮಿತ ಕಟ್ಟಡವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಗುರುಸ್ವಾಮಿ, ಗೌಡಿಕೆ ಶ್ರೀ ಹೆಚ್.ಆರ್. ಸಿದ್ಧೇಶ್, ಚಿಕ್ಕತುಪ್ಪೂರು, ಮಾದಾಪಟ್ಟಣ ಶ್ರೀಗಳು, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಮೂಡುಗೂರು ಶ್ರೀಗಳು, ಶ್ರೀ ಹೆಚ್.ಎಸ್. ನಂಜುಂಡಪ್ರಸಾದ್, ಶ್ರೀ ಕಬ್ಬಹಳ್ಳಿ ಮಹೇಶ್, ಶ್ರೀ ಮಾದೇಶ್ ಮೊದಲಾದರವರಿದ್ದಾರೆ (7 ಫೆಬ್ರವರಿ 2025)



ಗಾವಡಗೆರೆ ಓಂ ಶ್ರೀ ಗುರುಲಿಂಗಜಂಗಮದೇವರ ಮಠದ ಶ್ರೀ ನಟರಾಜ ಸ್ವಾಮಿಗಳ ಪಟ್ಟಾಧಿಕಾರ ಸುವರ್ಣ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಉದ್ಘಾಟಿಸಿದರು. ಶ್ರೀ ಜಿ.ಡಿ. ಹರೀಶ್‌ಗೌಡ, ಜಗದ್ಗುರು ಶ್ರೀ ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು, ಪಾಂಡೋಮಟ್ಟಿ ಶ್ರೀಗಳು ಮೊದಲಾದವರಿದ್ದಾರೆ (14 ಫೆಬ್ರವರಿ 2025)



ಬಿದನಗೆರೆ ಶ್ರೀ ಬಸವೇಶ್ವರ ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಮತ್ತು ಶ್ರೀ ರವಿಶಂಕರ್ ಗುರೂಜಿಯವರ ದಿವ್ಯ ಸಾನ್ನಿಧ್ಯದಲ್ಲಿ ನೂತನ ನವಗ್ರಹ ದೇವಸ್ಥಾನದ ಲೋಕಾರ್ಪಣೆಯನ್ನು ಸನ್ಮಾನ್ಯ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋತ್‌ರವರು ಉದ್ಘಾಟಿಸಿದರು. ಶ್ರೀ ವಿನಯ್ ಗುರೂಜಿ, ಡಾ. ಶ್ರೀ ಪ್ರಕಾಶನಾಥ್ ಸ್ವಾಮಿಗಳು, ಶ್ರೀ ಧನಂಜಯ ಗುರೂಜಿ, ಶ್ರೀ ಅಭಯ್ ಜೈನ್‌ರವರುಗಳಿದ್ದಾರೆ (23 ಫೆಬ್ರವರಿ 2025)




ಸೇಡಂನಲ್ಲಿ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಭಾರತ ವಿಕಾಸ ಸಂಗಮ ಹಾಗೂ ವಿಕಾಸ ಅಕಾಡೆಮಿಗಳ ಸಹಯೋಗದಲ್ಲಿ ಆಯೋಜಿಸಿದ್ದ 7ನೇ ಭಾರತೀಯ ಸಾಂಸ್ಕೃತಿಕ ಉತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಶ್ರೀ ಕೊತ್ತಲ ಬಸವೇಶ್ವರ ಸಂಸ್ಥಾನ ಮಠದ ಶ್ರೀಗಳು ಹಾಗೂ ಶ್ರೀ ಬಸವರಾಜ ಪಾಟೀಲ್ ಸೇಡಂರವರುಗಳಿದ್ದಾರೆ (4 ಫೆಬ್ರವರಿ 2025)



ತಿರುಮಕೂಡಲು ನರಸೀಪುರದಲ್ಲಿ ನಡೆದ 13ನೇ ಕುಂಭಮೇಳದಲ್ಲಿ ಪರಮಪೂಜ್ಯ ಜಗದ್ಗುರುಗಳವರೊಂದಿಗೆ ಕೈಲಾಸಾಶ್ರಮ, ಹರಿಹರಪುರ, ಆದಿಚುಂಚನಗಿರಿ, ಅವದೂತ ದತ್ತ ಪೀಠದ ಪೂಜ್ಯರುಗಳು ಹಾಗೂ ವಿವಿಧ ಮಠಾಧೀಶರುಗಳಿದ್ದಾರೆ (10 ಫೆಬ್ರವರಿ 2025)



ಸಂಶೆಟ್ಟಿಪುರ ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ಅಂಕ ಪ್ರತಿಷ್ಠಾಪನೆಯ ಪ್ರಯುಕ್ತ ಏರ್ಪಡಿಸಿದ್ದ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಮುಡುಕನಪುರ, ಹಣಕೋಳ, ರಾಗಿಬೊಮ್ಮನಹಳ್ಳಿ, ಕುದೇರು ಮಠ, ಸಾಲೂರು ಮಠ, ಕನಕಗುರುಪೀಠ, ಎಂ.ಎಲ್. ಹುಂಡಿ, ಕುಂದೂರು, ಚಿದರವಳ್ಳಿ ಮಠಗಳ ಶ್ರೀಗಳಿದ್ದಾರೆ (20 ಫೆಬ್ರವರಿ 2025)



ಪ್ರಯಾಗ್‌ರಾಜ್ ಮಹಾಕುಂಭಮೇಳದಲ್ಲಿ ನಿರಂಜನ ಅಖಾಡದಲ್ಲಿ ಸಾಧುಸಂತರಿಗೆ ಪರಮಪೂಜ್ಯ ಜಗದ್ಗುರುಗಳವರು ಭಂಡಾರ (ಪ್ರಸಾದ) ನೀಡುತ್ತಿರುವುದು. ಮಂಡಳೇಶ್ವರರಾದ ಶ್ರೀ ಸ್ವಾಮಿ ರವೀಂದ್ರ ಪುರಿಯವರು, ವಿವಿಧ ಮಠಾಧೀಶರುಗಳು ಹಾಗೂ ಇತರರಿದ್ದಾರೆ (3 ಫೆಬ್ರವರಿ 2025)

Registered with the Registrar of Newspapers in India Under No. 50622 / 1986
'Prasada' Monthly, Vol. 40 Issue No. 2, February 2025



ISSN 2583-7648

ಬಿಡಿ ಪ್ರತಿ : ರೂ.10/-

e-mail: prasada@jssonline.org ⋆ www.jssonline.org